# ಚಂದ್ರಹಾಸ

## ಮುನ್ನುಡಿ

ಈ ನಾಟಕ ಅಥವಾ ಈ ಹೆಸರಿನ ನಾಟಕ ೧೯೨೯ರಲ್ಲಿ ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ 'ರಂಗಭೂಮಿ' ಮಾಸ ಪತ್ರಿಕೆಯಲ್ಲಿ ಅಚ್ಚಾಗಿತ್ತು. ಅಚ್ಚುಮಾಡುವವರು 'ಮಧ್ಯರಂಗ'ಕ್ಕೆ ಸೇರಿದ್ದ ಸ್ವಲ್ಪ ಭಾಗವನ್ನೆ ಕೈಬಿಟ್ಟಿದ್ದರು. ಸಾಲದ್ದಕ್ಕೆ ಬೇರೆ ಅವರು ತೆಗೆದು ಕೊಂಡು ಹೋಗಿದ್ದ ಏಕಮಾತ್ರವಾಗಿದ್ದ ಹಸ್ತಪ್ರತಿಯೂ ಕಳೆದುಹೋಗಿದೆ ಎಂದು ತಿಳಿಸಿಬಿಟ್ಟರು.

ಹಸ್ತಪ್ರತಿಯನ್ನು ಅದರ ಕೊನೆಯ ಪಂಕ್ತಿಯ ಮಸಿ ಆರುವ ಮುನ್ನವೆ ನನ್ನಿಂದ ಕೊಂಡೊಯ್ದಿದ್ದರು. ನಾಟಕವನ್ನು ಒಂದು ಸಾರಿ ನಾನೆ ಸರಿಯಾಗಿ ಓದಿದ್ದೇನೊ ಇಲ್ಲವೊ? ತಿದ್ದುವ ಮಾತಂತಿರಲಿ! ಇನ್ನು ಅಚ್ಚಿನಲ್ಲಿ ಬಿಟ್ಟು ಹೋಗಿದ್ದ ಭಾಗವನ್ನು ಮತ್ತೊಮ್ಮೆ ಕಲ್ಪಿಸಿ ಸೇರಿಸಿ ಪ್ರಕಟಿಸುವ ಮನಸ್ಸಿದ್ದರೂ ಆಲಸ್ಯದಿಂದಲೊ ಮತ್ತೇನು ಕಾರಣದಿಂದಲೊ ಆ ಕೆಲಸ ಮಾಡಲಾಗಲಿಲ್ಲ. ಕ್ರಮೇಣ ನಾಟಕ ಮೂಲೆಗೆ ಬಿದ್ದು ಮರೆತುಹೋಯಿತೊ ಎನ್ನುವಂತಾಗಿತ್ತು.

ಅಂತೂ 'ಚಂದ್ರಹಾಸ' ಆಗ ಪುಸ್ತಕರೂಪದಲ್ಲಿ ಅಚ್ಚು ಕಾಣಲಿಲ್ಲ. ಹಾಗಾದದ್ದು ವಾಗ್ದೇವಿಯ ಕೃಪೆಯೆಂದೇ ಈಗ ಭಾಸವಾಗುತ್ತಿದೆ.

ಮೂವತ್ತೆರಡು ವರ್ಷಗಳ ತರುವಾಯ ನಾನು ೧೦೬೦ ರಲ್ಲಿ ನಿವೃತ್ತನಾದಮೇಲೆ, ಉನ್ನತ ಸ್ಥಾನದಲ್ಲಿರುವ ಬೆಂಗಳೂರಿನ ಹಿರಿಯ ಮಿತ್ರರೊಬ್ಬರು ಈ ನಾಟಕದ ಒಂದು ಪ್ರತಿಯನ್ನು ಪತ್ತೆಹಚ್ಚಿ ಕಳುಹಿಸಿಕೊಟ್ಟರು. ಆ ಪ್ರತಿಯಲ್ಲಿ ಅಚ್ಚುಮಾಡದೆ ಬಿಟ್ಟುಹೋಗಿದ್ದ ಭಾಗದ ಹಾಳೆಗಳು ದೊರೆತು ನನಗವರು ಕಳುಹಿಸಿದ್ದಾರೆ ಎಂದುಕೊಂಡು ಹಿಗ್ಗಿದೆ. ಆದರೆ ಓದಿ ನೋಡಿದಾಗ ನನ್ನ ಆಶೆಗೆ ಆಧಾರವಿರಲಿಲ್ಲ. ಆಗಲೂ ಅದನ್ನು ನನಗೆ ಮುಟ್ಟಿಸಲು ನಿಮಿತ್ತರಾದ ಇನ್ನೊಬ್ಬ ಮಿತ್ರರು ಏನಾದರು ತಿದ್ದುವುದಿದ್ದರೆ ತಿದ್ದಿ, ಬಿಟ್ಟಿದ್ದನ್ನೂ ಸೇರಿಸಿ, ನಾಟಕವನ್ನು ಅಚ್ಚುಹಾಕಿಸಿ ಎಂದು ಉತ್ಸಾಹಿಸಿದರು. ಆದರೆ ನಾಟಕವನ್ನು ತಿದ್ದುವ ದೃಷ್ಟಿಯಿಂದ ಓದಿದಾಗ ನನಗೆ ನಾಚಿಕೆಯಾಗುವ ಮಟ್ಟಿಗೆ ಜುಗುಪ್ಸೆಯುಂಟಾಯಿತು. ಸದ್ಯಃ ದೇವರ ದಯೆಯಿಂದ ಇದು ಆಗ ಇದ್ದ ರೂಪದಲ್ಲಿಯೆ ಪುಸ್ತಕವಾಗಿ ಪ್ರಕಟವಾಗಲಿಲ್ಲವಲ್ಲಾ ಎಂದು ಹರ್ಷಪಟ್ಟೆ: ಅಷ್ಟು ಹಸಿಹಸಿಯಾಗಿತ್ತು. ಲಕ್ಷ್ಮೀಶನ ಜೈಮಿನಿಭಾರತದ ಚಂದ್ರಹಾಸೋಪಾಖ್ಯಾನದ ಪದ್ಯ ಮತ್ತು ಪದ್ಯಭಾಗಗಳನ್ನು ಉಪಯೋಗಿಸಿಕೊಂಡಿದ್ದ ರೀತಿಯಂತೂ ಕೆಲವೆಡೆಗಳಲ್ಲಿ ಅತ್ಯಂತ ಹಾಸ್ಯಾಸ್ಪದವಾಗಿತ್ತು. ಅಲ್ಲದೆ ಷೇಕ್ಸ್ಪಿಯರ್ ಕವಿಯ ದುರಂತ ನಾಟಕಗಳ ಪ್ರಭಾವಾತೀರೇಕಕ್ಕೆ ಒಳಗಾಗಿ ಕಥೆಯಲ್ಲಿ ಸಂಭವಿಸಿದ್ದ ಮಾರ್ಪಾಡುಗಳಲ್ಲಿ ಬಹುಬಾಳು ನನ್ನ ಈಗಿನ 'ದರ್ಶನ'ಕ್ಕೆ ಹುಡುಗುಹುಡುಗಾಗಿ ನಗೆಗೀಡಾಗಿ ಅಭಾರತೀಯವಾಗಿ ತೋರಿತು.

ಈ ಎಲ್ಲಾ ಕಾರಣಗಳಿಂದ ನಾಟಕವನ್ನು ತಿದ್ದುವ ಭಯಂಕರ ಗೋಜಿಗೆ ಹೋಗದೆ, ಒಡವೆಯನ್ನು ತೇಪೆಹಾಕಿದಂತೆ ರಿಪೇರಿಮಾಡುವ ವೃಥಾ ಶ್ರಮವನ್ನು ತೊರೆದು, ಅದನ್ನು ಪ್ರತಿಭಾಜ್ವಾಲೆಯ ಮೇಲೆ ಕಲ್ಪನೆಯ ಮೂಷೆಯಲ್ಲಿಟ್ಟು ಕರಗಿಸಿ, ನನ್ನ ಈಗಿನ 'ದರ್ಶನ'ಕ್ಕೆ ಒಪ್ಪುವ ಭಾವಾಂಶ ಚಿಂತನಾಂಶ ಕಲ್ಪನಾಂಶ ರೂಪಾಂಶಗಳಲ್ಲಿ ಎರಕಹೊಯ್ದು.

ಅದನ್ನೊಂದು ಹೊಸ ಕೃತಿಯಾಗಿಯೆ ಮಾಡಿದ್ದೇನೆ. ಈ 'ಚಂದ್ರಹಾಸ' ಆ 'ಚಂದ್ರಹಾಸ'ದ ಸಾರಸಂಸ್ಕಾರ ಗಳನ್ನೊಳಗೊಂಡು ಮೂಡಿರುವ ಪುನರ್ಜನ್ಮೋಪಮ ಕೃತಿಯಾಗಿದೆ.

ಹಾಗೆ ಮಾಡಿದುದರ ಫಲವಾಗಿ ಅನೇಕ ಪರಿವರ್ತನೆಗಳಾಗಿವೆ, ದೃಶ್ಯ ಸಂಖ್ಯೆಯಲ್ಲಿ, ಭಾಷೆಯಲ್ಲಿ, ನಾಟ್ಯಛಂದಸ್ಸಿನಲ್ಲಿ; ಸಂವಾದವಿಧಾನದಲ್ಲಿ, ಲಕ್ಷ್ಮೀಶನ ಜೈಮಿನಿಭಾರತದ ಉಪಾಖ್ಯಾನದ ಭಾಗಗಳನ್ನು ಉಪಯೋಗಿಸಿಕೊಳ್ಳುವ ಔಚಿತ್ಯದಲ್ಲಿ; ಉದ್ದೇಶದಲ್ಲಿ, ಧ್ಯೇಯದಲ್ಲಿ, ದರ್ಶನದಲ್ಲಿ.

ನಾಟಕದ ಕೊನೆಯ ಅಂತರಿಕ್ಷ ದೃಶ್ಯದಲ್ಲಿ 'ನಾರದ ಭಕ್ತಿಸೂತ್ರ'ಗಳಲ್ಲಿರುವ ಭಕ್ತಿಲಕ್ಷಣ ಮತ್ತು ಭಕ್ತಮಹಿಮೆಯನ್ನು ಕುರಿತ ಅತ್ಯಂತ ಸುಮಧುರ ಸುಂದರಭವ್ಯವಾದ ಐದು ಸೂತ್ರಗಳನ್ನು ಭಕ್ತಿ, ಪ್ರಾರ್ಥನಾ ಮತ್ತು ಕೃಪಾದೇವಿಯರ ವಾಣಿಯಲ್ಲಿ ಹಂಚಿ ಅಳವಡಿಸಿದೆ. ಬಹುಶಃ ಆ ಹಂಚಿಕೆಯಲ್ಲಿಯೂ ಆಯಾ ದೇವಪಾತ್ರಗಳಿಗೆ ಅನ್ವಯವಾಗುವ ದರ್ಶನಧ್ವನಿಯನ್ನು ಸಹೃದಯೋತ್ತಮರು ಗುರುತಿಸಬಹುದೆಂದು ಭಾವಿಸುತ್ತೇನೆ.

**ಕುವೆಂಪು**
ಮೈಸೂರು
೧೭ - ೦೬ - ೧೯೬೩

# ಆದಿರಂಗಂ-ದೃಶ್ಯ ೧,೨

<u>ದೃಶ್ಯ೧</u>

*[ಅಂತರಿಕ್ಷದಲ್ಲಿ ಮೇಘಪಂಕ್ತಿಯ ಮಧ್ಯೆ ಬೆಳ್ಳಿಯುಡೆಯ ದೇವಿಯೊರ್ವಳು ಮೈದೋರಿ ಹಾಡುತ್ತಾಳೆ. ಭಕ್ತಿದೇವತಾ ರೂಪಿಗೆ ಅನುರೂಪವಾದ ವಸನಭೂಷಣ ಕುಸುಮಮಾಲಾದಿ ಚಿಹ್ನೆಗಳಿಂದ ಶೋಭಿಸುತ್ತಾಳೆ. ಭಕ್ತಿ ನೃತ್ಯಭಂಗಿಯ ನ್ನಭಿನಯಿಸುತ್ತಾಳೆ.]*

**ಭಕ್ತಿದೇವಿ:** - ಲೋಕವನು ನಾಕಕ್ಕೆ ಬೆಸೆಯೆ
ನಾಕವನು ಲೋಕಕ್ಕೆ ಹೊಸೆಯೆ
ಐತಂದೆ ನಾ ಭಕ್ತಿದೇವಿ!
*[ಭಕ್ತಿದೇವಿ ಬೂಲೋಕದ ಕಡೆ ನೋಡತೊಡಗುತ್ತಾಳೆ. ಅವಳ ಕೆಳಗಡೆಯಿಂದ ಗಾನ ಕೇಳಿಬರುತ್ತದೆ. ಪಚ್ಚೆಯುಡೆ ಯ ಪ್ರಾರ್ಥನಾದೇವಿ ಮೇಲಕ್ಕೇರಿ ಬಂದು ಹಾಡುತ್ತಾಳೆ.]*

**ಪ್ರಾರ್ಥನಾದೇವಿ:** - ಪೃಥಿವಿಕೌಯಿಂದುದಿಸಿ ಏರಿ
ಭಗವಂತನಡಿಯರಸಿ ಹಾರಿ
ಬಂದೆ ನಾ ಪ್ರಾರ್ಥನಾದೇವಿ!

*[ಭಕ್ತಿ ಮತ್ತು ಪ್ರಾರ್ಥನಾದೇವಿಯರಿಬ್ಬರೂ ಕತ್ತೆತ್ತಿ ಮೇಲೆ ನೋಡತೊಡಗುತ್ತಾರೆ. ಅತ್ತಣಿಂದ ಗಾನ ಕೇಳಿಸುತ್ತದೆ. ಚಿನ್ನದುಡೆಯ ಕೃಪಾದೇವಿ ಮೇಲುಗಡೆಯಿಂದ ಅವತರಿಸಿ ಬಂದು ಹಾಡುತ್ತಾಳೆ.]*

**ಕೃಪಾದೇವಿ:** - ಭಗವಂತನಡಿಯಿಂದೆ ಹೊಮ್ಮಿ
ಪೃಥಿವಿಯೆಡೆಗವತರಿಸೆ ಚಿಮ್ಮಿ
ಇಳಿದೆನೈ ನಾ ಕೃಪಾದೇವಿ!
*[ಮೂವರು ಒಬ್ಬರೊಬ್ಬರ ಕೈವಿಡಿದು ವರ್ತುಲನೃತ್ಯವೆಸಗುತ್ತಾರೆ.]*

**ಭಕ್ತಿದೇವಿ:** - ಜನ್ಮವನಾಂತಿದೆ ವಿಭೂತಿಯೊಂದು
ಭಕುತಿಯ ಮೆರೆಯಲು ಭೂಮಿಯೊಳಿಂದು!

**ಪ್ರಾರ್ಥನಾದೇವಿ:** - ಒದಗಿಹ ಅಳಲನು ದೇವನಿಗರುಹೆ
ತಿರೆಯಿಂದೇರುತ ನಾನೈತರುವೆ!

**ಕೃಪಾದೇವಿ:** - ಭಗವತ್ ಕೃಪಾಶಕ್ತಿಯನಾಂತು
ಇಳಿದೆನ್ ವಿಭೂತಿರಕ್ಷೆಗೆ ನೋಂತು!
*[ನರ್ತನ ವಿರಾಮವಾಗುತ್ತದೆ.]*

**ಪ್ರಾರ್ಥನಾದೇವಿ:** - ಅಕ್ಕ, ಅವನಿಂದು ಮಹಾರೌದ್ರಸಂಕಟಕೆ
ಸಿಲುಕುವನು ಎಂದರಿತು ದುಃಖಕಾತರೆಯಾಗಿ
ನಿನ್ನ ಬೇಡಲು ಓಡಿಬಂದೆ.

**ಕೃಪಾದೇವಿ:** - ತಂಗಿ, ಅಳಲ್ವೇಡ; ಈಶ್ವರಕೃಪೆಗೆ
ನಾನಾ ಮುಖಂಗಳೊಳವು; ನಖಂಗಳುಂ ಒಳವು!
ಧರೆಗೆ ಮೈದೋರಲಾತನಾ ಭಕ್ತಿವಿಭೂತಿ
ಕ್ಲೇಶಮುಂ ಕಷ್ಟಮುಂ ದುಃಖಮುಂ ದಾರಿದ್ರ್ಯಮುಂ
ನೆರಮಪ್ಪುವಲ್ತೆ? ರಕ್ಷೆ ನಾನಿಹೆ; ಭಯಂ ಮಾಣ್;
ತೋರ್ಪೆನ್ ಬಾ; ಮುಂದಪ್ಪುದನ್ ಕಾಣ್!

**ಭಕ್ತಿದೇವಿ:** - ಕೇರಳದವನಿಪನ ಸಿರಿವಸಿರಿನಲಿ ಬಂದು,
ತಂದೆ ತಾಯ್ ನೆಲ ಸಿರಿಗಳೆಲ್ಲಮಂ ಕಳೆದುಕೊಂಡು,
ದಾದಿಯೊರ್ವಳ ಅಕ್ಕರೆಯ ಸಾಹಸದಿ ರಕ್ಷೆವೆತ್ತು,
ಅರಿನೃಪರ ಖಡ್ಗದಿಂ ಪಾರಾಗಿ,
ಕಡೆಗೆ ಕುಂತಳನಗರ ವೀಥಿಯಲಿ ಮುಗಿಯುವುದೆ

ಅವನ ಬಾಳ್? ವಿಧಿಲೀಲೆಯಂ ಕಾಣ್.
ಅವನನೆಂತು, ಎಲ್ಲಿಂದಮೆಲ್ಲಿಗೆ, ಒಯ್ಯುವ
ಉಪಾಯಮಂ ತಂದೊಡ್ಡುತಿರ್ಪುದಪಾಯದೋಲ್?

**ಕೃಪಾದೇವಿ:** - ಬನ್ನಿ, ಕುಂತಳನಗರಕಿಳಿಯುವಂ ಭಕ್ತಸನ್ನಿಧಿಗೆ;
ಅರಳಿಸೆ ವಿಭೂತಿಯಂ ನೆರವಾಗುವಂ ವಿಧಿಗೆ!
*[ಮೂವರು ದೇವಿಯರೂ ನೃತ್ಯಭಂಗಿಯಲ್ಲಿ ಹಾಡುತ್ತಾ ಕೆಳಗಿಳಿದು ಮರೆಯಾಗುತ್ತಾರೆ.]*

*ಪರದೆ ಬೀಳುತ್ತದೆ.*

*

<u>ದೃಶ್ಯ೨</u>

*[ಕುಂತಳನಗರದಲ್ಲಿ ಒಂದು ಉದ್ಯಾನದ ಬೀದಿ. ತುಸು ದೂರದಲ್ಲಿ ಹರಿಯುತ್ತಿರುವ ತೊರೆಯೊಂದರ ದೃಶ್ಯ ಕಾಣುತ್ತ ದೆ. ಒಂದು ಮಾವಿನಮರದ ನೆರಳಿನಲ್ಲಿ ಹರವಿದ್ದ ಮಳಲ ರಾಶಿಯಮೇಲೆ ಕೆಲವು ಹುಡುಗರು ಮಳಲಾಟವಾಡುತ್ತಿ ರುತ್ತಾರೆ. ಬೇರೆ ಬೇರೆ ಗುಂಪುಗಳಾಗಿ, ಒಂದು ಗುಂಪಿನಲ್ಲಿ ಮೂವರು ಹುಡುಗರು ಮಳಲಿನಲ್ಲಿ ಬರೆಯುತ್ತಿದ್ದಾರೆ. ಅ ದರಲ್ಲಿ ಒಬ್ಬನು ಮಳಲನ್ನು ಗುಡ್ಡೆಹಾಕಿ ಗೋಪುರದ ಹಾಗೆ ಮಾಡಿ, ಎಲೆ ಹೂವು ಮುಡಿಸುತ್ತಿರುತ್ತಾನೆ.]*

**೧ನೆಯ ಬಾಲಕ:** - ನಾನೊಂದು ಮಾವಿನಹಣ್ಣು ಬರೆದೆ; ನೋಡಿ ಬನ್ನಿ.

**೨ನೆಯ ಬಾಲಕ:** - ನಾನೊಂದು ಹಕ್ಕಿ ಬರೆದೆ; ಹಾರಿಹೋಗುತ್ತಿದೆ.
ನೋಡಿ, ನೋಡಿ! ಓಡಿಬನ್ನಿ!

**೩ನೆಯ ಬಾಲಕ:** - ನಾನೊಂದು ಗುಡಿ ಕಟ್ಟಿದ್ದೇನೆ. ಪೂಜೆಗೆ ಬನ್ನಿ!

**೧ನೆಯ ಬಾಲಕ:** - ಮೊದಲು ನನ್ನ ಹಣ್ಣು ನೋಡು ಬಾ.

**೨ನೆಯ ಬಾಲಕ:** - ನನ್ನ ಹಕ್ಕಿ?
*[ಮೂರನೆಯ ಬಾಲಕನು ಬಂದು ಅವರಿಬ್ಬರ ಚಿತ್ರಗಳನ್ನೂ ನೋಡಿ]*

**೩ನೆಯ ಬಾಲಕ:** - ನಿನ್ನ ಹಕ್ಕಿಗೆ ಕಣ್ಣೆ ಇಲ್ಲ; ಅವನ ಹಣ್ಣಿಗೆ ಬಣ್ಣವೆ ಇಲ್ಲ.

**೧ನೆಯ ಬಾಲಕ:** - ನಿನ್ನ ಗುಡಿಗೆ ದೇವರೆ ಇಲ್ಲ.

**೩ನೆಯ ಬಾಲಕ:** - ದೇವರು ನಮ್ಮ ಹೊಸ ತಮ್ಮನ ಬಾಯಲ್ಲಿಯೆ ನೆಲಸಿದ್ದಾನೆ. ಅವನು ಬಂದೊಡನೆ ಆ ಬಟ್ಟಕಲ್ಲನಿಟ್ಟು ಪೂಜೆಮಾಡಿದರೆ ನಮಗೆಲ್ಲ ಸಿಹಿ ನೈವೇದ್ಯ ದೊರೆಯುತ್ತದೆ.

**೨ನೆಯ ಬಾಲಕ:** - ನೈವೇದ್ಯ ಯಾರು ಕೊಡುತ್ತಾರೆ?

**೩ನೆಯ ಬಾಲಕ:** - ಅವನು ಭಕ್ತಿಯಿಂದ ಕೈನೀಡಿದರೆ ನೈವೇದ್ಯ ಬರುತ್ತದೆಕಣೊ!

**೧ನೆಯ ಬಾಲಕ:** - ಯಾರು ಹಾಕುತ್ತಾರೊ, ಅವನ ಕೈಗೆ?

**೩ನೆಯ ಬಾಲಕ:** - ಯಾರು ಹಾಕುತ್ತಾರೊ, ನನಗೆ ಗೊತ್ತಿಲ್ಲ. ಅಂತೂ ಮೊನ್ನೆ ನಾವು ಪೂಜೆ  ಮಾಡಿ ಕೀರ್ತನೆ ಹಾಡಿದಮೇಲೆ ಅವನು ಆಕಾಶಕ್ಕೆ ಕೈನೀಡಿ ನಮಗೆಲ್ಲ ಸಿಹಿ ಹಂಚಿದನೊ!

**೧ನೆಯ ಬಾಲಕ:** - *(ಹಾದಿಯ ಕಡೆ ನಿರೀಕ್ಷಿಸುತ್ತ)* ಅವನು ಯಾಕೊ ಇನ್ನೂ ಬರಲಿಲ್ಲ? ನಮ್ಮೆಲ್ಲರಿಗಿಂತಲೂ ಮೊದಲೆ ಬಂದಿರುತಿದ್ದ ಈ ಮಳಲದಿಣ್ಣೆ!

**೩ನೆಯ ಬಾಲಕ:** - ಪಾಪ, ಅವನ ಅಜ್ಜಿಗೆ ಏನೊ ರುಜೆಯಂತೆ ಕಣೊ! ಅವಳ ಶುಶ್ರೂಷೆ ಮುಗಿಸಿಬರುವುದೆ ಹೊತ್ತಾಗುತ್ತದೆ.
*[ಹಾದಿಯ ಕಡೆ ನೋಡುತ್ತ ನಿಲ್ಲುತ್ತಾನೆ.]*

**೨ನೆಯ ಬಾಲಕ:** - ಅವನಿಗೆಲ್ಲಿ ಸಿಕ್ಕಿತೊ ಆ ದೇವರು?

**೩ನೆಯ ಬಾಲಕ:** - ಅಂದು, ಓ ಅಲ್ಲಿ, ಆ ಹೊಳೆಯ ಮರಳಲ್ಲಿ, *(ಕೈ ತೋರಿಸುತ್ತಾ)* ನಾವೆಲ್ಲ ಒಟ್ಟಿಗೆ ಆಟವಾಡುತ್ತಿದ್ದಾಗ ಸಿಕ್ಕಿತು. ದುಂಡಗಿದೆ, ನುಣ್ಣಗಿದೆ, ಕರ್ರಗಿದೆ, ಕತ್ತಲೆ ಮೊಟ್ಟೆಹಾಗೆ! ಅವನಿಗೆ ಅದನ್ನಿಟ್ಟುಕೊಳ್ಳಲೂ ಎಡೆಯಿಲ್ಲ. ಕೌಂಕುಳಲ್ಲಿಡುತ್ತಾನೆ. ಬಾಯಲ್ಲಿಯೂ! ಅದು ಸಾಲಗ್ರಾಮ ಶಿಲೆಯಂತೆ ಕಣೋ!

**೨ನೆಯ ಬಾಲಕ:** - ನನಗೂ ಒಂದು ಸಿಕ್ಕಿದ್ದರೆ! ಬೇಕುಬೇಕಾದಾಗ, ತುಡು ಬಂದಕೂಡಲೆ, ಸಿಹಿ ತರಿಸಿ. . . .*(ದೂರ ನೋಡಿ ಕಣ್ಣರಳಿಸಿ)* ಓ ಅಲ್ಲೆ ಬರುತಿದಾನೆ!

**ಎಲ್ಲರೂ:** - ಬಂದಾ ಬಂದಾ ಹೊಸತಮ್ಮ!
ಬಂದಾ ಬಂದಾ ಹೊಸತಮ್ಮ!
*(ಕುಣಿಯುತ್ತಾ ಚಪ್ಪಾಳೆ ಹಾಕುತ್ತಾರೆ.)*

*[ಕೋಗಿಲೆಗಳೆರಡು ಕೂಗತೊಡಗುತ್ತವೆ. ಒಂದಕ್ಕೊಂದು ಮಾರುತ್ತರ ಉಲಿಯುವಂತೆ. ಚಂದ್ರಹಾಸನು ಹುಡುಗರೆಲ್ಲರೂ ನೋಡುತ್ತಿದ್ದ ದಿಕ್ಕಿನ ಕಡೆಯಿಂದ 'ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!' ಎಂದು ಕುಣಿಯುತ್ತ ಹಾಡು*

*ತ್ತಾ ಕೈಚಪ್ಪಾಳೆ ತಟ್ಟುತ್ತಾ ಓಡೋಡಿ ಬರುತ್ತಾನೆ. ಹುಡುಗರೆಲ್ಲರೂ ಅವನನ್ನು ನೋಡಿ ಸಂತೋಷವುಕ್ಕಿ ಮುತ್ತುತ್ತಾರೆ. ಎಲ್ಲರೂ ಅವನನ್ನೆ ಅನುಕರಿಸಿ 'ಗೋವಿಂದ ಶ್ರೀಹರಿ ಮುಕುಂದ ಮುರಾರಿ' ಎಂದು ಹಾಡುತ್ತ ಕುಣಿಯುತ್ತಾರೆ; ಚಪ್ಪಾಳೆ ಹಾಕುತ್ತ ಸುತ್ತುತ್ತಾರೆ... ಇದ್ದಕ್ಕಿದ್ದಹಾಗೆ ಬಾಲಕರೆಲ್ಲ ಸ್ತಬ್ಧರಾಗಿ ನಿಂತು ಅಚ್ಚರಿಯ ಬಿಚ್ಚುಗಣ್ಣುಗಳಿಂದ ಬೀದಿಯ ಕಡೆಗೆ ನೋಡತೊಡಗುತ್ತಾರೆ. ರಾಜಭಟರಿಬ್ಬರು ಬೀದಿಯಲ್ಲಿ ಹಾದು ಹೋಗುತ್ತಾರೆ. ಅವರ ಹಿಂದೆ ಸ್ವಲ್ಪ ದೂರದಲ್ಲಿ, ದುಷ್ಟಬುದ್ಧಿ, ಬಾಲಕ ಮದನ, ಬಾಲಿಕೆ ವಿಷಯೆ, ಪರೋಹಿತ ಗಾಲವ ಇವರು ಇನ್ನೂ ರಂಗಪ್ರವೇಶ ಮಾಡದೆಯೆ ಕಾಣಿಸುತ್ತಾರೆ - ಚಂದ್ರಹಾಸಾದಿ ಬಾಲಕರಿಗೆ.]*

**ಚಂದ್ರಹಾಸ:** - ಯಾರೊ ಅವರು? ಏಕೆ ಎಲ್ಲರೂ ಸುಮ್ಮನೆ ನಿಂತುಬಿಟ್ಟಿರಿ?

**೧ನೆಯ ಬಾಲಕ:** - *(ಕೆಳದನಿಯಿಂದ)* ದುಷ್ಟಬುದ್ಧಿಯೊ, ದುಷ್ಟಬುದ್ಧಿ!

**ಚಂದ್ರಹಾಸ:** - ಹಾಗೆಲ್ಲ ಬೈಯಬಾರದು, ಅಣ್ಣ.

**೨ನೆಯ ಬಾಲಕ:** - ಅವನ ಹೆಸರು ಕಣೊ ಅದು; ಬಯ್ಗುಳವಲ್ಲ.

**೩ನೆಯ ಬಾಲಕ:** - ಅವರು ನಮ್ಮ ರಾಜ್ಯದ ಮಂತ್ರಿ ಕಣೊ. ಅವರ ಹೆಸರೇ ದುಷ್ಟಬುದ್ಧಿ. ನಮ್ಮಯ್ಯ ಅವರ ಬಳಿ ಕರಣಿಕರೊ. ಅವರೆಂದರೆ ಎಲ್ಲರೂ ಹೆದರಿ ಸಾಯುವರಂತೆ.

**೨ನೆಯ ಬಾಲಕ:** - ಅವನ ಹೆಸರು ಮಾತ್ರವಲ್ಲೋ, ನಿಜವಾಗಿಯೂ ದುಷ್ಟಬುದ್ಧಿಯಂತೆ ಕಣೊ ಅವನು.

**೩ನೆಯ ಬಾಲಕ:** - ಹಾಗೆಲ್ಲ ಹೇಳದಿರೊ? ಎಲ್ಲಿಯಾದರೂ ಕೇಳಿದರೆ ನಿನ್ನ ಸೀಳಿಸಿ ತೋರಣ ಕಟ್ಟಿಸಿಬಿಡುತ್ತಾರೆ; ತಿಳಿಯಿತೆ?

**ಚಂದ್ರಹಾಸ:** - ಅವರ ಬೆಂಬಳಿ ಬರುವ ಆ ಅಣ್ಣ ತಂಗಿ? ಅವರ ಮಕ್ಕಳೆ? ಕರೆದರೆ ನಮ್ಮೊಡನೆ ಬರುವರೇನೊ ಆಟಕ್ಕೆ?

**೧ನೆಯ ಬಾಲಕ:** - *(ತುಟಿಗೆ ಕೈವೆರಳಿಟ್ಟು ಬೆರಗುಬಡಿದಂತಾಗಿ)* ಅವರು? ನಮ್ಮೊಡನೆ? ಆಟಕ್ಕೆ? ಎಂದಾದರೂ ಉಂಟೆ? ಮಂತ್ರಿಯ ಮಕ್ಕಳು ಬೀದಿಯ ಹುಡುಗರೊಡನೆ ಆಟಕ್ಕೆ ಬರುತ್ತಾರೆಯೆ?

**೩ನೆಯ ಬಾಲಕ:** - ಮದನ ಅಂತೆ ಕಣೊ ಅವನ ಹೆಸರು; ಅವನ ತಂಗಿಯ ಹೆಸರು ವಿಷಯೆ ಅಂತೆ. ನಮ್ಮಯ್ಯ ಹೇಳಿದರೊ ನನಗೆ.

**೧ನೆಯ ಬಾಲಕ:** - ದೊಡ್ಡವರ ಹೆಸರು ಹೇಳಬಾರದಂತೆ ಕಣೊ. ಅವರಿಗೆ ಮೈಲಿಗೆಯಾಗುತ್ತದಂತೆ.

**ಚಂದ್ರಹಾಸ:** - ಅವರು ಯಾರೊ ಎಲ್ಲರಿಗೂ ಹಿಂದೆ ಬರುವವರು?

**೨ನೆಯ ಬಾಲಕ:** - ಗಾಲವ ಅಂತ ಕಣೊ ಅವರ ಹೆಸರು. ರಾಜರ ಪುರೋಹಿತರು.

*[ದುಷ್ಟಬುದ್ಧಿ, ಮದನ, ವಿಷಯೆ, ಗಾಲವ ಬರುತ್ತಾರೆ. ದುಷ್ಟಬುದ್ಧಿ ಅತ್ತಿತ್ತ ದಿಟ್ಟಿ ಹಾಯಿಸದೆ ಶ್ರೀಮದ್ ಗಾಂಭೀರ್ಯಕ್ಕೆ ಊನ ಬರಬಾರದೆಂಬಂತೆ ಬಾಲಕರ ಗುಂಪನ್ನು ನೋಡಿಯೂ ಗಮನಿಸದೆ ನಿರ್ಲಕ್ಷಿಸಿ ಮುಂಬರಿಯುತ್ತಾನೆ. ಮದನ. ವಿಷಯೆ ಇಬ್ಬರೂ ಗಾಲವ ನಿಂತುದನ್ನು ನೋಡಿ ನಿಲ್ಲುತ್ತಾರೆ. ಗಾಲವನು ಕಣ್ಣರಳಿಸಿ ನಟ್ಟ ನೋಟದಿಂದ ಹುಡುಗರ ಗುಂಪಿನ ನಡುವೆ ನಿಂತಿದ್ದ ಚಂದ್ರಹಾಸನನ್ನು ನೋಡುತ್ತಿರುತ್ತಾನೆ. ದುಷ್ಟಬುದ್ಧಿ ನಿಂತು ತಿರುಗಿನೋಡಿ ಪ್ರಶ್ನಿಸುತ್ತಾನೆ.]*

**ದುಷ್ಟಬುದ್ಧಿ:** - ನಿಂತೇನ ನೋಡುತಿರುವಿರಿ, ಪುರೋಹಿತರೆ?

**ಗಾಲವ:** - ಅಲ್ಲಿ ನಿಂತು ನಮ್ಮನೆ ನೋಡುತಿಹ ಬಾಲಕರ
ಗುಂಪಿನಲಿ, ತಿಂಗಳನೆ ನಗುವ ಕಾಂತಿಯ ಮೊಗದ
ಬಾಲಕನದೊರ್ವನಂ, ನೋಡು, ಅರಿಲ್ಗಳ ನಡುವೆ
ಎಸೆವ ತಣ್ಗದಿರನೊಲು ನಿಂತಿಹನು ಮನಮೋಹಿಸಿ!

**ದುಷ್ಟಬುದ್ಧಿ:** - ಅದರೊಳೇನತಿಶಯಂ, ಪುರೋಹಿತರೆ?

**ಗಾಲವ:** - ಆರ ಸುತನೀ ತರಳ? ಎಲ್ಲಿಂದ ಬಂದಿಹನೊ?
ಹಿಂದಾವಗಂ ಕಂಡ ನೆನಹಿಲ್ಲವೆನಗೆ.

**ದುಷ್ಟಬುದ್ಧಿ:** - ಈ ಪರಿಯೊಳೆನಿತಿಲ್ಲ
ಅನಾಥರಾಗಿಹ ಬಾಲರೀ ಮಹಾಪುರದಲ್ಲಿ?
ಎತ್ತಣವನಕ್ಕೆ! ಆರ ಸುತನಕ್ಕೆ!
ರಾಜಕಾರ್ಯದೊಳಿರ್ಪ ನಮಗೇಕದರ ಚಿಂತೆ?

**ಗಾಲವ:** - ಅನಾಥ ಮಾತ್ರನೆಂದೆಣಿಸದಿರು ನೀನಾತನಂ. ಕಾಣ್,
ರಾಜಚಿಹ್ನೆಗಳೆಂತು ಶೋಭಿಪುವು ಮೆಯ್ಯಲ್ಲಿ?
ಮೊಗದ ತೇಜವ ನೋಡು. ಪಾರ್ವನಾಂ ಪಾರ್ದು ಪೇಳ್ವನ್:
ಎಂದಿರ್ದೊಡಂ ಈ ಪೊಳಲ್ಗೆ, ಈ ಕುಂತಳಾಧೀಶನ್
ಆಳ್ವ ನಮ್ಮೀ ಪೊಡವಿಗೆ, ಒಡೆಯನಹನ್ ಈತನ್.
ಚಾರುತರ ಲಕ್ಷಣಗಳಿಂ ಮೆರೆಯುತಿರ್ಪೀತನಂ
ನೀನಿರಿಸಿಕೊಂಡು ರಕ್ಷಿಪುದು; ದರೆಗೊಳ್ಳಿತಕ್ಕುಂ.

**ದುಷ್ಟಬುದ್ಧಿ:** - *(ಚಿಂತಿಸಿ, ಹುಬ್ಬುಗಂಟಿಕ್ಕಿ, ಮತ್ತೆ ಪ್ರಸನ್ನವದನಾಗಿ)*
ಕರೆದು ಕೇಳಿಮ್, ಆತನಾರ್ಗೆಂದು.

*[ಮಕ್ಕಳೆಲ್ಲ ದುಷ್ಟಬುದ್ಧಿ ತಮ್ಮನ್ನು ಗಮನಿಸಿ, ತಮ್ಮ ಕಡೆಗೆ ತಿರುಗಿದುದನ್ನು ನೋಡಿ ಹೆದರಿ ಹಿಂಜರಿಯುತ್ತಾರೆ. ಚಂದ್ರಹಾಸನು ಮಾತ್ರ ಮುಗುಳುನಗೆಮೊಗನಾಗಿ ನಿಂತಲ್ಲಿಯೆ ನಿಂತಿರುತ್ತಾನೆ.]*

**ಗಾಲವ:** - ಮಗೂ, ಇಲ್ಲಿ ಬಾ *(ಎಂದು ಕೈಸನ್ನೆ ಮಾಡುತ್ತಾನೆ.)*
*[ಚಂದ್ರಹಾಸ ಹತ್ತಿರಕ್ಕೆ ಬರುತ್ತಾನೆ. ವಿಷಯೆ ಮದನರು ಅವನನ್ನು ಪ್ರಶಂಸೆಯಿಂದ ನೋಡುತ್ತ ಸುತ್ತುಗಟ್ಟಿ ನಿಲ್ಲುತ್ತಾರೆ.]*
ಮಗೂ, ನೀನಾರವಂ?

**ಚಂದ್ರಹಾಸ:** - ನಾನರಿಯೆ.

**ಗಾಲವ:** - ನಿನ್ನ ಹೆಸರು?

**ಚಂದ್ರಹಾಸ:** - ನನಗೆ ಗೊತ್ತಿಲ್ಲ.

**ಗಾಲವ:** - ನಿನ್ನ ತಂದೆ?

**ಚಂದ್ರಹಾಸ:** - *(ತಲೆಯಲ್ಲಾಡಿಸುತ್ತಾನೆ.)*

**ಗಾಲವ:** - ತಾಯಿ?

**ಚಂದ್ರಹಾಸ:** - *(ಮತ್ತೆ ತಲೆಯಲ್ಲಾಡಿಸಿ ಕಣ್ಣೊರಸಿಕೊಳ್ಳುತ್ತಾನೆ.)*

**ಮದನ:** - *(ವಿಷಯೆಯ ಕಿವಿಯಲ್ಲಿ)* ಯಾರೂ ಇಲ್ಲವಂತೆ ಕಣೇ ಅವನಿಗೆ!

**ವಿಷಯೆ:** - ನಮ್ಮೊಡನೆ ಬರುವಂತೆ ಹೇಳೊ.

**ಮದನ:** - ಸುಮ್ಮನಿರೆ; ಅಪ್ಪಯ್ಯನಿಗೆ ಕೇಳಿಸೀತು!

**ವಿಷಯೆ:** - *(ತನ್ನೊಳಗೆ)* ಛೆ, ಪಾಪ! *(ಎಂದು ತನ್ನ ಕೈಯಲ್ಲಿದ್ದ ರತ್ನಾಭರಣ ನೋಡುತ್ತಾಳೆ.)*

**ಗಾಲವ:** - *(ಅವನ ತಲೆಸವರಿ ಸಂತೈಸುತ್ತಾ)* ನಿನಗುಣಿಸನಿಕ್ಕುವರಾರು?

**ಚಂದ್ರಹಾಸ:** - ನನ್ನಜ್ಜಿ.

**ಗಾಲವ:** - ಆರಾಕೆ? ಎಲ್ಲಿಹಳು?

**ಚಂದ್ರಹಾಸ:** - *(ದೂರಕ್ಕೆ ಕೈತೋರಿಸಿ)* ಓ ಅಲ್ಲಿ!

**ದುಷ್ಟಬುದ್ಧಿ:** - ಪುರೋಹಿತರೆ, ಈಗಿರಲಿ. ವಿಚಾರಿಸಿದರಾಯ್ತು ಆಮೇಲೆ ಹೊತ್ತಾಯ್ತು ರಾಜಕಾರ್ಯಕೆ, ಬನ್ನಿ. *(ಎಂದು ಸರ್‍ರನೆ ತಿರುಗಿ ಹೊರಡುತ್ತಾನೆ.)*

**ಮದನ:** - ಬಾ, ತಂಗಿ; ಅಪ್ಪಯ್ಯ ಹೋದರು. *(ಓಡುತ್ತಾನೆ.)*

**ವಿಷಯೆ:** - *(ಬೇಗನೆ ತನ್ನ ಕೈಯ ರತ್ನದ ಹೂವನ್ನು ಚಂದ್ರಹಾಸನ ಕೈಗಿತ್ತು ಓಡುತ್ತಾಳೆ ಅಣ್ಣಯ್ಯನ ಹಿಂದೆ.)*

**ಗಾಲವ:** - *(ಮುಗುಳುನಗೆಯಿಂದ ಎಲ್ಲವನ್ನೂ ನೋಡುತ್ತಾ)*
ವತ್ಸ, ನಿನಗೆ ಶ್ರೀಹರಿಯ ರಕ್ಷೆಯಿದೆ!
ನಿನ್ನ ಮುಖಕಮಲದಲಿ ಭಕ್ತಿ ಮನೆಮಾಡಿಹಳು!
ಭಗವತ್ ಕೃಪೆ ಕಾಪಾಡಲಿ!
*[ಎಂದು ನಿಂತಿದ್ದ ಚಂದ್ರಹಾಸನನ್ನೆ ನೋಡುತ್ತಾ ನೋಡುತ್ತಾ ಹೊರಡುತ್ತಾನೆ.]*

**೧ನೆಯ ಬಾಲಕ:** - *(ಓಡಿಬಂದು)* ಆರಿತ್ತರೀ ಹೂವ?

**ಚಂದ್ರಹಾಸ:** - ಆ ಹುಡುಗಿ.

**೨ನೆಯ ಬಾಲಕ:** - ರನ್ನದಲಿ ಕೆತ್ತಿಹುದೊ!

**ಚಂದ್ರಹಾಸ:** - *(ತಟಕ್ಕನೆ ಏನನ್ನೊ ಆಲಿಸಿದಂತೆ ಕಿವಿಗೊಟ್ಟು ಕೇಳುತ್ತಾನೆ.)*
ಅದೇನದಾ ಗಾನ? ಎತ್ತಣಿಂ ಬರುತಿಹುದು?
ಕೋಗಿಲೆಯ ದನಿಮೀರಿ, ಗಿಳಿಗಳುಲಿಯಂ ಮೀರಿ?
ಆಃ ಏನಿಂಪು! *(ಬಾನೆಡೆಗೆ ಮೊಗವೆತ್ತಿ ನಿರ್ನಿಮೇಷನಾಗಿ ನಿಲ್ಲುತ್ತಾನೆ.)*

**೩ನೆಯ ಬಾಲಕ:** - ಆವ ಗಾನವೊ? ನಮಗೇನೂ ಕೇಳಿಸದು!

**೧ನೆಯ ಬಾಲಕ:** - *(ಚಂದ್ರಹಾಸ ನಿಷ್ಪಂದನಾಗಿ ಬಾನತ್ತ ಮೊಗನಾಗಿ ಎವೆಯಿಕ್ಕದೆ ನಿಂತುದಕ್ಕೆ ಬೆಚ್ಚಿ)*
ಏನಾಯಿತೊ ನಿನಗೆ? ಏಕಿಂತು ನಿಂತೆ?

**೨ನೆಯ ಬಾಲಕ:** - ಆಗಸದೊಳೇನನೋ ನೋಡುತಿಹನು!

**ಚಂದ್ರಹಾಸ:** - *(ತಟಕ್ಕನೆ ಎಚ್ಚತ್ತವನಂತೆ ಸಾಮಾನ್ಯಸ್ಥಿತಿಗೆ ಬಂದು)*
ಹೆದರದಿರಿ, ಅಣ್ಣಂದಿರ, ನನಗೇನೂ ಆಗಿಲ್ಲ.
ಅಂಬರದಿ ಕಾಣಿಸಿದರೆನಗೆ ದೇವಿಯರ್ ಮೂವರ್.
ಅಂಬುದಗಳೆಡೆ ಪಾಡುತಿರ್ದರ್ ನೃತ್ಯಂಗೆಯ್ದು.
ನನ್ನ ನಾಶೀರ್ವದಿಸಿದರ್, ಆ ಪುರೋಹಿತರಂತೆ!
ಚಿನ್ನದುಡೆಯವಳೊರ್ವಳ್! ಬೆಳ್ಳಿಯುಡೆಯವಳೊರ್ವಳ್!
ಪಚ್ಚೆನೀಲಿಯನುಟ್ಟ ರನ್ನದುಡೆಯವಳೊರ್ವಳ್!
ನಿಮಗಾರಿಗೂ ಕಾಣಲಿಲ್ಲವೆ ಅವರು?

**ಎಲ್ಲರೂ:** - ಇಲ್ಲ ಇಲ್ಲ, ನನಗೆ ಕಾಣಿಸಲಿಲ್ಲ!

**ಚಂದ್ರಹಾಸ:** - ಬನ್ನಿ ಅಣ್ಣಂದಿರ.
ನಾವೂ ಅವರಂತೆಯೆ ಹಾಡಿ ಕುಣಿಯುವ:
*(ಚಂದ್ರಹಾಸನನ್ನನುಸರಿಸಿ ಎಲ್ಲರೂ ಕುಣಿಯುತ್ತಾರೆ.)*
ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!
ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!
ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!
ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!
ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!
*(ಕುಣಿಯುತ್ತಲೆ ಇರುತ್ತಾರೆ.)*

*ಪರದೆ ಬೀಳುತ್ತದೆ.*

*

# ಮಧ್ಯರಂಗಂ-ದೃಶ್ಯ ೧,೨

**ದೃಶ್ಯ೧**

*[ಸೇನಾಶಿಬಿರದ ಬಳಿಯ ಹಕ್ಕಲಿನಲ್ಲಿ ದಳಪತಿಗಳಾದ ವೀರಸೇನ ರಣಸಿಂಹರು ತಿರುಗಾಡುತ್ತಾ ಬರುತ್ತಾರೆ. ಬಂಡೆಗಳಿವೆ, ಗಿಡ ಮರ, ಪೊದೆಗಳಿವೆ. ದೂರ ಸುತ್ತಲೂ ಕಾಡು ಅಂಚುಕಟ್ಟಿದಂತಿದೆ: ಸಂಧ್ಯಾಕಾಲ.]*

**ರಣಸಿಂಹ:** - ಕಾಳೆಗದ ಬಳಲಿಕೆಯ ಪರಿಹರಿಸಲೆಂಬಂತೆ
ಬೀಸುತಿದೆ ತಂಗಾಳಿ.

**ವೀರಸೇನ:** - ಏನು ಶಾಂತಿಯ ಸಂಜೆ!
ಗಗನಮಣಿ ಪಶ್ಚಿಮಾಂಗನೆಯ ಬೈತಲೆಯ
ರಂಗುಮಾಣಿಕದಂತೆ ಪಡುವೆಟ್ಟದಂಚಿನಲಿ
ಕಂಗೊಳಿಸುತಿಹನೆಂತು!

**ರಣಸಿಂಹ:** - ಸಂಜೆವೆಣ್ಣುಟ್ಟ
ರಕ್ತಾಂಬರವೊ ಎಂಬಂತೆ ಬೈಗುಗೆಂಪೆಸೆಯುತಿದೆ!

**ವೀರಸೇನ:** - ಕಾಳೆಗದ ದಿನದ ಸಂಜೆಗೀ ನೆತ್ತರ್ಗೆಂಪು
ಸಹಜಮಲ್ತೆ?... ಈ ದಿನದ ಕಾಳೆಗದಿ ನಾಳೆಯ ಗೆಲ್
ನಮ್ಮದಾದಂತಾಯ್ತು, ಅಲ್ಲವೆ, ರಣಸಿಂಹ?

**ರಣಸಿಂಹ:** - ಹಾಗೆಂದೆ ತೋರುತಿದೆ... ಇನ್ನೇನು ನಮ್ಮವರ್
ಸೋತು ಹಿಮ್ಮೆಟ್ಟುವರೊ ಎಂದಿರ್ದೆ. ಅನಿತರೊಳ್
ಕೇಳ್ದತ್ತು ಸೇನಾನಿ ಚಂದ್ರಹಾಸನ ವೀರ ಅಟ್ಟಹಾಸಂ.
ಕಂಡುದೆ ತಡಂ ತಮ್ಮ ನೆಚ್ಚಿನ ವೀರಮೂರ್ತಿಯಂ,
ಪಡೆಗೆ ಪಡೆ ಉಘೇ ಬೊಬ್ಬಿರಿದು,
ಭಕ್ತಿಯಾವೇಶದಿಂ ಶಕ್ತಿಯುಕ್ಕಿತೊ ಎನಲ್
ನುಗ್ಗಿದರ್ ಮುಂಗಾರ ಬಿರುಗಾಳಿಯಂತೆವೋಲ್.
ಹಿಮ್ಮೆಟ್ಟುತೋಡಿದಾ ಶತ್ರುಸೇನೆ
ಕಳೆದುಕೊಂಡುದು ತನ್ನ ಬಹಳ ಸಂಖ್ಯೆಯಂ.

**ವೀರಸೇನ:** - ನಮ್ಮ ಪಡೆಯೂ ಕಳೆದುಕೊಂಡಿಹುದು ತನ್ನಾಳ್ಗಳಂ.

**ರಣಸಿಂಹ:** - ಕಳೆದಿದುಹು. ಆದೊಡಂ ಬಹಳ ಜನ ಮಡಿದಿಲ್ಲ.
ಇಂದಾದ ಕಾಳೆಗಂ ಸಮಗೈಯ ಸಮರಂ.
ಆದೊಡಂ ಶತ್ರುಪಕ್ಷದ ಮುಂದೆ ನಮ್ಮ ನಷ್ಟಂ
ಕಿರಿದೆ. ಸೇನಾನಿಯೊಂದು ಎಣೆಯಿಲ್ಲದಿಹ
ಯುದ್ಧಕೌಶಲದಿಂದೆ ನಾಳೆಯ ಜಯಂ
ನಮ್ಮದೆಂಬುದಕೆ ಸಂದೇಹಮಿಲ್ಲ.

**ವೀರಸೇನ:** - ಸೇನಾನಿ ಚಂದ್ರಹಾಸಂ ಕ್ಷೇಮದಿಂದಿರ್ಪನಲ್ತೆ?

**ರಣಸಿಂಹ:** - ಆತಂಗದೇನೊ ಅಲೌಕಿಕ ರಕ್ಷೆಯಿರ್ಪಂತೆ
ತೋರುತಿದೆ. ಕೈದುಗಳ್ ಸೋಂಕಲಂಜುವುವವನ!

**ವೀರಸೇನ:** - ಈಗಳೆಲ್ಲಿಹನು? ನೋಳ್ಪಮಾತನಂ.

**ರಣಸಿಂಹ:** - ತನ್ನ ಗೂಡಾರದಲ್ಲಿಹನು. ನಾಳೆಯ ಸಮರ
ಸನ್ನಾಹವಂ ಚಿಂತಿಸುತಲಿಹನೆಂದು ತೋರುವುದು.
ನಾನ್ ಕಾಣೆ ಅವನ ಮೀರಿಹ ಯೋಧನಿಹನೆಂದು.
ಸರಳನೆಸೆವುದರಲಿ ಅವನ ಮುಂದಾರಿಲ್ಲ.
ನಾನೆ ಕಂಡಿಹೆನು: ಅವನ ಬಾಣಗಳೆಂತು
ಕಾರ್ಗಾಲ ಮಳೆಯಂತೆ ಅರಿಭಟರ ಮುಚ್ಚುವುವು!
ಅವನ ಕೂರಸಿಮಿಂಚೊ? ಜವನ ಸಂಚು!
ಕಳೆದಿಹೆನು ಹನ್ನೆರಡುವರ್ಷಂಗಳನ್ ಆನ್
ಅವನ ಸಂಗಾತಿಯಾಗಿ, ಅವನೆಣೆಯ ವೀರರಂ,
ಅವನೆಣೆಯ ಭಕ್ತರಂ, ಕಂಡಿಲ್ಲ, ಕೇಳಿಲ್ಲ.
ಕ್ಷಮೆಯೊಳುಂ ಕ್ಷಮೆಯನ್ನೆ ಮೀರಿಹನು.
ಎನಿತೊ ಅರಸರ ಗೆಲ್ದನಾದರೂ ಒಮ್ಮೆಯೂ
ಕ್ರೌರ್ಯಮಂ ಕ್ಷಾತ್ರಮೆಂದವನು ಭ್ರಮಿಸಲಿಲ್ಲ.

**ವೀರಸೇನ:** - ಅಹುದು. ಅವನ ದನಿ ಸುಭಟರೆದೆಗಾವೇಶ.
ಅವನಿರಲು ಸಾವೆಂಬುವಂಜಿಕೆಯನರಿಯರಾ
ಸೈನಿಕರ್. ನಾನೆ ನೋಡಿದೆನಿಂದು. ಅರಿಭಟರ
ಮುತ್ತಿಗೆ ಸಬಲವಾಗಲೆಮ್ಮವರು ಹಿಂಜರಿಯ
ತೊಡಗಿದರ್. ಚಂದ್ರಹಾಸನ ಅಮೃತವಾಣಿಯಂ
ಉತೇಜಕದ ನುಡಿಗಳಂ ಕೇಳಿದುದೆ ತಡಂ
ಮುಗ್ಗಿದರ್ ಮುಗಿಲ ಮೊಗ್ಗರದಂತೆ;
ಹಿಗ್ಗಿದರ್, ಪೆರ್ಚಿದರ್ ಭೈರವ ರಣಾವೇಶದಿಂ!

**ರಣಸಿಂಹ:** - ಜಯರಮಾ ಜೀವಿತೇಶ್ವರನವನ್!

**ವೀರಸೇನ:** - ಅವನ ಕಂಠದೊಳೊಂದು ಸಾಲಗ್ರಾಮದುಪಲಂ
ಪೊನ್ನಮನೆ ಮಾಡಿಕೊಂಡೆಸೆಯುತಿಹುದಂತೆ!
ಆತನ ವಿಚಿತ್ರ ಕಥೆಗದೆ ಮೂಲವಂತೆ!
ಆ ಮೈಮೆಯಿಂದವನಿಗೆಲ್ಲಿಯುಂ ಗೆಲ್ಲಂತೆ!
ನಿಜವೆ?

**ರಣಸಿಂಹ:** - ಅಹುದು. ಆದರಾತನ ಗೆಲವಿಗಾ
ಬಟ್ಟಗಲ್ಲೊಂದು ಬರಿ ನಿಮಿತ್ತಮಾತ್ರಂ.
ಭಕ್ತಿಸತ್ವದೊಳಿರ್ಪುದಾತನಾ ಮಹಾಶಕ್ತಿ.
*[ಇಬ್ಬರೂ ನಡೆಯುತ್ತಾ ಒಂದು ಬಂಡೆಯ ನೆತ್ತಿಯನ್ನೇರಿ ಕೂರುವರು]*

**ವೀರಸೇನ:** - ಅದೊ, ಎನಿತು ಸುಂದರಂ ಈ ಚಂದ್ರೋದಯಂ!

**ರಣಸಿಂಹ:** - ಶಾಂತಿಮಂದಿರನಾಗಿ ಶೀತಕಾಂತಿಯ ಸುಧಾ
ವರ್ಷದಿಂದಿಳೆಗೆ ಹರ್ಷದ ತಣ್ಪನೆರಚುತ್ತೆ
ಬರುತಿಹನು, ರಣದ ದಣಿವಂ ಕಳೆಯಲೆಂಬಂತೆ.

**ವೀರಸೇನ:** - ಹೋಮಾಗ್ನಿಧೂಮವಂ ಭೇದಿಸುತಲೇಳುವಾ
ಇಷ್ಟದೇವತೆಯಂತೆ, ಕತ್ತಲೆಯನಟ್ಟುತ್ತ
ಮೂಡಿ ಮೆರೆಯುತಿಹನಾ ಇಂದ್ರದಿಗ್ವೇದಿಯಲಿ.

**ರಣಸಿಂಹ:** - ನಮ್ಮೆಲ್ಲ ಸಮರ ಸನ್ನಾಹವನೆ ಮೂದಲಿಸಿ
ನಗುವಂತೆ ತೋರುತಿದೆ ಈ ಚಂದ್ರಹಾಸಂ!

**ವೀರಸೇನ:** - ಆದರೆಮಗೊಡೆಯನ್ ಆ ಚಂದ್ರಹಾಸನಲ್ತೆ?
*[ಇಬ್ಬರೂ ನಗುತ್ತಾರೆ.]*
ನಾಳೆ ಆತನ ಸನ್ನೆಯಲಿ ನಡೆವ ಸಮರದಲಿ
ನಮ್ಮ ಗೆಲ್ಲನೆ ಸೂಚಿಸುವ ಹೊನ್ನಲೇಪಮಂ
ತಳೆದೆಸೆವ ಜೊನ್ನವೆಳ್ಳಿಯ ಗುರಾಣಿಯೆನಲ್ಕೆ
ಶೋಭಿಸುತ್ತಿಹನೀ ನಿಶಾಜೀವಿತೇಶ್ವರಂ!

**ರಣಸಿಂಹ:** - ಕುಳಿತಿಲ್ಲಿ ಒಂದಿನಿತುವೊಳ್ತು ಮೆಯ್ ಮರೆಯುವಂ
ಸೌಂದರ್ಯತೀರ್ಥದಲಿ ಮುಳುಗುತಾನಂದದಿಂ!

*ಪರದೆ ಬೀಳುತ್ತದೆ,*

*

**ದೃಶ್ಯ೨**

*[ಚಂದನಾವತಿಯ ಒಂದು ಬೀದಿ. ಕುಂತಳನಗರದ ನಿವಾಸಿಯೊಬ್ಬನು ಬರುತ್ತಾನೆ.]*

**ಕುಂತಳನಿವಾಸಿ:** - ಹಿಂದೆ ನಾನಿಲ್ಲಿಗೈತಂದಾಗಳ್ ಈ ನಾಡು
ಕಾಡು ಬೀಡಾಗಿತ್ತು. ಇಂದೊ ಹೊಸತೊಂದು
ನೋಟ! ಸಸ್ಯಸಮೃದ್ಧಿಯಿಂ, ಪುರಗಳಿಂ,
ಉದ್ಯಾನವನಗಳಿಂ ಸಿರಿಯ ನೆಲೆವೀಡಾಗಿ
ಶೋಭಿಸಿದೆ. ಈ ನಾಡ ಜನರೆನಿತು ಪುಣ್ಯಾತ್ಮರೊ!...
ಈ ಚಂದನಾವತಿಯೊ ಸೊಬಗಿನಾಲಯದಂತೆ
ಮೆರೆಯುತಿದೆ. ಮುಗಿಲ ಮುಟ್ಟುವ ಸೌಧಶಿಖರಗಳೇನ್
ಮಣಿಶಿಲಸೋಪಾನದಿಂದೆಸೆವ ಕೊಳಗಳೇನ್,
ಮೊರೆಮೊರೆದು ಪರಿವ ಪರಿಕಾಲ್ಗಳೇನ್, ತಿಳಿಯನೀರ್
ತುಂಬಿತುಳುಕುವ ಬಿತ್ತರದ ಸರೋವರಗಳೇನ್,
ಕೆರೆಗಳೇನ್!... ಮಣಿಕೃತ ಶೈಲಗಳೊ,
ದುರ್ಗಮದ ಕೋಟಿಕೊತ್ತಳಗಳೊ,
ಶಿಲ್ಪಕಲೆ ಬಲೆನೆಯ್ದ ಗುಡಿಗಳೊ,
ಕಣ್ಣಿಟ್ಟ ಕಡೆ ಕಂಗೊಳಿಪವೈಸೆ!...
ಎಲ್ಲಿ ಕಿವಿಗೊಟ್ಟೊಡಂ ಸಾಮರವದಿಂಚರಂ;
ಲಲನೆಯರ ಮೆಲ್ಲುಲಿಗಳಿಂಪು. ಹೂ ಗಂಧ
ಧೂಪ ಧೂಮದ ಕಂಪು... ಅಃ ಪೈರು ಪಚ್ಚೆಯ ಸೊಬಗೊ!...
ಈ ನಾಡೊಳೊಂದು ಮರಿದುಂಬಿಯಾಗುದಿಸಿ ಬರೆ,
ಒಂದು ಕೋಗಿಲೆಯಾಗಿ ಪುಟ್ಟಿ ಬರೆ ಪರಮಪುಣ್ಯಂ!...
ನಮ್ಮ ಕುಂತಳನಗರಿದು ಸಗ್ಗಮೆ ದಿಟಂ!
*[ಇಬ್ಬರು ಪುರಜನರು ಬರುತ್ತಾರೆ. ಕುಂತಳನಿವಾಸಿಯನ್ನು ನೋಡಿ]*

**ಮೊದಲನೆಯ ಪೌರ:** - ಆವನೊ ಹೊಸಬನಿರುವಂತೆ ತೋರುತಿದೆ.

**ಎರಡನೆಯ ಪೌರ:** - ಸೋದರನೆ, ನಾಡಾವುದುದು ನಿನ್ನ ಜನ್ಮದಿಂ
ಪುನೀತಮಾಗಿಹುದು, ಪೇಳ್. ಧನ್ಯರಪ್ಪೆವು ಕೇಳ್ದು.

**ಕುಂತಳನಿವಾಸಿ:** - *(ತನಲ್ಲಿಯೆ)*
ಏನ್ ವಿನಯಮೀ ನಾಡವರ್ಗೆ!... *(ಪ್ರಕಾಶ)*
ಅಣ್ಣ , ನಾನು ಕುಂತಳನಗರದಿಂ ಬಂದಿಹೆನು;
ನಿಮ್ಮ ನಾಡಿನ ಸೊಬಗು ಸಿರಿ ವಿಭವಗಳನೆಲ್ಲ
ಕೇಳ್ದು, ಕಣ್ಣಿಂ ಕಂಡು ಧನ್ಯನಾಗಲ್ಕೆ
ಯಾತ್ರಿಕನವೋಲ್ ಇಲ್ಲಿಗೈತಂದೆ.
ನಿಮ್ಮ ನಾಡಿನ ಸಿರಿಯ, ನಿಮ್ಮ ನಗರದ ಸೊಬಗ
ಕಂಡು ಬೆರಗಾಗಿ ಹೋದೆನ್. ಹಿಂದೆ ಇಂತಿರಲಿಲ್ಲ.

**ಮೊದಲನೆಯ ಪೌರ:** - ನಮನಾಳುವ ಪುಣ್ಯಪುರುಷನ ಮಹಿಮೆಯಿಂ
ನಮ್ಮ ನೆಲಕಿಳಿದಿಹುದು ಆ ವೈಕುಂಠ ಕೃಪೆ!

**ಕುಂತಳನಿವಾಸಿ:** - ನಿಮ್ಮನಾಳುವ ಪುಣ್ಯ ಪುರುಷನಾರು?

**ಎರಡನೆಯ ಪೌರ:** - ಕೇಳ್ದರಿಯೆಯೇ ನೀಂ ಚಂದ್ರಹಾಸನ ಕೀರ್ತಿಯಂ?

**ಕುಂತಳನಿವಾಸಿ:** - ಆತನೇಂ ನಿಮ್ಮರಸನೇ?

**ಮೊದಲನೆಯ ಪೌರ:** - ದತ್ತುಮಗನಾತನೈ ನಮ್ಮರಸು ಕುಳಿಂದಂಗೆ.
ಆತನಿಂದಲೆ ನಮ್ಮ ಪೊಳಲ ಸಿರಿ ಇಂತು
ಪೆರ್ಚಿಹುದು. ರಾಜ್ಯವನು ಬಿತ್ತರಿಸಿ, ಅರಿನೃಪರ
ಮುರಿದಿಕ್ಕಿ, ಪ್ರಜೆಗಳೆದೆಯಲಿ ದೈವಭಕ್ತಿಯಂ
ಬಿತ್ತಿ, ಬೆಳೆದಿಹನು ಸೊಗವನೆಲ್ಲೆಲ್ಲಿಯುಂ.

**ಎರಡನೆಯ ಪೌರ:** - ಬೇಂಟೆಯಾಡುತ್ತೆಮ್ಮ ನೃಪನಡವಿಯೊಳ್
ತಿರುಗುತಿರೆ ವನದೇವತೆಯೆ ಆ ಶಿಶುವನಾತಂಗೆ
ತಂದಿತ್ತಳಂತೆ! ನಮ್ಮೀ ನಗರಿಗಾ ಬಾಲಕಂ
ಬಂದ ದಿನದಂದು ನಭದೊಳ್ ದೇವದುಂದುಭಿ
ಮೊಳಗಿತಯ್; ಅಭ್ರದಿಂ ಬಿಳ್ದುದು ಕನಕವೃಷ್ಟಿ!

**ಕುಂತಳನಿವಾಸಿ:** - ನೀಂ ಪೇಳ್ದುದಂ ಕೇಳ್ದೆನಗೆ ಉಕ್ಕುತಿದೆ ಕರುಬು.
ನಮ್ಮ ನಾಡಿನ ಗೋಳನೇನೆಂಬೆನೋ!

**ಮೊದಲನೆಯ ಪೌರ:** - ನಿಮ್ಮ ನಾಡೆಂತಿಹುದು? ನಿಮ್ಮರಸನೆಂತು?
ಮಳೆಬೆಳೆಗಳೆಂತು? ಧರ್ಮಭಕ್ತಿಗಳೆಂತು?
ನಾಡ ಜನರೆಲ್ಲ ಸಿರಿಸೊಗವನನುಭವಿಸಿಹರೆ?

**ಕುಂತಳನಿವಾಸಿ:** - ನಮ್ಮ ನಾಡಿನ ಕಥೆಯ ಕೇಳಿದರೆ
ವ್ಯಥೆಯಾಗದಿರದು ನಿಮಗೆ.
ನಮ್ಮರಸನೊಳ್ಳಿದಂ. ಮಳೆಬೆಳೆಗಳೆಲ್ಲ
ಎಂದಿನಂತೆಯೆ ಇಹವು. ರೋಗರುಜೆಬಾಧೆಯುಂ
ಎಲ್ಲಿಯೂ ತೋರಿಲ್ಲ.

**ಎರಡನೆಯ ಪೌರ:** - ಮತ್ತೇನು ಕೊರತೆ?

**ಕುಂತಳನಿವಾಸಿ:** - ನಮ್ಮರಸನಿಗೆ ದುಷ್ಟಬುದ್ಧಿ ಎಂಬೊನ್ ಮಂತ್ರಿ.
ವೃದ್ಧನಾಗಿಹ ದೊರೆಯನವನು ಮೂಲೆಗೆ ನೂಂಕಿ
ನಾಡನಾಳುವ ಸೂತ್ರಮಂ ತಾನೆ ಕೈಕೊಂಡು,
ಪ್ರಜೆಗಳಂ ಸುಲಿದು ಸೂಕ್ಷ್ಮ ವಿಧಾನಂಗಳಿಂ,
ತನಗಾಗದವರಂ ನಾನಾ ಉಪಾಯದಿಂ
ಕೊಲಿಸಿ, ಪ್ರೋತ್ಸಾಹಮಂ ಕಳ್ಳಕಾಕರಿಗಿತ್ತು,
ರಾಜ್ಯದಾದಾಯಮಂ ತನ್ನ ಬೊಕ್ಕಸಕಿಟ್ಟು
ಧೂರ್ತನಾಗಿಹನು. ಹೇಳಿಕೇಳುವರಿಲ್ಲ;
ತಾನೆತಾನಾಗಿಹನು... *(ದೂರ ನೋಡಿ)*
ಅದೇನದಾ ಕೋಲಾಹಲಂ?

**ಮೊದಲನೆಯ ಪೌರ:** - ಚಂದ್ರಹಾಸನ ದಂಡು ನೆರೆಯ ರಾಜ್ಯದ ಮೇಲೆ
ಸಾಗಿತ್ತು. ಜಯವಾಯ್ತು ಎಂದೆ ತೋರುತಿದೆ.
ಕೇಳುತಿದೆ ಸೈನಿಕರ ವಿಜಯಾಟ್ಟಹಾಸಂ.
ಸೇನೆ ಹಿಂತಿರುಗಿ ಬರುತಿದೆ ನಗರ ಶಿಬಿರಕ್ಕೆ.
*(ಸೈನಿಕರ ಒಂದು ಗುಂಪು ಬರುತ್ತದೆ. ಒಬ್ಬನನ್ನು ಕರೆದು ಕೇಳುತ್ತಾನೆ.)*
ಪೇಳಣ್ಣ ವಾರ್ತೆಯಂ

**ಸೈನಿಕ:** - ಮತ್ತಾವ ವಾರ್ತೆ?
ವಿಯಯವೊಂದೇ ನಮ್ಮ ವಾರ್ತೆ!

**ಎರಡನೆಯ ಪೌರ:** - ಜಯದ ಮೇಲೆ ಜಯ! ನಮ್ಮರಸಗೆಣೆಯಾರು?

**ಸೈನಿಕ:** - ಮತೊಂದು ಪಯಣ ಕಾದಿದೆ ನಾಳೆ.

**ಮೊದಲನೆಯ ಪೌರ:** - ಎಲ್ಲಿಗೆ?

**ಸೈನಿಕ:** - ಕುಂತಳ ನಗರಕ್ಕೆ.

**ಕುಂತಳನಿವಾಸಿ:** - *(ಬೆದರಿ)* ಏತಕ್ಕೆ?

**ಸೈನಿಕ:** - ರಾಯಂಗೆ
ವರ್ಷ ವರ್ಷಕೆ ನಾವು ಕೊಡುವ ಸಿದ್ದಾಯಮಂ
ದುಷ್ಟಬುಧ್ಧಿಗೆ ಸಲಿಸಲೆಂದು ಹೋಗುವೆವು.

**ಕುಂತಳನಿವಾಸಿ:** - *(ತನ್ನೊಳಗೆ)* ಬದುಕಿದೆವು!

**ಎರಡನೆಯ ಪೌರ:** - ಚಂದ್ರಹಾಸನೂ ಹೋಗುವನೆ?

**ಸೈನಿಕ:** - ಇಲ್ಲ; ದೂತರು, ಮತ್ತು ಅವರ ನೆರವಿಗೆ ಸೈನಿಕರು.
*[ಸೈನಿಕರು ಬೇಗ ಬೇಗನೆ ಹೋಗುತ್ತಾನೆ.]*

**ಎರಡನೆಯ ಪೌರ:** - *(ಕುಂತಳನಿವಾಸಿಗೆ)* ಕುಂತಳಕೆ ಎಂದೊಡನೆ
ನಿನಗೆ ಬೆದರಿಕೆಯಾಯ್ತೆ?

**ಕುಂತಳನಿವಾಸಿ:** - ಮೊದಲೇನೊ ಬೆದರಿದೆನ್, ಮತ್ತೆ ಸಂತಸವಾಯ್ತು.
ಅನಿತರಲಿ ಅವನ ವಿವರಣೆ ಕೇಳಿ ವ್ಯಥೆಯಾಯ್ತು.

**ಮೊದಲನೆಯ ಪೌರ:** - ಏಕೆ? ನೀನೆಂದುದುರ ಅರ್ಥವೆ ಹೊಳೆಯಲಿಲ್ಲ?

**ಕುಂತಳನಿವಾಸಿ:** - ಸೇನೆ ಮುತ್ತುವುದೆಂದು ಹೆದರಿದೆನ್. ಮತ್ತೆ,
ಚಂದ್ರಹಾಸನ ಸೇನೆ, ದುಷ್ಟಬುಧ್ಧಿಗೆ ಶಿಕ್ಷೆ,

ಎಂದು ಸಂತಸವಾಯ್ತು! ಮತ್ತೆ, ದುಷ್ಟಬುದ್ಧಿಗೆ
ಸಿದ್ಧಾಯಮಂ ಕೊಡಲೆಂಬುದನು ಕೇಳಿ ವ್ಯಥೆಯಾಯ್ತು.

**ಮೊದಲನೆಯ ಪೌರ:** - ಸೋದರನೆ, ಬಾ ನಮ್ಮ ಮನೆಗೆ.
ನಮ್ಮ ಅತಿಥ್ಯವನು ಕೃಪೆಗೈದು ಸ್ವೀಕರಿಸಿ,
ನಮ್ಮೆಲ್ಲರಂ ಧನ್ಯರನ್ನಾಗಿ ಮಾಡು.

**ಎರಡನೆಯ ಪೌರ:** - ಇಲ್ಲಿ ಸತ್ರಗಳಿಲ್ಲ. ಜನರೆದೆಯೆ ಸತ್ರ!
ನಮ್ಮ ನಾಡಿಗೆ ಬರುವರಾರೂ
ಬಿಸಿಲು ಮಳೆಗಾಳಿ ಪಸಿವು ನೀರಡಿಕೆಗಳ
ಬಾಧೆಯನರಿಯರಯ್ಯಾ!

**ಕುಂತಳನಿವಾಸಿ:** - ಮತ್ತೆ?
ಚಂದ್ರಹಾಸನ ಪ್ರಜೆಗಳಲ್ಲವೆ ನೀವು!
*[ಮೂವರೂ ಹೊರಡುತ್ತಾರೆ.]*

*ಪರದೆ ಬೀಳುತ್ತದೆ.*

*

## ಅಂತ್ಯರಂಗಂ-ದೃಶ್ಯ ೧,೨

<u>ದೃಶ್ಯ೧</u>

*[ಕುಂತಳನಗರ. ದುಷ್ಟಬುದ್ಧಿ ತನ್ನ ಹಜಾರದಲ್ಲಿ ಕುಳಿತು ಏನೊ ಪತ್ರ ನೋಡುತ್ತಿರುತ್ತಾನೆ. ದಂಡನಾಯಕನು ಎದುರುಗಡೆ ತುಸು ದೂರದಲ್ಲಿ ಕುಳಿತಿದ್ದಾನೆ. ಸೇವಕನು ಕೈಕಟ್ಟಿಕೊಂಡು ನಿಂತಿರುತ್ತಾನೆ.]*

**ದಂಡನಾಯಕ:** - ಜೀಯ, ಅವನ ಆಪರಾಧವೇನಿಲ್ಲ.
ನಾನೆ ವಿಚಾರಿಸಿದೆ. ಗುಣವಂತ, ವಿನಯಶೀಲ,
ಕುಲೀನ ವಂಶಜ. ಅನೇಕ ಶಾಸ್ತ್ರಪಾರಂಗತ….

**ದುಷ್ಟಬುದ್ಧಿ:** - *(ಜುಗುಪ್ಸೆಯಿಂದ ತಲೆಯೆತ್ತಿ, ದಂಡನಾಯಕನ್ನನ್ನು ದುರದುರನೆ ನೋಡಿ)*
ಇಲ್ಲ, ಅವನು ಸಾಯಲೆ ಬೇಕು, ನನ್ನಾಜ್ಞೆ.
*[ಮತ್ತೆ ತಲೆ ತಗ್ಗಿಸಿ ಪತ್ರ ಓದುತ್ತಾನೆ. ದಂಡನಾಯಕ ಚಿಂತಿಸುತ್ತಾನೆ.]*

**ದಂಡನಾಯಕ:** - ಜೀಯ ಅಪರಾಧವಿಲದೆಯೆ ಮರಣದಂಡನೆಯೆ?
ನಾವಾ ನಿರಪರಾಧಿಯಂ ಕೊಲಿಸೆ...

**ದುಷ್ಟಬುದ್ಧಿ:** - *(ತಟ್ಟಕ್ಕನೆ ತರೆಯೆತ್ತಿ ಸಿಡುಕಿನಿಂದ)*
ನನ್ನಾಜ್ಞೆಯಂ ನಡಸು. ವಾದಮಂ ಮಾಣ್!

**ದಂಡನಾಯಕ:** - ಅವನ ಕೊಂದರೆ ದಂಗೆಯೇಳುವರು ಜನ.

**ದುಷ್ಟಬುದ್ಧಿ:** - *(ದರ್ಪಧ್ವನಿಯಿಂದ)*
ನಮ್ಮ ಪಟುಭಟರ ಕೂರಸಿಗಳಿಗೆ ಕಿಲುಬು ಹಿಡಿದಿಲ್ಲ!
ಜನರ ರುಂಡಗಳೇನು ವಜ್ರವಲ್ಲ!
*[ಪುನಃ ತಲೆತಗ್ಗಿಸಿ ಓದತೊಡಗುತ್ತಾನೆ.]*

**ದಂಡನಾಯಕ:** - ಹಿಂದವನು ತಮಗೆ ಮಿತ್ರನಾಗಿದ್ದನಲ್ತೆ?

**ದುಷ್ಟಬುದ್ಧಿ:** - *(ಪತ್ರದಿಂದ ತಲೆಯೆತ್ತದೆ)*
ಈಗಲ್ಲವಷ್ಟೆ?

**ದಂಡನಾಯಕ:** - ಅನ್ಯಾಯವಾಗುವುದು, ಜೀಯ.

**ದುಷ್ಟಬುದ್ಧಿ:** - *(ತಟಕ್ಕನೆ ತಲೆ ಎತ್ತಿ ಗರ್ಜಿಸುತ್ತಾನೆ)*
ಏಕಿಂತು ಪೀಡಿಸುತ್ತಿಹೆ! ಹೊರಡಾಚೆ!
*(ದಂಡನಾಯಕ ನೆಲದಕಡೆ ನೋಡತೊಡಗುತ್ತಾನೆ. ದುಷ್ಟಬುದ್ಧಿ ತಲೆಬಾಗಿ ಪತ್ರದ ಕಡೆ ತಿರುಗಿ, ಒಂದು ಚಣ ತಡೆದು, ಮತ್ತೆ ತಲೆಯೆತ್ತಿ)*
ಏಕೆ ಕುಳಿತಿಹೆ ಇನ್ನೂ? ಹೊರಡು:
ಬೇಗ ಮಾಡೆನ್ನಾಜ್ಞೆಯಂ! *(ದಂಡನಾಯಕ ಏಳುತ್ತಾನೆ)*
ಕತ್ತಲಾಗುವ ಮುನ್ನ ಅವನ ತಲೆ ತಿರೆಗುರುಳಲಿ!
*[ದಂಡನಾಯಕ ಬಾಗಿ ಕೈಮುಗಿದು ಹೊರಗೆ ಹೋಗುತ್ತಾನೆ. ದುಷ್ಟಬುದ್ಧಿ ತಲೆಯಲ್ಲಾಡಿಸಿ ಸೇವಕನಿಗೆ ಸನ್ನೆಮಾಡುತ್ತಾನೆ]*

**ಸೇವಕ:** - ಜೀಯ, ಏನಪ್ಪಣೆ?

**ದುಷ್ಟಬುದ್ಧಿ:** - ಚಂದನಾವತಿಯ ದೂತರನು ಒಳಗೆ ಬರಹೇಳು.
*[ಸೇವಕ ಹೋಗುತ್ತಾನೆ.]*

ಏನಿದೆತ್ತಣ ಕೌತುಕದ ಸುದ್ದಿ?
ಕುಳಿಂದಂಗೆ ಸೂನು ಜನಿಸಿರ್ದಪನೆ?
ಬಂಜೆಯಾಗಿಹಳವನ ಮಾನಿನಿ!
ಅತಿ ವಿಚಿತ್ರಮಿದು. ಇರಲಿ;
ಎಲ್ಲವನು ವಿಶದವಾಗರಿಯುವೆನು.
*[ಸೇವಕನನು ಮುಂದುಮಾಡಿಕೊಂಡು ಇಬ್ಬರು ಚಂದನಾವತಿಯ ದೂತರು ಬರುತ್ತಾರೆ. ರುದ್ರಾಕ್ಷಿ, ತುಲಸೀ ಮೊದಲಾದ ಮಾಲೆಗಳನ್ನು ಧರಿಸಿರುತ್ತಾರೆ. ಕೈಮುಗಿದು, ದುಷ್ಟಬುದ್ಧಿ ಪೀಠದ ಕಡೆ ಕೈತೋರಿಸಲು ಕುಳಿತುಕೊಳ್ಳುತ್ತಾರೆ. ]*
*(ಸ್ವಗತ)* ಏನಿದೀ ವೇಷ? ಅವಧೂತರಂತಿಹರು!
ಚಂದನಾವತಿಯೆಲ್ಲ ಸನ್ಯಾಸಸ್ವೀಕಾರಮಾಡಿಹುದೊ ಏನೊ? *(ನಗೆಯ ತಡೆ ಹಿಡಿದು)* ದೂತರಿರ, ತಂದ
ಕಪ್ಪಕಾಣಿಕೆಗಳನು ರಾಜ್ಯದ ಬೊಕ್ಕಸಕೆ ಸುರಿದಾಯ್ತೆ?

**ಒಂದನೆಯ ದೂತ:** - ರಾಣಿಗೆ ಪುರೋಹಿತಗೆ ಸಲ್ಲಿಸುವ ಹಣ ಹೊರತು
ಇನ್ನುಳಿದುದೆಲ್ಲವಂ ಸಲ್ಲಿಸಿದೆವು.

**ದುಷ್ಟಬುದ್ಧಿ:** - ರಾಣಿಗೆ ಪುರೋಹಿತನಿಗೆ ಸಲ್ಲಿಸುವ ಸಿದ್ದಾಯವಂ
ನಮಗೇ ಸಲ್ಲಿಸುವ ಕಟ್ಟಳೆಯ ಮಾಡಿಹೆವು;
ತಿಳಿಯಿತೆ?

**ಎರಡನೆಯ ದೂತ:** - ಅಪ್ಪಣೆ.

**ದುಷ್ಟಬುದ್ಧಿ:** - ನಿಮ್ಮರಸುಕುವರಂಗೆ ಚಂದ್ರಹಾಸಂಗೆ
ಈಗೆನಿತು ವಯಸ್ಸು?

**ಒಂದನೆಯ ದೂತ:** - ಪದಿನೆಂಟು.

**ದುಷ್ಟಬುದ್ಧಿ:** - ಕುಳಿಂದಂಗೆ ಮಕ್ಕಳಿರಲಿಲ್ಲವಲ್ಲ!
ಈ ಸುದ್ದಿ ದಿಟವೆ?

**ಎರಡನೆಯ ದೂತ:** - ಜೀಯ, ಪುಸಿಯಲ್ಲ,
ದೊರೆ ಬೇಂಟೆಯಾಡುತಲಿರಲ್ ಕಾನನದ ಮಧ್ಯದೊಳ್
ಅನಾಥನಾಗಿಹ ಶಿಶುನಿಧಾನಮಿರೆ
ಕಂಡೆತ್ತಿಕೊಂಡು ಬಂದು
ಆತ್ಮಜ ವಿಧಾನದಿಂದೋವಿದನ್.

**ದುಷ್ಟಬುದ್ಧಿ:** - *(ವಿಸ್ಮಯದಿಂದ)* ಏನು?
ಕಾನನಾಂತರದೊಳವನು ದೊರಕಿದನೆ?

**ಒಂದನೆಯ ದೂತ:** - ಹೌದು, ಜೀಯ.

**ದುಷ್ಟಬುದ್ಧಿ:** - ಬಹು ಪರಾಕ್ರಮಿಯೆ?

**ಎರಡನೆಯ ದೂತ:** - ಬರಿ ಪರಾಕ್ರಮವಲ್ತು: ಭಗವದ್‌ಬಲಂ!
ನಮ್ಮಿಳೆಗೆ ಆತನೈತಂದಂದಿನಿಂ
ಮಂಗಳದ ಮಳೆಹೊಯ್ದ ತೆರನಾಯ್ತು.
ಸಸ್ಯ ಮೃಗ ಪಕ್ಷಿಗಳ್ ಸಂತಸದಿ ಪೆರ್ಚಿದುವು;
ಇರ್ಮಡಿಸಿ ಮೂರ್ಮಡಿಸಿ ನೂರ್ಮಡಿಸಿದುದು ಪೈರುಪಚ್ಚೆ;
ಬರಗಾಲವಡಗಿದುದು; ಕಾರ್ಮುಗಿಲು ಕರ್ಮಮಂ
ಕಾಲಕಾಲಕೆ ತಪ್ಪದೆಸಗಿದುದು ಕರ್ತವ್ಯಮಂ;
ಜನಹೃದಯದೊಳ್ ಭಕ್ತಿಯಿಂ ಭವಿಸಿದುದು
ನವಚೇತನಂ. ಸಂತಸದಿ ಕಂಗೊಳಿಸುತಿದೆ ತಿರೆ.
ರೋಗರುಜೆಗಳ ಬಾಧೆಯಡಗಿಹುದು. ಮಿತ್ತುವಿನ
ಸುಳಿವಿಲ್ಲ. ಕಳ್ಳಕಾಕರ ಭೀತಿ ಕಟ್ಟುಕತೆಯಾಯ್ತು….

**ದುಷ್ಟಬುದ್ಧಿ:** - ಸಾಕು ಬಿಡು; ಗೊತ್ತಾಯ್ತು. *(ಸೇವಕನ ಕಡೆ ತಿರುಗಿ)*
ಹೊತ್ತಾಯ್ತು. ಭೋಜನಕೆ ಕರೆದೊಯ್ ಇವರನ್.

**ಒಂದನೆಯ ದೂತ:** - ಜೀಯ, ಮನ್ನಿಸಿರಿ, ಇಂದು ಏಕಾದಶಿ!
ಇಂದು ಉಣಿಸೆಮಗೆ ಒಲ್ಲದು.
*(ದುಷ್ಟಬುದ್ಧಿ ದುರದುರನೆ ನೋಡುತ್ತಾನೆ.)*
ನಾವೆಲ್ಲ ವೈಷ್ಣವರ್!

**ದುಷ್ಟಬುದ್ಧಿ:** - *(ತಿರಸ್ಕಾರದಿಂದಲೂ ಪರಿಹಾಸ್ಯದಿಂದಲೂ)*
ಹಾಗಾದರೆ ಹೊರಡಿ. *(ದೂತರು ಕೈಮುಗಿದು ಹೊರಡಲು ಉದ್ಯುಕ್ತರಾಗುತ್ತಾರೆ).*
ನಿಮ್ಮರಸಗೀ ಪತ್ರಮಂ ಕೊಟ್ಟು
ನನ್ನ ಕೃಪೆಯಂ ತಿಳುಹಿ. *(ದೂತರು ತೆಗೆದುಕೊಂಡು ಹೊರಡುತ್ತಾರೆ)*
ನಹಂಕಾರ! ಈ ಕಿಂಕರಮಾತ್ರರದು?
ನಾವೀವ ಭೋಜನವನುಣಲೊಲ್ಲರಂತೆ!

ಸೇವಕರೆ ಇನಿತು ಸೊರ್ಕಿದಮೇಲೆ
ಅರಸನೆಂತಿರಬೇಕು? *(ಆಲೋಚಿಸುತ್ತಾನೆ)*
ಪಾಳಡವಿಯೊಳ್ ಪಸುಳೆಯುಂ ಕೊಂದುಬಹುದೆಂದು
ಬೆಸಸಿದೊಡೆ ಚಂಡಾಲರಂದುಳಿಹ ಬಂದರೇ?
ಕಾಲ್ಬೆರಳನೊಂದಂ ಕತ್ತರಿಸಿ ತಂದರೇ?
ಅವರನ್ ವಿಚಾರಿಸಿಯೆ ದಿಟವನರಿವೆನ್.
ಈ ಚಂದ್ರಹಾಸನಾ ಬಾಲನಾಗಿರಬಹುದೆ?
ಗಾಲವನ ಮಾತು ಸುಳ್ಳಲ್ಲವೆಂದಾಯ್ತು.
ಎಂತಾದರು ಅವನನ್ ಸಂಹರಿಸದಿರೆ ಸುಖವಿಲ್ಲ.
ನಾನೆ ಚಂದನಪುರಕೆ ಪೋಗಿ ಕಾಣ್ಬೆನ್.
ನನ್ನಾಜ್ಞೆಯಿಂ ಮೀರಿ ದತ್ತುಮಗನಂ ಎಂತು
ಪಡೆದಂ ಕುಳಿಂದಕಂ?... ಯಾರಲ್ಲಿ?.... ಹೋಗು,
ಮದನ ಕುಮಾರನಂ ಬರಹೇಳು.
*(ಸೇವಕ ಹೋಗುತ್ತಾನೆ.)*
ಮದನನಿಗೆ ಮದುವೆಯಪ್ಪಾ ಪೊಳ್ತು ಬಳಿಯಾಯ್ತು.
ಬೇಗನೆಯೆ ಅರಸುಕುವರಿಯನವಗೆ ತಂದುಕೊಳೆ,
ಪುತ್ರ ಸಂತಾನವಿಲ್ಲದೀ ನೃಪನ ರಾಜ್ಯಂ
ಪೆರರ ಕೆಯ್ಯೊಳ್ ಬೀಳದೆಮಗುಳಿಯುವುದು....
ಇರಲಿ, ಮೊದಲೀ ವಿಘ್ನಮಂ ಪರಿಹರಿಸಿ
ಮುಂತೆ ಮುಂದಣ ಬಟ್ಟೆಯಂ ತರಿಸಲ್ವೆನ್.
*[ಮದನ ಪ್ರವೇಶಿಸುತ್ತಾನೆ.]*

**ಮದನ:** - ಅಪ್ಪಯ್ಯ, ಏಕೆನ್ನ ಬರಹೇಳಿದುದು?

**ದುಷ್ಟಬುದ್ಧಿ:** - ಕುಳಿತುಕೊ, ಹೇಳುವೆನು. *[ಮದನ ಕೂರುತ್ತಾನೆ]*

**ಮದನ:** - ನಿಮ್ಮ ಮೊಗದೊಳಗೇನೊ ಚಿಂತೆ, ಅಪ್ಪಯ್ಯ?

**ದುಷ್ಟಬುದ್ಧಿ:** - ಏನಿಲ್ಲ. ರಾಜಕಾರ್ಯಕ್ಕಾಗಿ ಚಂದನಾವತಿಗೆ
ನಾನೀಗಳೆಯೆ ಹೊರಡುವೆನು.
ನಾನಿಲ್ಲಿಗೈತರುವವರೆಗೆ ನೀನೆ
ರಾಜ್ಯದಾಡಳಿತವಂ ನೋಡಿಕೊಂಡಿರಬೇಕು.

**ಮದನ:** - ಅಪ್ಪಣೆ. ಅಂತಪ್ಪ ರಾಜಕಾರ್ಯವದೇನು?

**ದುಷ್ಟಬುದ್ಧಿ:** - ಕುಳಿಂದಕನ ರಾಜ್ಯಭಾರವಂ ನೋಡಿ ಬರುವೆ.

**ಮದನ:** - *(ಅತ್ತ ನೋಡಿ)* ತಂಗಿ ಬಂದಿಹಳು.
*[ಅಲಂಕಾರಭೂಷಿತೆಯಾಗಿ ಲಜ್ಜೆಯಿಂದ ಹೆಜ್ಜೆಯಿಡುತ್ತಾ ವಿಷಯೆ ಬರುತ್ತಾಳೆ.]*

**ದುಷ್ಟಬುದ್ಧಿ:** - ಬಾರಕ್ಕ. ಏನಿಷ್ಟು ಲಜ್ಜೆ? ಬಾ ಮುಂದೆ.
*(ಮುಂದಕ್ಕೆ ಬರುತ್ತಾಳೆ. ತಂದೆ ಮಗಳ ಯೌವನಲಾವಣ್ಯವನ್ನೂ ಶೃಂಗಾರಮಯ ಸೌಂದರ್ಯವನ್ನೂ ಗಮನಿಸಿ, ಪ್ರಶಂಸನೀಯ ವಾತ್ಸಲ್ಯಾನುಭವದಿಂದ)*
ನೀ ಬಂದುದೇಕೆಂದೀಗ ಗೊತ್ತಾಯ್ತು!

**ವಿಷಯೆ:** - *(ತಂದೆಯ ಗಮನವನ್ನು ಬೇರೆಯ ವಿಷಯದ ಕಡೆ ತಿರುಗಿಸಲೆಂಬಂತೆ)*
ಅಪ್ಪಯ್ಯ, ನಂದನದೊಳಾಂ ನೀರ್ವೊಯ್ದು ಬೆಳೆಯಿಸಿದ
ಚೂತಲತೆ ಪೂತಿಹುದು. ಅದಕೆ... ಅದಕೆ... *(ನಸುನಾಚಿ)*
ಉದ್ಯಾಪನಂಗೈಸಬೇಕದಕೆ.

**ದುಷ್ಟಬುದ್ಧಿ:** - ಮದನ, ನೆರವೇರಿಸೀ ನಿನ್ನ ತಂಗಿಯ ನೋಂಪಿಯಂ.

**ಮದನ:** - ತಂಗೀ, ಆ ಭಾರ ನನ್ನ ಮೇಲಿರಲಿ.

**ವಿಷಯೆ:** - ಅಪ್ಪಯ್ಯ, *(ನಾಚಿಕೆಯಿಂದ ತಡೆತಡೆದು ಹೇಳುತ್ತಾಳೆ.)*
ಗೂಡಿನೊಳಗಿಹ ಹೆಣ್ಣುಗಿಳಿಗೊಂದು ಜೊತೆಯಿಲ್ಲ.
ಅದಕೊಂದು ಜೊತೆ ಬೇಕು.

**ಮದನ:** - *(ಪರಿಹಾಸ್ಯದಿಂದ)* ಪಾಪ! ಕೊರಗುತಿದೆ ಆ ಶುಕತರುಣಿ!

**ವಿಷಯೆ:** - *(ನಸುಮುನಿದಂತೆ)* ನಿನಗೇನು, ಅಣ್ಣಯ್ಯ?
ಮೂರು ಹೊತ್ತೂ ಕತ್ತಿ, ಕುದುರೆ, ಕಾಡು, ಬೇಟೆ!

**ದುಷ್ಟಬುದ್ಧಿ:** - ಇರಲಕ್ಕ, ಬಿಡು... ಇನ್ನೇನು ಬೇಕು?

**ವಿಷಯೆ:** - ಅಪ್ಪಯ್ಯ, ನಾ ಗಿಡಗಳಿಗೆ ನೀರೆರಚುತ್ತಿದ್ದೆ.
ತುಂಬಿಗಳು ಬಂದೆನ್ನ ಮೊಗವೆಲ್ಲವಂ ಮುತ್ತಿ,

ಮುಂಗುರಳ ಮೇಲೆಲ್ಲ ಸುಳಿ ಸುಳಿದು ಝೇಂಕರಿಸಿ,
ಬಹಳ ಭಯಪಡಿಸಿದುವು. ಕೋಗಿಲೆ ಕೂಡ
ಬರಿದೆ ಬಗ್ಗಿಸುತೆನ್ನ ಮೂದಲಿಸುತಿಹುದು!

**ದುಷ್ಟಬುದ್ಧಿ:** – ಇರಲಮ್ಮಾ ಆ ದುರುಳರಂ ಪಿಡಿದು ಸೆರೆಮನೆಗೆ
ಕಳುಹಿಸಲು ಸಿದ್ಧವಾಗಿದೆ ನಮ್ಮ ಸೇನೆ! *(ನಗುತ್ತಾನೆ)*

**ವಿಷಯೆ:** – ಅಪ್ಪಯ್ಯ, ಎಲ್ಲಿಗೆ ಹೊರಡುವುದು ನೀವು?

**ದುಷ್ಟಬುದ್ಧಿ:** – ಚಂದನಾವತಿಗಮ್ಮಾ. ಕೇಳಿಬಲ್ಲೆಯ ನೀನು?

**ವಿಷಯೆ:** – *(ಸಂಭ್ರಮದಿಂದ)* ಚಂದ್ರಹಾಸನಿಹ ಪಟ್ಟಣಕ್ಕೇನು?

**ದುಷ್ಟಬುದ್ಧಿ:** – *(ಧ್ವನಿಯನ್ನು ತಟಕ್ಕನೆ ಬದಲಾಯಿಸಿ)* ಹೌದು.
ನಾನಿನ್ನು ಹೊರಡುವೆನು ಹೊತ್ತಾಯ್ತು.
ಹೆಣ್ಣಗತಿ ಕುತೂಹಲಂ ತಗದು! *(ಹೊರಡುತ್ತಾನೆ)*

**ವಿಷಯೆ:** – *(ತತ್ತರಿಸಿ, ಅವಾಕ್ಕಾಗಿ, ತಂದೆ ಹೂಗುವುದನ್ನೆ ನೊಡುತ್ತಾ ನಿಂತು ಮತ್ತೆ ಅಣ್ಣನ ಕಡೆ ತಿರುಗಿ)*
ಅಪ್ಪಯ್ಯ ಸಿಟ್ಟುಗೊಂಡರೇ, ಅಣ್ಣಯ್ಯ?

**ಮದನ:** – ಏನಿಲ್ಲ, ತಂಗಿ. ಒಮ್ಮೊಮ್ಮೆ ಹಾಗಾಗುತ್ತಾರೆ ಅಷ್ಟೆ.

**ವಿಷಯೆ:** – *(ಮತ್ತೆ ಮುನ್ನಿನ ಸರಳತೆ, ಸಲುಗೆ, ವಿಶ್ವಾಸ, ವಿನೋದಭಾವದಿಂದ)*
ಅಣ್ಣಯ್ಯ, ಅಪ್ಪಯ್ಯ ಅತ್ತಿಗೆಯ ತರಲೆಂದು
ಚಂದನಾವತಿಗೆ ಹೊರಟಿಹನೆ?

**ಮದನ:** – *(ಪ್ರತಿಹಾಸ್ಯಶೀಲನಾಗಿ)* ಅಯ್ಯೋ, ನೀನೆಂಥ ಪೆಚ್ಚಿ!
ಅತ್ತಿಗೆಗಲ್ಲ, ಭಾವನನ್ವೇಷಣೆಗೆ!

**ವಿಷಯೆ:** – ಅಣ್ಣಯ್ಯ, ಸಾಕು ನಿನ್ನೀ ವಿನೋದ… ಅದಿರಲಿ;
ನಿನ್ನ ನಾನೊಂದು ಕೇಳಲೇ?

**ಮದನ:** – ಒಂದರಿಂದಲೇ ನಿನಗೆ ತೃಪ್ತಿಯೇ? ಆಶ್ಚರ್ಯ!

**ವಿಷಯೆ:** - ನಾನೆಂದರೆ ನಿನಗಷ್ಟು ತಾತ್ಸಾರ:
ಏಗಳುಂ ಮೂದಲಿಕೆ! *(ವಿಷಣ್ಣವಾಗುತ್ತಾಳೆ)*

**ಮದನ:** - *(ಸಂತೈಸುವಂತೆ)* ಎಂದೆಂದಿಗೂ ಅಲ್ಲ. ನೀನಕ್ಕರೆಯ ತಂಗಿ.
ಪ್ರೀತಿಗಾಗಿಯೆ ನಿನ್ನನಿಂತು ಪೀಡಿಪುದು! ಗೊತ್ತಾಯ್ತೆ?

**ವಿಷಯೆ:** - *(ಹರ್ಷದಿಂದ)*
ಚಂದ್ರಹಾಸನ ನೀನು ನೋಡಿರುವೆ ಏನಣ್ಣಯ್ಯ?
ಆತನ ಯಶೋದೀಪ್ತಿ ಜಗದ ಮೇಲೆಲ್ಲ
ಹಬ್ಬುತಿದೆಯಂತೆ! ಹೌದೇನು?

**ಮದನ:** - ಹೌದಾದರೇನಂತೆ?
ನಿನಗವನಿನಿಯನಾಗಿ ಕೈಹಿಡಿಯಲಾಸೆಯೆ?

**ವಿಷಯೆ:** - ಬಿಡು, ಅಣ್ಣಯ್ಯ, ನಿನಗೇಗಳುಂ ಪರಿಹಾಸ್ಯ.

**ಮದನ:** - ಗೊತ್ತಾಯ್ತು. ಅವನ ಮೇಲಲ್ಲ,
ಅವನ ಕೀರ್ತಿಯ ಮೇಲೆಯೇ ನಿನಗೆ ಕಣ್!
ಚೆಲುವೆಗೆ ಸೊಬಗಿನಾಶೆ!...
ನಿನಗಿಂತ ಮುಂದಾಗಿ ಬಂದವನು ನಾನು:
ನಾನರಿಯೆನೇನು ನನ್ನ ತಂಗಿಯನು?

**ವಿಷಯೆ:** - *(ಹುಸಿ ಮುನಿಸಿನಿಂದ)*
ನಾನರಿಯೆನೇನು ನನ್ನಣ್ಣನನು?
ನಾ ಬಲ್ಲೆ: ಸರ್ವಜ್ಞಮೂರ್ತಿ ನೀನು!...
ಅಮ್ಮ ಕೂಗುವಳೆನ್ನ: ಹೋಗುವೆನು.

*[ಎಂದು ತಟ್ಟಕ್ಕನೆ ತಿರುಗಿ ಓಡುತ್ತಾಳೆ. ಮದನ ಆ ಕಡೆಗೇ ಅಕ್ಕರೆಯಿಂದ ನೊಡುತ್ತಿರುತ್ತಾನೆ.]*

*ಪರದೆ ಬೀಳುತ್ತದೆ.*

*

<u>**ದೃಶ್ಯ೨**</u>

*[ಚಂದನಾವತಿಯ ಅರಮನೆಯ ಒಂದು ವೈಭವದ ಕೊಠಡಿ. ದುಷ್ಟಬುದ್ಧಿ ಕುಳಿತಿರುತ್ತಾನೆ. ಸುತ್ತಲೂ ನೋಡಿ ಕೆಳ ದುಟಿ ಕಚ್ಚಿಕೊಳ್ಳುತ್ತಾನೆ.]*

**ದುಷ್ಟಬುದ್ಧಿ:** - ಏನಿದೀ ಸಂಪದಂ! ಏನಿದೀ ವೈಭವಂ!
ಏನಿದೀ ಬಿಂಕಂ, ಬೆಡಂಗು! ಚಕ್ರೇಶರ್
ಅನುಭವಿಪ ಸಿರಿ ಇಲ್ಲಿ ಸೂರೆಗೊಂಡಿಹುದಲ್ತೆ!
ಪಳಕುಗಳ ನೆಲಗಟ್ಟು; ಮರಕತಂಗಲ ಜಗಲಿ;
ಪೊಳೆವ ನೀಲದ ಭಿತ್ತಿ; ಬಜ್ಜರದ ಕಂಭಗಳ್;
ತೊಳಪ ವೈಡೂರಿಯದ ಮದನಕ್ಕೆ; ಮಿರು ಮಿರುಪ
ಗೋಮೇಧಿಕದ ಬೋದಿಗೆಗಳ್; ತಳತಳಿಸುತಿಹ
ಪುಷ್ಯರಾಗದ ತೊಲೆಗಳ್; ಎಸೆವ ಮಾಣಿಕಂಗಳ ಲೋವೆ;
ಮುತ್ತುಗಳ ಸೂಸುಕಂ; ಮಿಸುಪ ಪವಳದ ಪುತ್ತಳಿ;
ಪೊನ್ನಪೊದಿಕೆ! ಕಂಗಳಂ ಕುರುಡುಗೈಯುವ ತೆರದಿ
ಉರಿಯುತಿಹುದರಮನೆ! ಈ ಪುರವೊ ಭೂತಳದ
ವೈಕುಂಠದಂತಿಹುದು! ಕಿರಿಯರಸಗೇತಕೀ
ವೈಭವಂ? ಈಗಳೆಯೆ ಇವನ ಬಿಂಕವ ಮುರಿದು,
ನಮ್ಮಧೀನಂಗೊಳಿಸದಿದ್ದರೆ.... ಮುಂದೆ....
ಕೈಮೀರುವನ್.... *(ಯಾರೊ ಬರುತ್ತಿರುವುದನ್ನು ಗಮನಿಸುತ್ತಾನೆ.)*
ಚಂದ್ರಹಾಸನ ಕೂಡಿ
ಕುಳಿಂದಕನೆ ಬರುತಿಹನು. ಏಂ ಭದ್ರರೂಪಂ
ಆ ತರುಣನಿಗೆ! ಪುಣ್ಯವಂತನೆ ದಿಟಂ ಕುಳಿಂದಕಂ!
*[ಕುಳಿಂದಕನು ಚಂದ್ರಹಾಸನೊಡನೆ ಪ್ರವೇಶಿಸಿ ಇಬ್ಬರೂ ದುಷ್ಟಬುದ್ಧಿಗೆ ನಮಸ್ಕರಿಸುತ್ತಾರೆ. ದುಷ್ಟಬುದ್ಧಿ ನಗೆಮೊಗ ನಾಗಿ ಅರ್ಧ ಎದ್ದು ಪ್ರತಿನಮಸ್ಕಾರ ಮಾಡುತ್ತಾನೆ. ಮೂವರೂ ಕುಳಿತುಕೊಳ್ಳುತ್ತಾರೆ.]*

**ಕುಳಿಂದಕ:** - ಮಂತ್ರಿವರ್ಯಂಗೆ ಸುಖಾಗಮನಮಂ ಬಯಸುವೆನ್.

**ಚಂದ್ರಹಾಸ:** - ಹಿರಿಯರಿಗೆ ವಂದಿಪೆನ್.

**ದುಷ್ಟಬುದ್ಧಿ:** - ನಿಮಗೊಳ್ಳಿತಕ್ಕೆ!

**ಕುಳಿಂದಕ:** - ಬಟ್ಟೆಯ ಬಳಲ್ಕೆಯಿಂ ದಣಿದಿಹಿರಿ. ನಾವಿನಿತು
ತುಳಿವಿ ಬಂದಿರ್ದೊಡೆ ಲೇಸಾಗುತಿತ್ತಲ್ತೆ?

**ದುಷ್ಟಬುದ್ಧಿ:** - ಅಂತಪ್ಪ ದಣಿವದೇನಿಲ್ಲ. ನಿಮ್ಮ ನಾಡಿನ
ಮಾರ್ಗಗಳೊ ದಣಿವಿಗವಕಾಶವನೆ ಕೊಡವು!
ಏನ್ ಸೊಗಸು! ಏನ್ ನುಣ್ಪು! ಸಾಲ್ಮರಗಳೇನು!
ಪಸುರ್ ಮಂಟಪಗಳೇನು! ಅರವಟ್ಟಿಗೆಗಳೇನು!
ತಣಿವನಲ್ಲದೆ ಕಣ್ಗೆ, ದಣಿವೆನಸಗವು ಮೆಯ್ಗೆ.

**ಕುಳಿಂದಕ:** - ತಮ್ಮ ಈ ಶ್ಲಾಘನೆಯೆ ಪರಮ ಫಲದಂ ನಮಗೆ.
ಈ ಕುಮಾರನ ಮೆಯ್ಮೆಯಿಂದೀ ನಾಡಿಗೀ ಸೊಗಂ.
*[ಕುಳಿಂದಕನು ಚಂದ್ರಹಾಸನ ಕಡೆಗೆ ತೋರುಗಣ್ಣಾಗುತ್ತಾನೆ. ದುಷ್ಟಬುದ್ಧಿ ಹಸನ್ಮುಖಿಯಾಗಿ ಚಂದ್ರಹಾಸನನ್ನು ಕುರಿತು,]*

**ದುಷ್ಟಬುದ್ಧಿ:** - ಕೇಳಿರ್ದ್ದೇನೀತನ ಮಹಾಮಹಿಮೆಯಂ;
ಕಾಣ್ಬ ಸೊಗಮೇ ಈಗಳೊದಗಿಹುದು.
ಏನೇನೊ ಕತೆವೇಳ್ವರೀತನಂ ಕುರಿತು;
ದಿಟದ ಸಂಗತಿಯಂ ನಿನ್ನಿಂದರಿವೆನಿಂದು.
ಈತನೇಂ ನಿನ್ನ ಸುಕುಮಾರನೊ?

**ಕುಳಿಂದಕ:** - ವಿಪಿನದೊಳ್ ನನಗೀ ಕುಮಾರಕಂ ಮುಂಗೈದ
ತಪದ ಫಲದಿಂ ತಾನೆ ದೊರೆಕೊಂಡನ್. ಈತನಂ
ಕೃಪೆಯಿಂದೆ ನೀವೆ ಪಾಲಿಸವೇಳ್ಪುದು.
*[ದುಷ್ಟಬುದ್ಧಿ ಚಂದ್ರಹಾಸನ ಕಾಲುಗಳ ಕಡೆ ಗಮನಿವಿಟ್ಟು ನೋಡಿ ಅನ್ಯಮನಸ್ಕನಾಗುತ್ತಾನೆ.]*

**ದುಷ್ಟಬುದ್ಧಿ:** - *(ತನ್ನೊಳಗೆ)*
ಈತನಹುದಾ ಅನಾಥವಾಲಕಂ! ಕಾಲ್ವೆರಳೆ ಸಾಕ್ಷಿ!
ಚಂಡಾಲರೆನಗಿಂತು ವಂಚನೆಯ ಮಾಡಿಹರೆ?
ನನಗರಿಯದಂದೆನ್ನ ಕುತ್ತಿಗೆ ಕೊಯ್ದಿಹರು!
*(ಏಳುತ್ತಿರುವ ತನ್ನ ಭಾವಗಳನ್ನು ತಡೆದು, ಹುಸಿನಗೆ ಬೀರಿ ಕುಳಿಂದಕನ ಕಡೆ ತಿರುಗಿ ಬಹಿರಂಗವಾಗಿ)*
ಕುಳಿಂದಕ, ನಿನ್ನ ಈ ಕುಮಾರನಂ ಕಂಡೊಡನೆ
ಮೂಡಿತುತ್ಸವಮೆನಗೆ. ನಿನ್ನ ಸಿಂಹಾಸನಕೆ
ಈತನೆಯೆ ಮುಂದೆ ಮಹಾರ್ಹನಲ್ತೆ? ಆದೊಡಂ....
*[ಎಂದು ಸುಮ್ಮನಾಗಿ ದೂರನೋಡಿ ಚಿಂತಿಸುವಂತನಾಗುತ್ತಾನೆ]*

**ಕುಳಿಂದಕ:** - ತಮ್ಮ ವಿಶ್ವಾಸದೊಳ್ ಚಂದ್ರಹಾಸಂಗೀತಂಗೆ
ಅಭ್ಯುದಯ ಸಿದ್ಧಿ.

**ದುಷ್ಟಬುದ್ಧಿ:** - *(ತನ್ನೊಳಗೆ)* ಬಂಜೆಯಾಗದು ವಿಪ್ರನ್ ಅಂದೆನ್ನೊಳ್
ಆಡಿದಾ ನುಡಿ. ರಾಜಲಕ್ಷಣದಿಂದೆ ಒಪ್ಪುವಿವನನ್
ಭಂಜಿಸದೊಡೆ ಈ ಧರಣಿಗೀತನೆಯೆ ಅರಸಾದಪನ್;
ಬಳಿಕ ಮಗ ಮದನಂಗೆ ದೊರೆತನಂ ಶಶವಿಷಾಣಂ!
ಬಲಶಾಲಿಯಾಗಿಹನ್. ಅಗ್ಗಳಿಕೆಗೀತನ್
ಅಂಜುವವನಲ್ಲ. ನಂಜನೂಡಿಸಿ ಕೊಲುವ
ಉಪಾಯಮಂ ನೆಗಳ್ದಪನ್. *(ಬಹಿರಂಗವಾಗಿ)*

ಕುಳಿಂದಕ,
ನೀನರಸನಾದೊಡಂ ಆಶ್ರಿತಂ. ನಿನಗಿಂ
ದತ್ತುಮಗನಪ್ಪುದಕೆ ಕುಂತಳೇಂದ್ರನ ಆಜ್ಞೆ
ಬೇಕಂದೆ ನನ್ನ ಮತಿ. ಈತನೀ ಭದ್ರರೂಪವೆ
ರಾಜೇಂದ್ರನಂ ಮನವೊಲಿಸಿ. ಆತನನುಮತಿಯ
ಫಲವೀವುದೆಂಬುದೆನ್ನಾಶೆ. ಮಗ ಮದನಂಗೆ
ಅವಸರದ ಪತ್ರವೊಂದನು ಕೊಡುವೆ. ಈಗಳೆಯೆ
ಚಂದ್ರಹಾಸನೆಯೆ ಅದನು ಕೊಂಡೊಯ್ಯಲಾ ಎಡೆಗೆ.

**ಕುಳಿಂದಕ:** - ತಮ್ಮಾಣತಿ.

**ದುಷ್ಟಬುದ್ಧಿ:** - *(ಲಘುಮನಸ್ಸಿನಿಂದೆಂಬಂತೆ ಚಂದ್ರಹಾಸನಿಗೆ)*
ರಾಜಕುಮಾರ, ನಿನ್ನವೋಲ್ ಯುವಕರ್ಗೆ
ಪಯಣವೆಂದರೆ ಏನು? ಬರಿಯಾಟವೈಸೆ!

**ಚಂದ್ರಹಾಸ:** - ಲೇಖನವ ಬರೆದು ಕೊಡಿ. ಶೀಘ್ರದಲ್ಲಿಯೆ ಹೋಗಿ
ಕಾರ್ಯವನು ಕುಂದಿಲ್ಲದಂತೆಸಗಿ ಬಹೆನು.

**ಕುಳಿಂದಕ:** - ನೀನೊಬ್ಬನೆಯೆ ಹೋಗುವೆಯಾ? ಜೊತೆಗೆ ಕಿಂಕರರು
ಇರಲಿ. ವೀರಸೇನ, ರಣಸಿಂಹರಿಹರಲ್ತೆ?

**ದುಷ್ಟಬುದ್ಧಿ:** - ಆರವರು?

**ಕುಳಿಂದಕ:** - ನಮ್ಮ ಸೈನ್ಯಾಧಿಕಾರಿಗಳ್.
ಅಜೀವಸ್ನೇಹಿತರ್ ಚಂದ್ರಹಾಸಂಗೆ.

**ದುಷ್ಟಬುದ್ಧಿ:** - ಹಾಗೆಯೆ ಮಾಡಲಿ.
ಒಂಟಿಯಾಗಿರೆ ದಾರಿ ದೂರವಾಗುವುದು.

**ಚಂದ್ರಹಾಸ:** - ತೇಜಿಗಳನಳವಡಿಸಿ ಸಿದ್ಧರಾಗುವೆವು.
*[ಎಂದು ಏಳುತ್ತಾನೆ]*

**ದುಷ್ಟಬುದ್ಧಿ:** - ನೀನು ಹೋಗುವ ಕಾರ್ಯ ಗೋಪ್ಯವೆಂದೆಣಿಸು.

**ಚಂದ್ರಹಾಸ:** - ಹಿರಿಯರಪ್ಪಣೆ. *(ತಲೆಬಾಗಿ ಹೊರಡುತ್ತಾನೆ)*

**ದುಷ್ಟಬುದ್ಧಿ:** - ಏನದಮ್ಯ ಉತ್ಸಾಹ ಈ ಕುಮಾರನಿಗೆ!….
ನಾನೀಗಳೆಯೆ ಲೇಖನವ ಸಿದ್ಧಗೊಳಿಸುವೆನು.

*[ಕುಳಿಂದಕ ಎದ್ದು ನಮಸ್ಕರಿಸಿ ಹೊರಡಲುದ್ಯುಕ್ತನಾಗುತ್ತಾನೆ. ದುಷ್ಟಬುದ್ಧಿಯೂ ಎದ್ದು ಕೈಜೋಡಿಸಿ ಬೀಳ್ಕೊಡುತ್ತಾನೆ.]*

*ಪರದೆ ಬೀಳುತ್ತದೆ.*

## ಅಂತ್ಯರಂಗಂ-ದೃಶ್ಯ ೩

<u>**ದೃಶ್ಯ೩**</u>

*[ಕುಂತಳನಗರದ ಬಾಹ್ಯೋಪವನ. ವೀರಸೇನ. ರಣಸಿಂಹ, ಚಂದ್ರಹಾಸ ಬರುತ್ತಾರೆ ಕುದುರೆಸವಾರಿ ಮಾಡಿ ಬಹ ದೂರ ಪಯಣ ಬೆಳೆಸಿದ ಚಿಹ್ನೆಗಳೆಲ್ಲ ಕಾಣುತ್ತವೆ.]*

**ಚಂದ್ರಹಾಸ:** - ಮಿತ್ರರಿರ, ಇದೆ ಕುಂತಳನಗರಿಯ ಬಾಹ್ಯೋಪವನಂ
ತಾನೆಂಬ ದೂರಭಾವನೆ ನನ್ನ ನೆನಹಿನ
ದಿಗಂತದಲಿ ಸುಳಿಯುತಿದೆ. ನಯಸರದ ಕೋಗಿಲೆಯ
ಸಾದರದ ನುಡಿ ನಮ್ಮನಾದರಿಸಿ ಕರೆಯುತಿದೆ ಕೇಳಿ!
*[ಕೋಗಿಲೆಯ ಉಲಿಹ ಕೇಳಿಸುತ್ತದೆ.]*

**ರಣಸಿಂಹ:** - ಈ ಒಂದೆಡೆಯೊಳೆಯೆ ಅಲ್ತು. ಎಲ್ಲೆಡೆಯೊಳುಂ
ದಾರಿಯುದ್ದಕೂ ಶುಭದ ಮಳೆ ಕರೆದುದೆಮ್ಮಮೇಲೆ.
ದಿನವೆರಡರಲಿ ಮುಗಿಯಿಸುವ ಪಯಣಮಂ
ಒಂದೆ ದಿನದಲಿ ಬಂದೆವೈಸೆ ಪೂರೈಸಿ!
ಎಲ್ಲೆಡೆ ಸುಖಾಗಮನ! ಸರ್ವರಿಂ ಸುಸ್ವಾಗತ!
ನಿನ್ನ ಮೇಲಿಹ ಸದಾ ಭಗವತ್ ಕೃಪೆಗೆ
ಬೇರೆ ಏತಕೆ ಸಾಕ್ಷಿ, ಚಂದ್ರಹಾಸ?

**ವೀರಸೇನ:** - ಮೊದಲು
ಕುಂಕುಮ ಸುರಂಜಿತ ಹರಿದ್ರಾಂಗದಿಂ ಮೆರೆವ
ನೂತನ ವಧೂವರರು ಬಂದರಿದಿರಾಗಿ!

**ಚಂದ್ರಹಾಸ:** - ಆಮೇಲೆ ಸಮ ಸದಾಕಾರದಿಂ ಬರುತಿರ್ದ
ಋಷಿವರ್ಯರಿರ್ವರಂ ಕಂಡು ನಮಿಸಿದೆವು!

**ರಣಸಿಂಹ:** - ಇರ್ದುದವರಾಶೀರ್ವಾದದೊಳ್
ಅದೆಂತಪ್ಪ ಮಂಗಳಧ್ವನಿ!

**ವೀರಸೇನ:** - ತರುವಾಯ ರಮಣೀಯ ಕುಸುಮ ಫಲಮಂ ಕೊಂಡು
ನಿನಗೀಯಲೈತಹ ವನಾಧಿಪರ ನೋಡಿದೆವು!

**ರಣಸಿಂಹ:** - ಆಮೇಲೆ ಇದಿರು ಬಂದಳು ಕಣ್ಗೆ ಚೆಲ್ವಾಗೆ
ಎಳಗರುವೆರಸಿ ಬರ್ಪ ಗೋಮಾತೆ!

**ಚಂದ್ರಹಾಸ:** - ಇಲ್ಲಿ, ಕುಂತಳನಗರಲಕ್ಷ್ಮಿ ಸುಸ್ವಾಗತಿಸೆ
ಚಾಚಿರುವ ಹಸುರು ಹೂವಿನ ನೀಳ್ದ ತೋಳ್ಗಳೋಲ್
ತಳಿತ ಬನವೆಮ್ಮನೆದುರುಗೊಂಡಿರ್ಪುದೈಸೆ!...
ಕೆಳೆಯರಿರ, ಹರಿಗಳಿಗೆ ನೀರ್ಕುಡಿಸಿ,
ಎಳೆವುಲ್ಲಿನಾಹಾರಮಂ ಕೊಯ್ದಡಕಿ,
ತಣ್ಣೆಳಲಲ್ಲಿ ಆಯಸವ ಪರಿಹರಿಸಿಕೊಳ್ಳಿ, ಹೋಗಿ.
ನಾನಿಲ್ಲೆ ಬನದಲ್ಲಿ ಅಡ್ಡಾಡಿ, ಬೇಗನೆಯೆ
ನಿಮ್ಮೆಡೆಗೆ ಬರುವೆ.

**ರಣಸಿಂಹ:** - ಈ ಉದ್ಯಾನ ಶೋಭೆಗೆ ರಸೋದ್ದೀಪನಂಗೊಂಡು
ಮೈಮರೆಯದಿರು ಭಕ್ತಿಮೂರ್ಛೆಗೆ ಸಂದು!

**ವೀರಸೇನ:** - ಅರಣಾದ್ರಿ ಸೃಷ್ಟಿಸೌಂದರ್ಯದಿಂ ಭಾವವಶನಾಗುವಾ
ನಿನ್ನ ರೂಢಿಯ ನೆನೆದು ನಮಗಿನಿತು ಆಶಂಕೆ!

**ಚಂದ್ರಹಾಸ:** - ಬೇಡ ನಿಮಗಾ ಭಯಂ, ಇಲ್ಲಿ. *(ವೀರಸೇನ, ರಣಸಿಂಹ ಹೋಗುತ್ತಾರೆ.)*
ಅಃ ಈ ಉದ್ಯಾನ ಶೋಭಾರತಿ
ಪಂಕ್ತಿ ಪಂಕ್ತಿಯೆ ದೀರ್ಘವಂಕಿಮಂ ಮೆರೆವಸಂಖ್ಯೇಯ
ತನ್ನ ಬಹು ಪುಷ್ಪಬಾಹುಗಳಿಂದೆ
ನನ್ನನಕ್ಕರೆಯಿನಪ್ಪುತಿಹಳಲ್ತೆ?...
ಮನವ ತೇಳಿಸುತಿಹುದು ನೆನಪಿನ ದೋಣಿ
ಕಾಲವಾಹಿನಿಯ ಆ ದೂರತೀರಕ್ಕೆ.
ವಿಸ್ಮೃತಿಯ ವೈತರಣಿಯೊಳ್ ಮುಳುಗಿದ್ದ ಆ ಅನುಭವಂ
ಪೂರ್ವಜನ್ಮ ಸ್ಮರಣೆಯಂತೆ ಮೈದೋರುತಿಹುದಿಂದು.
*(ದೂರನೋಡಿ)*
ಆ ತರಂಗಿಣಿಯ ಸೈಕತದೊಳಲ್ತೆ
ಅಂದೆನಗೆ ದೊರೆತುದಾ ದಿವ್ಯೋಪಲಂ
ಪುಟ್ಟ ಸಾಲಗ್ರಾಮದೊಂದು ರಮಣೀಯ ಶೀಲೆ,
ಶ್ರೀಹರಿ ಕೃಪಾ ಪ್ರತೀಕಂ!.. *(ಭಕ್ತಿಭಾವದಿಂದ ನಿಲ್ಲುತ್ತಾನೆ.)*
ಭಗವಂತನ ಕೃಪೆ ಒಮ್ಮೊಮ್ಮೆ ಎನಿತು ಕಠೋರ!
ಎನಿತು ಘೋರ?....
ತಳಿತೆಸೆವ ಈ ಮಾಮರದ ಕರಿಯ ತಣ್ಣೆಳಲಲ್ಲಿ
ಹಸುರ ಮೇಲ್ಮಲಗಿ ಮಾರ್ಗಶ್ರಮವ ಕಳೆಯುವೆನು.
*(ತೋಳನ್ನು ತಲೆಗಿಂಬುಮಾಡಿ ಮಲಗುತ್ತಾನೆ. ವಿಷಯೆ, ಚಂಪಕಮಾಲಿನಿ, ಪಂಕಜೆ ಪ್ರವೇಶಿಸುತ್ತಾರೆ.)*

**ಪಂಕಜೆ:** - ಬನದ ಪೆಂಪೆಂತು ಮೋಹಿಪುದು ಮನವ,
ನೋಡಿದೆಯಾ, ಕೆಳದಿ.

**ವಿಷಯೆ:** - ಬನದೇವಿ ತನ್ನಿನಿಯನಾಗಮನಮಂ ಬಯಸಿ,
ಪಸುರುಡೆಯನುಟ್ಟು, ಪೊಂದೊಡವೆಗಳ ತೊಟ್ಟು,
ನವಕುಸುಮ ಮಾಲೆಯಂ ಮುಡಿದು,
ಪೊಳೆವ ಪೂಗೆಂಪಿನಿಂ ಪಣೆಗೆ ಬೊಟ್ಟಿಟ್ಟು,

ಮೆಯ್ಗೆ ಬಿರಿದಲರ ಪರಿಮಳಂಗಳ ಪೂಸಿ,
ಕಾಣಿಕೆಯ ಕೊಡಲೆಂದು ಕೈಯಲ್ಲಿ ಹಣ್ಣುಗಳ
ಗೊಂಚಲುಗಳಂ ಪಿಡಿದು ಕಾದಿಹಳೊ ಎಂಬಂತೆ
ತೋರುತಿದೆ!

**ಚಂಪಕಮಾಲಿನಿ:** - ನಿನ್ನಂತೆ ಅಲ್ತೆ ನಿನ್ನ ಬನದೇವಿಯುಂ?

**ಪಂಕಜೆ:** - ವಿಷಯೆ ಯಾರನು ಬಯಸಿ ಕಾದಿಹಳು,ಚಂಪಕಾ?

**ಚಂಪಕಮಾಲಿನಿ:** - ಅವಳ ಪೊಸ ಜೌವ್ವನವ ನೋಡಿದರೆ ತೋರುವುದು
ಯಾರನೋ ಕಾಯುತಿಹಳೆಂದು!

**ವಿಷಯೆ:** - ಕಾಯುತಿರುವವಳು ನಾನಲ್ಲ; ನೀನು!

**ಚಂಪಕಮಾಲಿನಿ:** - *(ಕೈ ತೋರಿಸುತ್ತಾ)* ಅಕ್ಕ, ನಿನ್ನೆ ನೀನಾ ಕೊಳದ
ಮಣಿಶಿಲಾ ಸೋಪಾನದಲೊಬ್ಬಳೆಯೆ ಕುಳಿತು
ಆವ ಸುಂದರ ಮೂರ್ತಿಯಂ ನೆನೆಯುತಿದ್ದೆ?
ನಾನು ಬಳಿ ಸಾರ್ದರೂ ನೀನರಿಯಲೆಯೆ ಇಲ್ಲ;
ನಾನು ಕರೆದರೂ ನಿನಗೆ ಕೇಳಿಸಲೆ ಇಲ್ಲ.
ಬಾಹ್ಯಲೋಕವ ಮರೆತು ಏಕಾಗ್ರಚಿತ್ತದಿಂ
ಜಾನಿಸುವ ಜೋಗಿಯಂತಾಗಿಬಿಟ್ಟಿದ್ದೆ!
ಆರೊ ಆ ಪುಣ್ಯಾತ್ಮ, ನಿನ್ನ ಧ್ಯಾನದ ಪರಮಪುರುಷ?

**ವಿಷಯೆ:** - ಧ್ಯಾನಿಗಳ್ ಬೇರೆವೇರೆಯಾದೊಡಂ
ಧ್ಯೇಯಮಾ ಪರಮಪುರುಷಂ ಸರ್ವರ್ಗಂ ಒರ್ವನಲ್ತೆ?
ನಮ್ಮಿರ್ವರ್ಗಮಂತೆ! ಬೇರೆವೇರೆಯೆ?

**ಚಂಪಕಮಾಲಿನಿ:** - ಅಬ್ಬ! ಪಂಡಿತೋತ್ತಮೆ,
ಪರಮಾತ್ಮ ನಲ್ತು ನನ್ನಾ ಕುತೂಹಲಂ!
ಆ ಕೊಳದ ಮಣಿಶಿಲಾ ಸೋಪಾನದೊಳ್
ಒರ್ವಳೆಯೆ ತಳ್ತು ಕುಳ್ತು
ಆವ ಚೆಲುವನಂ ಜೀವಾತ್ಮನಂ ನೆನೆಯುತಿದ್ದೆ?
ಎಂಬುದೆನ್ನಯ ಪ್ರಕೃತ ಪ್ರಶ್ನೆ!

**ವಿಷಯೆ:** – *(ನಕ್ಕು)* ತಂಗಿ, ಕೇಳ್, ಪೇಳ್ವೆನ್: ತೆಂಬೆಲರ ಸೊಗಸಿಂದ
ತಲೆದೂಗುವಂಬುಜಗಳೆಡೆಯಲ್ಲಿ
ಮಂಜುಳ ನಿನಾದದಿಂ ಮೊರೆದಿರ್ದ
ತುಂಬಿಗಳ ಬಿನದಮಂ ಪರಿಕಿಸುತಲಿದ್ದೆ.

**ಚಂಪಕಮಾಲಿನಿ:** – ಒಚ್ಚೇರೆಗಣ್ಣ ಕೋಮಲೆಯೆ,
ಮನಸಿಜನ ಮಸೆದಂಬೆ,
ನಿನ್ನ ಕಂಗಳಲೇಕೆ ನಾನು ಬಳಿಸಾರೆ
ಕಂಬನಿಗಳಾಡಿದುವು?
ಕಲಕೀರವಾಣಿಯೇ, ಕಂಠ ಗದ್ಗದವಾದುದೇಕೆ?
ಏಕೆ ಕಂಪಿಸಿತು ತೊಂಡೆವಣ್ತುಟಿ?
ಕೆಂದಾವರೆಯ ಮೊಗದಿ ಮಲ್ಲಿಗೆ ಮಲರ್ದುದೇಕೆ?
ನಳನಳಿಪ ಹೂಗೆನ್ನೆಯಲಿ ಬೆಮರಿಳಿಯಿತೇಕೆ?….

**ಪಂಕಜೆ:** – *(ಚಂಪಕಮಾಲಿನಿಗೆ)*
ನೀನಿಲ್ಲಿಗೈತರುವ ಮುನ್ನವಳು, *(ವಿಷಯೆಯ ಕಡೆ ತಿರುಗಿ)*
ಹೇಳಲೆ, ಸಖೀ?….
ಹಾಡುತಿದ್ದಳು ಪ್ರೆಮಗೀತಿಕೆಯೊಂದನಿಂಪಾಗಿ!…
ನಾನು ಮಾಮರವನಪ್ಪಿರುವ ಮಲ್ಲಿಗೆಯ ಹೊದರ
ಬಳ್ಳಿಯಲಿ ಹೂಕೊಯ್ಯುತಿದ್ದಾಗ ಆಲಿಸಿದೆ. *(ವಿಷಯೆಗೆ)*
ಹಾಡಲಿಲ್ಲವೆ, ದೇವಿ? ನಿಜವನೊರೆ.

**ವಿಷಯೆ:** – ಪಂಕಜೆ, ನಿನಗೇಗಳೂ ಹಾಡುವುದೆ ಹುಚ್ಚು.
ನೀನಂದು ಬೃಂದಾವನದಿ ಗೋಪಿಯಾಗಿದ್ದೆಯೋ
ಏನೋ?

**ಪಂಕಜೆ:** – ನೀ ರಾಧೆಯಾಗಿದ್ದಿದ್ದರೆ!…
ಏಗಳುಂ ನೀನಾವನೊಬ್ಬನ ನೆನೆದು ಚಿಂತಿಸಿಹೆ!

**ಚಂಪಕಮಾಲಿನಿ:** – ವಿಷಯೆ, ಅದು ಇರಲಿ. ಆ ಹಾಡ ಹಾಡೀಗ.
*(ವಿಷಯೆ ಸುತ್ತಲೂ ನೋಡುತ್ತಳೆ.)*
ಸುತ್ತ ನೋಡುವುದೇಕೆ? ಯಾರೂ ಇಲ್ಲಿಲ್ಲ.

**ವಿಷಯೆ:** - ಅದಕಲ್ಲ, ಅಂಗಜನ ಸೊಕ್ಕಾನೆ!
ಆ ಕೊಳದೊಳಿದ್ದ ಅರಸಂಚೆಗಳು ಗುಂಪಾಗಿ
ಮಾಲೆಮಾಲೆಗಳಾಗಿ ಹಾರುತಿಹವೇಕೆಂದು
ಬೆರಗಾಗಿ ನೋಡಿದೆನು...

**ಪಂಕಜೆ:** - ಅದಕೇಕೆ ಬೆರಗು?
ನಿನ್ನ ನಡೆಯ ವಿಲಾಸಮಂ ಕಂಡು
ಕಲಹಂಸಗಳು ನಾಚಿ ಹಾರಿದವು ನಭಕೆ
ಕಾಲಿಂದೆ ನಡೆಯಲೊಲ್ಲದೆ...

**ಚಂಪಕಮಾಲಿನಿ:** - ಅಲ್ಲದೆಯೆ
ನೀರ ಮೇಲಕೆ ನೆಗೆದು ಮಿಂಚಿ ಮುಳುಗುವ ಮೀನು
ಈ ಲೋಲಲೋಚನೆಯ ದಿಟ್ಟಿಗಳ ಕಂಡು
ತಮ್ಮಾಟ ಪಾಸಟಿಯಾಗದಿರೆ
ಲಜ್ಜೆಯಿಂದಾಳಕ್ಕೆ ಮುಳುಗೆ, ಪಾಪ,
ನೀರಿನಾಹಾರ ದೊರಕದೆ ಬಾನ್ಗೆ ಹಾರಿದುವೊ
ಏನೊ?

**ವಿಷಯೆ:** - ರಸಿಕತೆಯ ಕಡಲ ಕಡೆಯಲು ಮದನ,
ಕವಿಯ ರಸಲಕ್ಷ್ಮಿ ನೀನುದಿಸಿ ಬಂದೆಯಲ್ತೆ?

**ಪಂಕಜೆ:** - ವಿಷಯೆ, ಆ ಹಾಡು?

**ಚಂಪಕಮಾಲಿನಿ:** - ಅಹುದಹುದು ಮರೆತಿದ್ದೆ.
ಈ ಕಲ್ಮಣೆಯ ಮೇಲ್ಕುಳಿತು ಗೀತೆಯನು ಕೇಳುವೆವು...
*[ಎಲ್ಲರೂ ಕುಳಿತುಕೊಳ್ಳುತ್ತಾರೆ.]*

**ವಿಷಯೆ:** - ನಾ ಹಾಡಲೊಲ್ಲೆ.

**ಚಂಪಕಮಾಲಿನಿ:** - *(ವಿನೋದವಾಗಿ)* ಬಿಂಕವೇತಕೆ ನಿನಗೆ? ಹಾಡಬಾರದೆ, ರಮಣಿ?

**ವಿಷಯೆ:** - *(ವಿನೋದವಾಗಿ)* ಬರಿದೆ ಪೀಡಿಪೆ ಏಕೆ? ಹಾಡಲೊಲ್ಲೆನು, ರಮಣ?

**ಚಂಪಕಮಾಲಿನಿ:** - ಓಹೊ, ನಿಜದ ನಾಟಕಕೆ ಅಭ್ಯಾಸ ಪೀಠಿಕೆಯೊ?

**ಪಂಕಜೆ:** - ಹಾಗಲ, ಕವಿಗಳನು ರಸಿಕರು ಕೆಣಕಿಲ್ಲದೆ
ನಮಗೆ ಲಾಭವೆಲ್ಲಿ? ತಮ್ಮ ಸರಕಿನ ಮೂಟೆಯನು
ಸುಮ್ಮನೆಯೆ ಬಿಚ್ಚುವರೆ? ರಸತುಂಬಿ ಬಿರಿಯುತಿಹ
ಕರಿಯ ಕಬ್ಬನು ಬರಿದೆ ಬೇಡಿದೊಡೆ ತನ್ನೆದೆಯ
ಸವಿವೊನಲ ನೀಡುವುದೆ? ಹಿಂಡಿದರೆ ತಾನೆ
ದೊರಕುವುದು ರಸ?

**ವಿಷಯೆ:** - ಸಾಕು ನಿನ್ನುಪಮಾನ.

**ಪಂಕಜೆ:** - ಸಾಕು ನಿನ್ನುಪಮಾನ!

**ಚಂಪಕಮಾಲಿನಿ:** - ಹಾಡಕ್ಕ, ಸಾಕು ನಿನ್ನಭಿಮಾನ!

**ವಿಷಯೆ:** - *(ಹಾಡುತ್ತಾಳೆ)*
ಬನದ ತಣ್ಣೆಳಲಿನಲಿ
ತಳಿರ ಶಯನದಿ
ಇನಿಯನೆಮ್ಮ ಕಾಯುತಿಹನು;
ಬಾರಲೆ ಕೆಳದಿ!

**ಚಂಪಕಮಾಲಿನಿ:** - *(ಸುತ್ತ ಹುಡುಕಿ ನೋಡುವಳಂತೆ ನಟಿಸುತ್ತಾ)*
ಎಲ್ಲಿ, ಪಂಕಜೆ, ಕಾಯುತಿಹನಂತೆ?

**ಪಂಕಜೆ:** - ನೋಡಲ್ಲಿ
ತಳಿತೆಸೆವ ಚಂಪಕವೆ ಅವಳಿನಿಯನಿರಬೇಕು!

**ವಿಷಯೆ:** - *(ಸರಸದ ಮುನಿಸಿನಿಂದ)*
ಸಾಕು , ಬಾಯ್ಮುಚ್ಚು, ಪಂಕಜೆ. ನಿನ್ನ ಮನದನ್ನ
ಗೊಣಗುತ್ತ ಮುದುಕನಂತೆಲರಿನಲಿ ತಲೆಯೊಲೆಯುವಾ
ಬಿದಿರಮೆಳೆಯಿರಬೇಕು. *(ಕೈದೋರುತ್ತಾಳೆ.)*

**ಚಂಪಕಮಾಲಿನಿ:** - ಬಿಡು, ತಂಗಿ; ಸಿಗ್ಗೇಕೆ?
ನಿನ್ನೈನಿದನಿಯನಾಲಿಸೆ ಮೌನವಾಂತಿದೆ ಬನಂ;
ನೋಡು!.... ಹಾಡು!

**ವಿಷಯೆ:** - ನಾನೊಲ್ಲೆ. ನೀವೆಲ್ಲ
ಪರಿಹಾಸ್ಯ ಮಾಡುವಿರಿ.

**ಚಂಪಕಮಾಲಿನಿ:** - ಇನ್ನು ಮಾಡುವುದಿಲ್ಲ.
ಹಾಡು.

**ವಿಷಯೆ:** - *(ಹಾಡುತ್ತಾಳೆ)*

ಬನದ ತಣ್ಣೆಳಲಿನಲಿ
ತಳಿರ ಶಯನದಿ
ಇನಿಯನೆಮ್ಮ ಕಾಯುತಿಹನು;
ಬಾರಲೆ ಕೆಳದಿ!
ಅಲ್ಲಿ ಕಲಕಂಠಗಳು
ಹಾಡುತಿರುವುವು;
ಅಲ್ಲಿಗಿಳಿವಿಂಡುಗಳು
ಕೂಗುತಿರುವುವು.

**ಪಂಕಜೆ:** - ಗಾನವೆನಿತಿಂಪು! ಎದೆ ಉಬ್ಬಿ ಹಾರುತಿಹುದೆನಗೆ!

**ಚಂಪಕಮಾಲಿನಿ:** - ಗಾನಕ್ಕೆ ಮನಸೋಲದವರುಂಟೆ?
ಇದ್ದರವನತಿಪಾಪಿ. ಅವನೆದೆಯೆ ನರಕ...
ನೋಡಲ್ಲಿ, ಬಯಲೊಳಿಹ ಗೋವು ತಲೆಯೆತ್ತಿ
ಕಿವಿಯ ನೆಟ್ಟಗೆ ನಿಮಿರಿ, ಪುಲ್ಮೇವನೆಯೆ ಮರೆತು,
ಮೆಯ್ಮರೆತು, ಆಲಿಸುತ್ತಿಹವು ನಟ್ಟಾಲಿಯಾಗಿ!

**ಪಂಕಜೆ:** - ಹಾಡೆನ್ನ ಸರತಿಯ ಬೀಣೆ, ಓ, ಹಾಡು!

**ವಿಷಯೆ:** - *(ಹಾಡುತ್ತಾಳೆ)*
ಎಳದಳಿರೊಳು ನಲಿನಲಿಯುತ
ಮಂದ ಮಾರುತ
ಮೆಲುನಡೆಯಲಿ ಸುಳಿದಲೆವನು
ಮದುವ ಸಾರುತ!
ಬನದ ತಣ್ಣೆಳಲಿನಲಿ
ತಳಿರ ಶಯನದಿ

ಇನಿಯನೆಮ್ಮ ಕಾಯುತಿಹನು;
ಬಾರಲೆ ಕೆಳದಿ!

**ಪಂಕಜೆ:** - ಇದೇನು ನಿಲ್ಲಿಸಿದೆ?

**ವಿಷಯೆ:** - ಹಾಡು ಪೂರೈಸಿತು.

**ಪಂಕಜೆ:** - ಸುಳ್ಳಾಡುತಿಹೆಯಲ್ಲ; ಮುಂದಿಹುದು ನಾ ಬಲ್ಲೆ.

**ಚಂಪಕಮಾಲಿನಿ:** - ಹೇಳು ನಾಚಿಕೆಯೇಕೆ, ಅಕ್ಕ? ನಾವೆಲ್ಲ
ನಿನ್ನಂತೆ! ತರಳೆಯರು, ಮುಗ್ಧೆಯರು,
ಜೌವ್ವನೆಯರು!

**ವಿಷಯೆ:** - *(ಹಾಡುತ್ತಾಳೆ)*
ಸುಮಗಳನು ಕೊಯ್ದು ನೆಯ್ದು
ಮಾಲೆ ಸೂಡುವಾ!
ಮನಸಿಜನ ಕಣೆಗಳಂತೆ
ತೇಲಿ ತಾಗುವಾ!
ಬನದ ತಣ್ಣೆಳಲಿನಲಿ
ತಳಿರ ಶಯನದಿ
ಇನಿಯನೆಮ್ಮ ಕಾಯುತಿಹನು;
ಬಾರಲೆ ಕೆಳದಿ!

**ಪಂಕಜೆ:** - ನೀನಿನಿತು ರಸಿಕಳೆಂದು ನಾನು ತಿಳಿದಿರಲಿಲ್ಲ.

**ವಿಷಯೆ:** - ಹೊಗಳಿಕೆಯಿರಲಿ, ನೀನೊಂದು ಹಾಡು ಹಾಡಲೆಬೇಕು.

**ಪಂಕಜೆ:** - ನೀನು ಹಾಡಿದ ಮೇಲೆ ನಾನು ಹಾಡುವುದೆ?
ಹೊತ್ತಾಯ್ತು, ನಾಳೆ ಹಾಡುವೆ ನಾನು. ಈಗ
ಹೂಕೊಯ್ದುಕೊಂಡು ಹೋಗೋಣ ಬೇಗ.

**ಚಂಪಕಮಾಲಿನಿ:** - ಹೌದು. ಹೊತಾಯ್ತು. ಮೇಲೇಳಿ.

**ವಿಷಯೆ:** - ನೀವೆಲ್ಲ ಜಾಣೆಯರು.
ನನ್ನಂತಹರು ನಿಮ್ಮೊಡನೆ ಬರಬಾರದು.

**ಪಂಕಜೆ:** - ನಾನು ಆ ಸುರಗಿ ಮರವನು ಹತ್ತಿ ಹೂಕೊಯ್ಯುವೆ.
*[ಹೊರಡುತ್ತಾಳೆ]*

**ಚಂಪಕಮಾಲಿನಿ:** - ನಾನಲ್ಲಿ ಅರಳಿರುವ ಜಾತಿಗಳ ಕುಯ್ವೆ.
*[ಹೊರಡುತ್ತಾಳೆ]*

**ವಿಷಯೆ:** - ನಾನಿಲ್ಲೆ ಮಾಮರದ ಬಳಿಸೇರಿ, ಮಲ್ಲಿಗೆಯ
ಮೊಗ್ಗುಗಳ ಕೊಯ್ಯುವೆನು!
*(ಎಂದು ಮುಂಬರಿದು ಮಲಗಿರುವ ಚಂದ್ರಹಾಸನನ್ನು ನೋಡಿ, ಬೆರಗುವೋಗಿ ಹಿಂಜರಿದು, ನಟ್ಟನೋಟವಾಗಿ ನಿಲ್ಲುತ್ತಾಳೆ)*
ಆರಿವನು? ಆ.. ರಿ.. ವ.. ನು?
ತೋಳ ತಲೆಗಿಂಬಿನ ತಳಿರ್ವಸೆಯ ಮೇಲೆ
ತಂಗಾಳಿಗೊಡ್ಡಿದ ಮೆಯ್ಯ ಸೊಗಸಿಂದೆ ಮೆರೆದು,
ನಿದ್ರಾಲೋಲನಾಗಿಲ್ಲಿ ಮಲಗಿಹನ್! ಆ.. ರಿ.. ವ.. ನು?
*(ಒಂದೆರಡು ಹೆಜ್ಜೆ ಮುಂದೆ ಸರಿಯುತ್ತಾಳೆ)*
ಲೋಕತ್ರಯಂ ತನಗೆ ವಶವರ್ತಿಯಾದುದು;
ಇನ್ನೇಕೆ ಧಾವತಿಯೆಂದು ಸುಖದಿಂದೆ ಪವಡಿಸಿಹ
ಕರ್ವುವಿಲ್ಲನೆನೆ ನಿದ್ರಿಪನು ಸರ್ವಸ್ವಮಂ ಮನಮಂ
ಶೃಂಗಾರದಿಂ ಸೂರೆಗೈದು! ಆ.. ರಿ.. ವ.. ನು?
*(ಒಂದು ಹೆಜ್ಜೆ ಮುಂಬರಿದು, ಮೆಚ್ಚಿನೋಡುತ್ತಾಳೆ)*
ಬೇಸರದೆ ಬಾಂದಳದೊಳಾವಗಂ ತಿರುಗಿ ತೊಳಲಿ,
ಸಾಕಾಗಿ, ಇಳೆಗಿಳಿದು ಪವಡಿಸಿಹ ಚಂದ್ರನೆಯೆ
ಅಕಂಳಂಕ ಛದ್ಮರೂಪದೊಳಿಂತು...*( ತಟಕ್ಕನೆ ಹಿಂದೆ ಸರಿದು)*
ಎಚ್ಚರುತಿಹನೆ?...
ನಿದ್ದೆಯೊಳೆ ನಗುತಿಹನೆ? ನಟಿಸಿ ನಿದ್ರಿಸುತಿಹನೊ?
ಇಲ್ಲ, ಇಲ್ಲ, ಕೈತವವನರಿಯದೀ ಮುಗ್ಧಮುಖ!
*(ಮತ್ತೆ ಹತ್ತಿರ ಹೋಗಿ ನೋಡುತ್ತಾಳೆ; ನಾಚುತ್ತಾಳೆ; ತುಟಿಗೆ ಕೈಯಿಟ್ಟು ಮೆಲ್ಲಗೆ ನಗುತ್ತಾಳೆ.)*
ನಮ್ಮ ಸಲ್ಲಾಪಗಳನೆಲ್ಲಿ ಕೇಳಿದನೊ ಏನೊ?
ಎನ್ನ ಕೆಳದಿಯರೆಲ್ಲಿ? *(ಸುತ್ತಲೂ ಕದ್ದು ನೋಡುತ್ತಾಳೆ)*
ಹಾರುತಿದೆ ನನ್ನೆದೆ!

ಏದುತಿದೆ ಏಕಿಂತು ತಪ್ಪು ಮಾಡಿದ ಮಗುವಿನಂತೆ?
ಒರ್ವರ್ ಒರ್ವರನ್ ಅಗಲರ್ ಅಶ್ವಿನೀದೇವರ್ಕಳ್;
ಉರ್ವ ನಳಕೂಬರ ಜಯಂತಾದಿ ಸುರತನುಜರ್
ಉರ್ವರೆಗದೇಕೆ ಬಹರ್?... ಅವರಲ್ತು...
ಯಕ್ಷಕಿನ್ನರ ಸಿದ್ಧ ಗರುಡ ಗಂಧರ್ವಾದಿ
ಗೀರ್ವಾಣರೊಳಗಾವನೋ ದಿಟಂ: ಮನುಜನಲ್ಲೀತನ್!
*(ಸುತ್ತ ನೋಡುವಳೊಮ್ಮೆ; ನೂಪುರವಲುಗದಂತೆ ಹತ್ತೆ ಸಾರುವಳೊಮ್ಮೆ; ಸೋಂಕಲೆಂತಹುದೆಂದು ಮತ್ತೆ ಮುರಿದಪಳೊಮ್ಮೆ; ಹಜ್ಜೆ ಹಜ್ಜೆಯ ಮೇಲೆ ಸಲ್ವಳಮ್ಮದೆನಿಲ್ವಳು! ಚಿತ್ತದೊಳ್ ನಿಚ್ಚಯಿಸ್ಸಿ ನೆರೆಯಲೆಳಸುವಳೊಮ್ಮೆ; ಹೊತ್ತಲ್ಲದನುಚಿತಕೆ ಬೆದರಿ ಹಿಂಗುವಳೊಮ್ಮೆ; ತತ್ತಳದ ಬೇಟದೊಳ್ ಬೆಂಡಾಗಿ ವಿಷಯೆ ನಿಂದಿರ್ದಳಾತನ ಪೊರೆಯೊಳು!*
ಮುತ್ತಿಡುವೆನೆಂದೊಡಿವನೀ ನಿದ್ದೆಗಾಗುವುದು
ಭಂಗ! ಗಾಢದಿಂದಪ್ಪುವೆನೆ ಹೊತ್ತಲ್ಲ!
ಎನ್ನ ಕೆಳದಿಯರಿಲ್ಲಿಗೈತಂದು ಕಂಡರೆ?
ಕರುಬುವರು! *(ಕಂಚುಕದ ಸೆರಗಿನಲ್ಲಿ ಪತ್ರಿಕೆಯನ್ನು ನೋಡಿ)*
ಕಂಚುಕದ ಸೆರಗಿನಲಿ ಪತ್ರಿಕೆಯಿದೇನು?
ಬಿಚ್ಚಿ ಮುದ್ರೆಯನೊಡೆದೆ ನೋಡುವೆನ್!
*(ಹಾಗೆ ಮಾಡಿ, ವಿಸ್ಮಯದಿಂದ)*
ಏನಿದೆನ್ನಯ ತಂದೆಯಕ್ಷರಂ? ಆತನೆಯೆ
ಬರೆದ ಪತ್ರಿಕೆ ಇದು! ಇರಲಿ, ಓದುವೆನ್:
*(ಓದುತ್ತಾಳೆ)*
"ಶ್ರೀಮತ್ ಸಚಿವ ಶಿರೋಮಣಿ ದುಷ್ಟಬುದ್ಧಿ
ಸುಪ್ರೇಮದಿಂ ತನ್ನ ಮಗ ಮದನಂಗೆ ಮಿಗೆ ಪರಸಿ
ನೇಮಿಸಿದ ಕಾರ್ಯಮ್:
ಈ ಚಂದ್ರಹಾಸಂ ಮಹಾಹಿತನೆಮಗೆ
ಮೇಲೆ ನಮ್ಮ ಸೀಮೆಗರಸಾದಪಂ;
ಸಂದೇಹಮಿಲ್ಲಿದಕೆ. ಸಾಮಾನ್ಯದವನಲ್ಲ;
ನಮಗೆ ಮುಂದಕೆ ಸರ್ವಥಾಮಿತ್ರನಾಗುವನ್
ಎಂದೀತನಂ ಕಳುಹಿದೆವು ನಿನ್ನ ಬಳಿಗೆ:
ಇದನರಿವುದು! ಹೊತ್ತುಗಳೆಯದೆ,
ಬಂದ ಬಳಿಕಿವನ ಕುಲ ಶೀಲ ವಿತ್ತ ವಿದ್ಯಾ
ವಯೋ ವಿಕ್ರಮಂಗಳನೀಕ್ಷಿಸುತ್ತಿರದೆ
ವಿಷವ ಮೋಹಿಸುವಂತೆ ಕುಡುವುದೀತಂಗೆ ನೀನ್!
ಇದರೊಳೆಮಗೆ ಉತ್ತರೋತ್ತರಮಪ್ಪುದು.

ಆಂ ಬೇಗ ಚಂದನಾವತಿಯಿಂದ ರಾಜಕಾರ್ಯವ ಮುಗಿಸಿ
ಬರ್ಪೆನ್. ಎನ್ನ ಚಿತ್ತಮಂ ನೀನರಿತು
ಹಿಂಜರಿಯದೆಲ್ಲಮಂ ಪೂರೈಸು ಯುಕ್ತಿಯಿಂದ!"
*(ಓದಿ ಚಿಂತಾಕ್ರಾಂತಳಾಗಿ ನಿಲ್ಲುತ್ತಾಳೆ. ಆಶ್ಚರ್ಯ, ಶೋಕ, ಕ್ರೋಧ, ಸಂಶಯಾದಿಭಾವಗಳು ತರಂಗಿತವಾಗುತ್ತವೆ - ಅವಳ ಮೊಗದಲ್ಲಿ.)*
ವಿಷವ ಮೋಹಿಸುವಂತೆ! ಇದರರ್ಥವೇನು?
ಮನ್ಮಥನ ಮೀರುತಿಹ ಗಾಡಿಯಿಂದೆಸೆವಿವಗೆ
ವಿಷವನೂಡುವುದುಂಟೆ? ಪುಸಿ! ಪುಸಿ! ತೆಗೆತೆಗೆ!
ಈತಂ ತಮಗೆ ಮಹಾ ಹಿತನೆಂದು;
ನಮ್ಮ ಧರೆಗೀತನರಸನಹನೆಂದು;
ಕುಲ ಶೀಲ ವಿದ್ಯೆಗಳನ್ ಈತನೊಳ್ ಅರಸಬೇಡ,
ಮುಂದಕೀತಂ ನಮಗೆ ಸರ್ವಥಾ ಮಿತ್ರನಹನೆಂದು;
ನೀನೀತಂಗೆ ವಿಷಯೆ ಮೋಹಿಸುವಂತೆ ಕುಡುವುದೆಂದು,
ತಂದೆ ಅಣ್ಣಗೆ ಬರೆಸಿ ಕಳುಹಿದ ಪತ್ರವೇ ತಪ್ಪದಿದು!
ಕಡು ಚೆಲ್ವನಾದ ವರನಂ ಕಂಡು, ನಿಶ್ಚಯ್ಸಿ,
ತಡೆಯದೀತಂಗೆ ನಾಂ ಮೋಹಿಸುವ ತೆರದಿಂದೆ
ಕಡುವುದೆಂದೆನ್ನ ಪಿತನೀತನಂ ಕಳುಹಿಸಿರ್ಪನ್.
ಒಡಗೂಡದಿರದು ಎನ್ನ ಮನದೆಣಿಕೆ.
ಪತ್ರಿಕೆಯೊಳ್ ಎಡಹಿ ಬರೆದಕ್ಕರದ ಬೀಳಿರ್ದೊಡೆ
ಅದರಿಂದೆ ಕೆಡುವುದಗ್ಗದ ಕಜ್ಜಂ.
ತಪ್ಪಿರ್ದ ಲಿಪಿಯೊಳ್ 'ವ' ಕಾರಮಂ ತೊಡೆದು
ಅಲ್ಲಿಗೊಪ್ಪುವ 'ಯೆ' ಕಾರಮಂ
ಈ ಮಾಮರದೊಳಿಪ್ಪ ನಿರ್ಯಾಸಮಂ ತೆಗೆದು
ಕಿರುವೆರಳ ಉಗುರ ಕೊನೆಯಿಂದೀಗಳೆಯೆ
ತಿದ್ದಿ ಒರೆದೆಪೆನ್....
*(ಮಾಮರದ ನಿರ್ಯಾಸದಿಂದ ಉಗುರ ಕೊನೆಯಿಂದ ತಿದ್ದಿ ಮೊದಲಿನಂತೆಯೆ ಕಟ್ಟುವಳು. ದೂರದಿಂದ ವಿಷಯೆ! ವಿಷಯೆ! ಎಂಬ ಸಖಿಯರ ಕರೆ ಕೇಳಿಸುತ್ತಿದೆ.)*
ಸಖಿಯರೆನ್ನಂ ಕೂಗುತಿಹರು; ಮನಮಿವನ
ರೂಂಪಿಗೆ ಸೆರೆಸಿಕ್ಕಿ ಚಲಿಸಲೊಲ್ಲದು; ದಿಟ್ಟಿ
ಮುರಿಯದಿದೆ; ನಡೆಯಲಡಿ ಅಚಲವಾಗುತಿದೆ!
*[ಹಿಂದೆ ನೋಡುತ್ತಾ ನೋಡುತ್ತಾ ನೂಪುರಧ್ವನಿಮಾಡುತ್ತಾ ಹೋಗುತ್ತಾಳೆ. ಚಂದ್ರಹಾಸನು ನಿದ್ರೆಯಿಂದೆಚ್ಚತ್ತು ಸುತ್ತಲೂ ನೋಡಿ ಮೇಲೇಳುತ್ತಾನೆ.]*

**ಚಂದ್ರಹಾಸ:** - ಅಃ ಅದೆಂತೆಪ್ಪ ಜೇನ್ಗನಸಿನಿಂದೆಳ್ಚರ್ತೆನಾಂ!
ಕನಸಿನೊಳೆ ಕೇಳಿದುದೆ ಅವ್ಯಕ್ತಮಧುರಮಾ ಗಾನಂ?
ಕನಸಿನೊಳ್ ಕಂಡೆನೆ ಆ ದಿವ್ಯ ಸುಂದರ ಮೂರ್ತಿಯಂ?
ಕನಸಲ್ಲ. ಕನಸನಿತು ತಿಳಿಯಾಗಿ ತೋರ್ಪುದೇನ್?
ಏನ್ ಅಲೌಕಿಕಮೊ ಆ ಅನುಭವಂ?
ಲಾವಣ್ಯವೇ ಮೂರ್ತಿಮತ್ತಾದಂತೆ ದಿವ್ಯಾಕಾರೆಯೊರ್ವಳ್
ಎನ್ನೆಡೆಯೆ ಸುಳಿದಾಡಿದಂತಾಯ್ತು. ಇನುಮಿದೆ
ಕಿವಿಗಳೊಳ್ ಆ ನೂಪುರಧ್ವನಿಯಿಂಚರಂ!
ಮುಂದೆ ಎಂದಾದೊಡಂ ಆ ಸ್ವಪ್ನ ಸಾಮ್ರಾಜ್ಯದಲಿ
ಮತ್ತೆ ಸಂಚರಿಪ ಭಾಗ್ಯಮೆನಗೊದಗುವುದೆ?
ಆ ಕನಸನುಳಿದೆನ್ನ ಹೃದಯಮಂದಿರವೀಗ
ರಿಕ್ತಮೆನೆ ಬಿಮ್ಮನಿದೆ. ಹಾ ಮಧುರಸ್ವಪ್ನವೆ!...
ಓ! ರಣಸಿಂಹನೇಕೆ ಓಡೋಡಿ ಬರುತಿಹನ್?
*(ರಣಸಿಂಹನ ಪ್ರವೇಶ)*
ಏಕೆ ಓಡೋಡಿ ಬಂದೆ!

**ರಣಸಿಂಹ:** - ಒಳ್ಳೆಯ ಪ್ರಶ್ನೆ!
ನಿನಗಾಗಿ ಪಾಥೇಯಮಂ ಬಿಚ್ಚಿ ಕಾದು ಕಾದು
ಸಾಕಾಗಿ ಹೋಯ್ತು. ಬೈಗಾಗಿ ಹೊತ್ತಿಳಿಯುತಿದೆ,
ನೋಡು : ಪಿರಿದೆನಿಪ ಕತ್ತೆಲೆಯ ರಾಶಿಯಂ
ಪೊತ್ತಿಕೊಂಡುರಿವ ವೆಂಕೆಯ ಕಡೆಯೊಳುಳಿದ
ಕೆಂಗೆಂಡಮೆನೆ ತರಣಿಮಂಡಲಮೆಸೆಯುತಿಹುದು
ಅಪರ ದಿಗ್ಭಾಗದಲ್ಲಿ!

**ಚಂದ್ರಹಾಸ:** - ಬಳಲಿಕೆಯ ನೀಗಲೆಂದಿಲ್ಲಿ ಮಲಗಿದೆನು.
ಒಯ್ಯನೆಯೆ ತೀಡುತ್ತೈತಂದೆಲರ ಸಂಗದಲಿ
ನಿದ್ದೆವೆಣ್ಣೆಯ್ತಂದು ಕದ್ದೊಯ್ದಳೆನ್ನಂ!...
ವೀರಸೇನನೆಲ್ಲಿ?

**ರಣಸಿಂಹ:** - ಆ ಎಡೆಯ ಕಾದಿಹನ್. ಪೋಗುವಂ ಬಾ.

**ಚಂದ್ರಹಾಸ:** - ಮೃದು ಮಧುರ ಸಂಗೀತಮಂ ಕೇಳಿದಿರ ನೀವು?

**ರಣಸಿಂಹ:** - ಹೌದು, ಕೇಳಿದೆವು; ಬಹುದೂರದಿಂ ತೇಲಿ
ಪೆಣ್ದನಿಯವೋಲಿಳಿದು ಬಂದಂತಿತ್ತು.*( ಕೆಳಗೆನೋಡಿ)*
ಅರ ಹಜ್ಜೆಗಳಿವು? ನಿನ್ನವಲ್ಲ!
ಪೂಗಳ ಪರಾಗದಿಂದಿಡಿದ ಪಸಿರ್ನೆಲದಲ್ಲಿ
ಚಿತ್ರಕಾರನು ಮುದ್ರಿಸಿದ ತೆರದಿ ತೋರುತಿವೆ.
*(ಚೆನ್ನಾಗಿ ಬಾಗಿನೋಡಿ)*
ಕೋಮಲೆಯರಡಿಗಳಿವು ದಿಟಂ!

**ಚಂದ್ರಹಾಸ:** - ಎಂತರಿತೆ, ಈ ಪಜ್ಜೆವಿನ್ಯಾಸ ವಿಜ್ಞಾನಮಂ?

**ರಣಸಿಂಹ:** - ನೋಡಲ್ಲಿ; ಚಿಗುರಿದೆಳವುಲ್ಲು ಕೂಡ
ಮುರಿಯದಿವೆ: ಪಾದಸಂಸ್ಪರ್ಶದಿಂದೆ
ಮುದವಾಂತು ನಲಿಯುವಂತಿದೆ ನೋಡು!

**ಚಂದ್ರಹಾಸ:** - ನಿನ್ನದಿದು ಕವಿಯ ವಿಜ್ಞಾನಮೆ ದಿಟಂ!
ನಾನೊ? ಏನನೂ ಅರಿಯೆ; ಮಲಗಿದ್ದೆ.

**ರಣಸಿಂಹ:** - *(ನಗುತ್ತಾ)* ಅದರೊಳೇನೂ ಸಂದೇಹವಿಲ್ಲ. ಆದರೆ...

**ಚಂದ್ರಹಾಸ:** - *(ಮುಗುಳ್ನಗೆವೆರಸಿ)* ಏನ್ ಆದರೆ?

**ರಣಸಿಂಹ:** - ನಿನ್ನ ಮೊಗದೊಳಗೇನೊ ಸಂತಸದ ಕಳವಳಂ?
ತೋರದೆನಗಲ್ಲಿ ನಿದ್ದೆಯಿಂ ಬಹ ಮುಗ್ಧ ಶಾಂತಿ!

**ಚಂದ್ರಹಾಸ:** - ವೀರಸೇನನದೊ ಕರೆವಂತಿದೆ!

*[ಇಬ್ಬರೂ ಅವಸರವಸರವಾಗಿ ಹೊರಡುತ್ತಾರೆ.]*

*ಪರದೆ ಬೀಳುತ್ತದೆ.*

*

# ಆದಿರಂಗಂ-ದೃಶ್ಯ ೩,೪

**ದೃಶ್ಯ೩**

*[ದುಷ್ಟಬುಧ್ಧಿಯ ಅರಮನೆ. ಸಾಲಂಕೃತ ಸುಸಜ್ಜಿತ ಕೊಠಡಿಯೊಂದರಲ್ಲಿ ಚಿಂತಾಕ್ರಾಂತನಾಗಿ ಕುಳಿತಿದ್ದಾನೆ]*

**ದುಷ್ಟಬುಧ್ಧಿ:** - ಈ ಕುಂತಳೇಂದ್ರಂಗೆ ಸುತರಿಲ್ಲ.
ರಾಜ್ಯವೆನಗೇಕಾಧಿಪತ್ಯಮಾಗಿರ್ದಪುದು….
ಮುಂದಿವಂ ಭೂ ಕಾಂತನಾದಪಂ ಗಡ!
ವಿಪ್ರರೆಂದ ನುಡಿ ತಪ್ಪದು…. *(ತಟಕ್ಕನೆ ಎದ್ದು ತಿರುಗಾಡುತ್ತಾ)*
ನನ್ನಾತ್ಮಜರ್ಗೆ ಬೇಕಾದ ಸಂಪದಂ ಬಯಲಾಗುವುದೆ?
ಏನೆಂದನಾ ಗಾಲವ ಪುರೋಹಿತನ್?….
ದುಷ್ಟಬುದ್ಧಿಯ ನಾಮವನ್ವರ್ಥವಾಗದಿರೆ
ನನ್ನ ಬಾಳಿದು ದಿಟಂ ವ್ಯರ್ಥಂ!…. ನನ್ನಿಳೆಗೆ,
ನನ್ನಾತ್ಮಜರ್ಗೆ ಮುಡುಪಾದ ಈ ಪೊಳಲಿಂಗೆ
ಅವನೊಡೆಯನಾಗುವನೆ? ಇಲ್ಲ, ಎಂದೂ ಇಲ್ಲ!
ವಿಪ್ರನಾಡಿದ ಮಾತು ಪುಸಿಯಪ್ಪುವಂತೆಸಗೆ
ಚಾಂಡಾಲರಿಂದಾ ತರಳನಂ ಕೊಲ್ಲಿಪೆನ್!….
*(ಮತ್ತೆ ತಟಕ್ಕನೆ ಕೂರುತ್ತಾನೆ. ಆಲೋಚಿಸಿ)*
ಅರಸುಕುವರಿಯನೆನ್ನ ಮದನಂಗೆ ಕೈವಿಡಿಸಿ,
ಪಟ್ಟಗಟ್ಟುವೆನವಗೆ……… *(ಮತ್ತೆ ಎದ್ದು ಅಸ್ಥಿರನಾಗಿ ತಿರುಗುತ್ತಾ)*
ಕಿಂಕರನು ಕಟುಕರಂ
ಅದೇಕಿನ್ನುಂ ಕರೆದುತರಲಿಲ್ಲ….. ಶೀಘ್ರಮೆ ಶುಭಂ!….
ನನ್ನ ಬಾಳಿನ ಶಾಂತಿ ಆ ಬಾಲಕನ ಕೊಲೆಯಲ್ಲಿ
ಪಟ್ಟಿಹುದಲಾ!…. *(ತಲೆಯೆತ್ತಿ ದೂರ ನೋಡುತ್ತಾನೆ. ಮುಖ*
*ಭಂಗಿಯೆ ಬದಲಾಯಿಸುತ್ತದೆ. ಹಸನ್ಮುಖನಾಗುತ್ತಾನೆ.)*
ಓಹೊ ವಿಷಯೆ, ಮದನ……

*[ಬಾಲೆ ವಿಷಯೆ ಬಾಲಕ ಮದನ ಕೇಕೆಹಾಕುತ್ತಾ ಓಡಿಬರುತ್ತಾರೆ. ತನ್ನನ್ನು ತಬ್ಬಿದ ಮಗಳನ್ನೊಂದು ಕೈಯಲ್ಲಿಯೂ ಮಗನನ್ನು ಇನೊಂದು ಕೈಯಲ್ಲಿಯೂ ಹಿಡಿದುಕೊಂಡು]*
ಏನಿನಿತು ಹಿಗ್ಗು ನಿಮ್ಮಿಬ್ಬರಿಗೆ?

**ವಿಷಯೆ:** - ಅಪ್ಪಯ್ಯ, ಅ…. ಅ….ಅಣ್ಣಯ್ಯ ಜಾರಿ ನೀರಿಗೆ ಬಿದ್ದು ಎದ್ದೋಡಿ ಬಂದಿಹನು

**ದುಷ್ಟಬುದ್ಧಿ:** - *(ಒದ್ದೆಯಾದ ಮದನನಿಗೆ)* ಅಯ್ಯಯೊ ಏನಿದೀ ಒದ್ದೆ! ನಾ ಗಮನಿಸಲೆ ಇಲ್ಲ.
ಇಸ್ಸಿ ದೂರ ನಿಲ್ಲು! *(ಅರ್ಧಪರಿಹಾಸ್ಯದಿಂದ ಮದನನನ್ನು ದೂರ ತಳ್ಳಿ)*

**ಮದನ:** - *(ತಳ್ಳುತ್ತಿದ್ದುದನ್ನು ಲೆಕ್ಕಿಸದೆ ತಂದೆಯ ಬಳಿಗೆ ಒತ್ತಿಬಂದು)*
ಅಪ್ಪಯ್ಯ ಈ ತಂಗಿ ಮರವೇರಿದಳು!

**ದುಷ್ಟಬುದ್ಧಿ:** - ಹೌದೆ? ಅಯ್ಯೊ ಗಂಡುಬೀರಿ!

**ವಿಷಯೆ:** - ಮತ್ತೆ? ಅಣ್ಣಯ್ಯ ಮೊಟ್ಟೆ ಏಕೆ ತೋರಿಸಲಿಲ್ಲ?
ಅದಕ್ಕೇ ಹತ್ತಿದೆ! ಹತ್ತಿ ನಾನೇ ನೋಡಿದೆ, ಅಪ್ಪಯ್ಯ!

**ದುಷ್ಟಬುದ್ಧಿ:** - ಏನು ಮೊಟ್ಟೆಯೊ, ಮದನ?

**ಮದನ:** - ಹಿತ್ತಲು ಕಡೆಯ ಮಾವಿನಮರದಲ್ಲಿ
ಪಿಕಳಾರವೊಂದು ಗೂಡು ಕಟ್ಟಿದೆ, ಅಪ್ಪಯ್ಯ.
ನಾ ಹತ್ತಿ ಅದನು ನೋಡಿದೆ, ಮೂರು ಮೊಟ್ಟೆ!...
ಇವಳು ಅವನ್ನೆತ್ತಿ ತೋರಿಸು ಎಂದಳಲ್ಲ, ಅಪ್ಪಯ್ಯ?
ನಾವು ಮನುಷ್ಯರು ಮುಟ್ಟಿದರೆ ಹಕ್ಕಿ
ಕಾವು ಕೂರುವುದಿಲ್ಲವಂತೆ! ಬಿಟ್ಟು ಓಡುವುದಂತೆ,
ಮೈಲಿಗೆ ಎಂದು! ನಾನು ಮುಟ್ಟುವುದಿಲ್ಲ
ಎಂದಿಳಿದುಬಿಟ್ಟೆ.... ಆಮೇಲೆ ಇವಳೆ ಹತ್ತುವುದೆ!

**ವಿಷಯೆ:** - ನಾನೂ ನೋಡಿಯೆಬಿಟ್ಟೆ, ಅಪ್ಪಯ್ಯ.
ಏನು ಮುದ್ದಾಗಿವೆ! ನೀಲಿ ಚುಕ್ಕಿಯಮೊಟ್ಟೆ,
ಬೆಳ್ಳಗಿವೆ, ಮೂರು!... ನೀನೂ ನೋಡಪ್ಪಯ್ಯಾ!
ಅಷ್ಟೇನೂ ಎತ್ತರವಿಲ್ಲ; ಸುಲಭವೆ ಹತ್ತಿ ಕಾಣಲಹುದಪ್ಪಯ್ಯ!
*(ದುಷ್ಟಬದ್ಧಿ ಗಟ್ಟಿಯಾಗಿ ನಗುತ್ತಾನೆ.)*

**ಮದನ:** - ಅಮ್ಮ ಬಂದಳು ಅಮ್ಮ!
*(ದುಷ್ಟಬುದ್ಧಿಯ ಹೆಂಡತಿ ತಾರಕಾಕ್ಷಿ ಬರುತ್ತಾಳೆ.)*

**ತಾರಕಾಕ್ಷಿ:** - ಇದೇನು ತುಂಬ ಗದ್ದಲವಾಗುತಿಹುದಲ್ಲ?
ಇಷ್ಟೊಂದು ಅಟ್ಟಹಾಸ ತಂದೆಮಕ್ಕಳಿಗೆ!

**ದುಷ್ಟಬುದ್ಧಿ:** - ನಿನ್ನ ಮಗಳ ಸಾಹಸವ ಕೇಳಿದೆಯಾ?
ಹಕ್ಕಿಮೊಟ್ಟೆಯ ಕಂಡಳಂತೆ, ಮಾಮರವೇರಿ!
ನನ್ನನೂ ಹತ್ತಿನೋಡು ಎನುತಿಹಳು, ಈ
ಗಂಡುಬೀರಿ. *(ಎಂದು ಮುದ್ದಿಸುತ್ತಾನೆ.)*

**ತಾರಕಾಕ್ಷಿ:** - ಮರವನೇರುವುದೊಂದೆ ಅಲ್ಲ ಅವಳ ಸಾಸ.
ಕೊಡುಗೈಯ ಕರ್ಣನನೆ ಮೀರಿಹಳು ದಾನದಲಿ
ನಮ್ಮ ವಿಷಯೆ: ಇಂದೊಂದು ರನ್ನದಲರನೆ
ದಾರಿಯಲಿ ಆರಿಗೋ ಕೊಟ್ಟು ಬಂದಿಹಳು.

**ವಿಷಯೆ:** - ಆರಿಗಲ್ಲಪ್ಪಯ್ಯ, ಆತನಿಗೆ! ಆ ಚೆಲ್ವನಿಗೆ!
ನೀ ಕರೆದು ದಾರಿಯಲಿ ಮಾತನಾಡಿಸಿದೆಯಲ್ಲಾ
ಆತನಿಗೆ *(ದುಷ್ಟಬುದ್ಧಿಯ ಮುಖಭಂಗಿ ಸಂಪೂರ್ಣ ಬದಲಾಯಿಸುತ್ತದೆ. ಮಕ್ಕಳಿಬ್ಬರೂ ಸರಿದು ತಾಯೆಡೆಗೆ ಹೋಗುತ್ತಾರೆ. ದುಷ್ಟಬುದ್ಧಿ ಬದ್ಧಭ್ರುಕುಟಿಯಾಗಿ ಅರೆ ಎದ್ದು ಮತ್ತೆ ಕುಳಿತುಕೊಳ್ಳುತ್ತಾನೆ. ತಾಯಿ ಸನ್ನೆಮಾಡಿ ಮಕ್ಕಳಿಬ್ಬರನ್ನೂ ಕಳುಹುತ್ತಾಳೆ.)*

**ತಾರಕಾಕ್ಷಿ:** - ಏನು ತೆಕ್ಕನೆ ಚಿಂತಾಗ್ರಸ್ತರಾದಿರಿ?

**ದುಷ್ಟಬುದ್ಧಿ:** - *(ಉಗ್ರಧ್ವನಿಯಲ್ಲಿ)* ಕೇಳಿದೆಯ, ತಾರಾ, ಗಾಲವ ಪುರೋಹಿತನು
ಪೇಳ್ದುದನು? ಬೀದಿಯಲಿ ಸಂಚರಿಪ ದಿಕ್ಕಿಲ್ಲದಾ
ಪರದೇಶಿ ನಮ್ಮ ನಾಡಿಗೆ ಅರಸನಹನಂತೆ!

**ತಾರಕಾಕ್ಷಿ:** - ಗಾಲವ ಪುರೋಹಿತರು ಕಟ್ಟುಕತೆಗಳ ಕಟ್ಟಿ,
ತಮ್ಮ ಕಲ್ಪನೆಯ ಕನಸನೆ ನನಸಿನ ನನ್ನಿ
ಎಂಬಂತೆ ಏನೇನೊ ಕಣಿವೇಳುತಿಹುದವರ
ಚಾಳಿ. ನಾವದಕ್ಕಿನಿತು ಚಿಂತಿಸಲೇಕೆ?
ಮೊನ್ನೆ ವಿಷಯೆಯ ಕುರಿತು, ಮದನನಂ ಕುರಿತು,
ನನ್ನ ನಿಮ್ಮನು ಕುರಿತು ಏನೇನೊ ಕಣಿ ಹೇಳಿದರು....

**ದುಷ್ಟಬುದ್ಧಿ:** - ವಿಪ್ರರೆಂದಾ ಮಾತು ತಪ್ಪುವುದೆ ಹೇಳು?
ನೀನು ಭಾವಿಸುವನಿತು ಗಾಲವನು ಪ್ರಾಕೃತನೆ?

**ತಾರಕಾಕ್ಷಿ:** - ಅವರವರ ಹಣೆಬರೆಹದಂತಾದರೇನೆಮಗೆ?
ಬಿದಿಯ ತಿದ್ದಲು ನಾವು ಗೆಯ್ವಾ ಪ್ರಯತ್ನವೇ
ತಳ್ಳುವುದು ನಮ್ಮನಾ ಬಿದಿಯ ಒಡ್ಡಿದ ಬಲೆಗೆ!

**ದುಷ್ಟಬುದ್ಧಿ:** - ನೀನು ಆಲೋಚಿಸದೆ ಆಡುತಿಹೆ. ಬಹುದೂರ
ಇಹುದೆನ್ನ ದೃಷ್ಟಿ. ಹೆಂಗಸು ನೀನು. ನಿನಗೇನು
ಗೊತ್ತು? ಈ ಕುಂತಳೇಂದ್ರಂಗೆ ಸುತರಿಲ್ಲ.
ಅರಸುಕುವರಿಯನ್ನೆಮ್ಮ ಮದನಂಗೆ ತಂದು,
ನಮ್ಮ ಸಂತತಿಗರಸುತನವಪ್ಪುದೆನ್ನಾಸೆ.
ನನ್ನ ನಿನ್ನೊಳಗಿರಲಿ; ಬಯಲಾಗದಿರಲಿ ಇದು….

**ತಾರಕಾಕ್ಷಿ:** - ನಿಮ್ಮಾಸೆಯನ್ನೆ ಗಾಲವ ಪುರೋಹಿತರೂ
ನನಗೆ ಕಣಿವೇಳ್ದರೈಸೆ. ನಮ್ಮ ಸಂತಾನಕ್ಕೆ
ಇರ್ಪುದೆಂದರ್ ಕುಂತಳ ಕಿರೀಟಯೋಗಂ!

**ದುಷ್ಟಬುದ್ಧಿ:** - ಅವನ ಕಣಿಗೆರಡು ನಾಲಗೆ! ನನ್ನೊಡನೆ ಬೇರೆ
ನುಡಿದನಲಾ? ಆ ನಾಡಾಡಿ ಬೀದಿಬಾಲಕನೆಮ್ಮ
ನಾಡಿಂಗೆ ದೊರೆಯಪ್ಪನೆಂದು?…. ಏನಾದರಕ್ಕೆ,
ದೈವಚಿತ್ತಂ; ಪುರುಷಪ್ರಯತ್ನಮಂ ಮಾಳ್ಪೆನಾನ್!
ನಿನಗೊರೆದ ಗಾಲವನ ನುಡಿ ನನ್ನಿಯಪ್ಪಂತೆ,
ನನಗೊರೆದವನ ನುಡಿಯ ವಿಘ್ನಮಂ ಪರಿಹರಿಸಿ,
ನಮ್ಮ ಸಯ್ಪಿನ ಬಿದಿಯ ನಡೆಗೆ ತೊಡರೊದಗದೊಲ್
ಸರ್ವಮಂ ಪುರುಷಪ್ರಯತ್ನಮಂ ಮಾಳ್ಪೆನಾನ್!
*(ತಟಕ್ಕನೆ ನಿಂತು)*
ಮಾಳ್ಪ ಕಜ್ಜಂ ಬೆಟ್ಟತಿಹುದೆನಗೆ, ನೀಂ ಪೊರಡು.
*(ತಾರಕಾಕ್ಷಿ ಹೊರಡುತ್ತಾಳೆ)*
ಚೇಳು ಮರಿಯಾದೊಡೇನ್? ಪುಲಿ ಪಸುಳೆಯಾದೊಡೇನ್?
ಬೆಳೆವ ಮುಳ್ಳನು ಮೊಳೆಯುವಾಗಲೆ ಮುರಿಯುವುದು
ಮತಿವಂತರಿಗೆ ದಾರಿ; ಕೆಮ್ಮನಿದ್ದರೆ ಕೇಡು
ಮುಂದೆಮಗೆ ಕಟ್ಟಿಟ್ಟ
ಬುತ್ತಿ. *(ಕಿಂಕರನು ಬೀಷಣ, ಕಾಳ , ಮಾರ ಮೂವರು ರಕ್ತ ಸಿಕ್ತ ಚಂಡಾಲರನ್ನು ಕರೆತರುತ್ತಾನೆ.)*
ಏಕಿನಿತು ತಳುವಿದಿರಿ?
ನೆತ್ತರಿನ ಕಲೆ ಇದೇನ್ ನಿಮ್ಮ ಮೆಯ್ ಕೈಗಳಲಿ?

**ಭೀಷಣ:** - ಸೆರೆದಿಡಿದ ಬೇಹುಗಾರನನೀಗಳೆಯ ಕೊಂದು
ಬಂದಿಹೆವು, ಜೀಯ. ತೊಳೆಯಲೂ ಸಮಯವಿರಲಿಲ್ಲ.
ಇನ್ನಾವುದಾಜ್ಞೆ?

**ದುಷ್ಟಬುದ್ಧಿ:** - *(ಕಿಂಕರನಿಗೆ)* ನೀನಾಚೆಯಿರು. *(ಅವನು ಹೋಗುತ್ತಾನೆ.)*
ಬೀಷಣಾ, ಬಾ ಬಳಿಗೆ ಇಂದೊಂದು ಕೊಲೆಯಿಹುದು.
ಆಯಸದ ಕೊಲೆಯಲ್ಲ. ಅದರೂ ಮಹತ್ತಿನದು.
ರಾಜ್ಯವನೆ ಆಕ್ರಮಿಸೆ ಸಂಚುಹೂಡಿಹನವನು;
ಬಾಲರೂಪದೊಳಿಹನು ಆ ವಿಧಿಯ ವಿದ್ರೋಹಿ.

**ಭೀಷಣ:** - ಬೆಸಸಿದೊಡೆ ಕಾರ್ಯ ಕೈಗೂಡುವುದು. ಜೀಯ.
ಆರವನು? ಎಲ್ಲಿಹನು?

**ದುಷ್ಟಬುದ್ಧಿ:** - *(ಗಟ್ಟಿಪಿಸುದನಿಯಲ್ಲಿ)* ಎಚ್ಚರಿಕೆ! ಪತ್ತನದ
ಜನದ ಚಿತ್ತವನೆಲ್ಲ ಸೂರೆಗೊಂಡಿಹನವನು.
ಮನೆಮನೆಯ ಮುದ್ದಾಗಿ ಬೆಳೆದಿಹನು, ಪರದೇಶಿ
ತಾನಾದೊಡಂ, ನೀಂ ಮಾಳ್ಪುದೆಲ್ಲಂ ಮಹಾ
ಗೋಪ್ಯಮಾಗಿರ್ಕೆ. ಏನಾದನೆತ್ತವೋದನ್
ಎಂದಾರುಮರಿಯದಿರ್ಕೆ. ತಂದೆ ತಾಯಿಲ್ಲದ
ಅನಾಥನ್ , ಅಜ್ಜಿಯೊಡನಿಹನಂತೆ, ಆ ಪಾಳ್ಗುಡಿಯ
ಬಳಿಯ ಪುಳ್ಗುಡಿಸಲಲ್ಲಿ. ನೀವವನ ನೆಲೆಯರಿತು,
ಈ ಇರುಳೆ, ಆರುಮರಿಯದಂತೆ, ಮುದುಕಿಯಂ
ಕೊಂದು, ಕಾನನಾಂತರದೊಳಾ ತರಳನಂ
ಸಂಹರಿಸಿ, ಕುರುಪು ತಂದೆನಗೆ ತೋರವೇಳ್ಕುಂ,
ತಿಳಿಯಿತೇ?

**ಭೀಷಣ:** - ಕುಂದಿಲ್ಲದಂತೆ ನಡೆಯುವೆವು, ಜೀಯ.

**ದುಷ್ಟಬುದ್ಧಿ:** - ಅರುಮರಿಯದಂತೆ!.... ತರಳನಂದವ ಕಂಡು
ಎದೆಗರಗದಿರಿ!

**ಭೀಷಣ:** - *(ವಿಕಟನಗೆ ನಕ್ಕು)* ಎದೆಗರಗುವುದೆ, ಜೀಯ?
ಅನಿತು ಹೇಡಿಗಳಲ್ಲ ನಾವು.

**ದುಷ್ಟಬುದ್ಧಿ:** - ಬಾಲರೋದನಕೆ
ಮರುಳಾಗಬೇಡಿ.

**ಭೀಷಣ:** - ರೋದನವ ಕೇಳಿಕೇಳಿ
ನಮ್ಮ ಕಿವಿ ಕಿವುಡೆದ್ದುವೊಗಿವೆ, ಜೀಯ.

**ದುಷ್ಟಬುದ್ಧಿ:** - ಕೊಳ್ಳಿ ಮುಂಗಡವಿದನು. ಕೊಲೆಗೈದು
ಕುರುಪು ತಂದೆನಗೆ ತೋರ್ದಾಮೇಲೆ
ಬಹುಮಾನವಿದೆ ನಿಮಗೆ ಇದಕಿಂ ಮಿಗಿಲ್.
ಮತ್ತೆಲ್ಲಿಯಾದೊಡಂ ತಪ್ಪಿನಡೆದಿರೊ?... ನಿಮಗೆ
ಕಾದಿಹುದು ನರಕಕಂಪನಕಾರಿ ಘೋರಶಿಕ್ಷೆ!
ಸಾವಲ್ಲ , ತಿಳಿಯಿತೆ? ಘೋರಶಿಕ್ಷೆ!

*[ಮೂವರಿಗೂ ಬೆಲೆಯ ಹೊನ್ನೀಯುತ್ತಾನೆ. ಅವರು ಕಣ್ಣರಳಿಸಿ, ಹಿಗ್ಗಿ, ನೆಲಮುಟ್ಟಿ ಮಣಿದು ಹೋಗುತ್ತಾರೆ. ಅವರು ಹೋಗುವುದನ್ನ ತುಟಿಗಚ್ಚಿ, ಮುಖಸುಕ್ಕಿ ನೋಡುತ್ತಾ ನಿಲ್ಲುತ್ತಾನೆ.]*

*ಪರದೆ ಬೀಳುತ್ತದೆ.*

*

**<u>ದೃಶ್ಯ ೪</u>**

*[ಕುಂತಳನಗರದ ಒಂದು ಬೀದಿಯ ಮೂಲೆಯಲ್ಲಿ ಒಂದು ಮುರುಕಲು ಗುಡಿಸಲು. ಮುದುಕಿಯೊಬ್ಬಳು ನರಳುತ್ತಾ ಹಾಸಗೆಯಮೇಲೆ ಕುಳಿತಿದ್ದಾಳೆ. ಅವಳ ಬಳಿ ಹೆಂಗಸೊಬ್ಬಳು ಕುಳಿತಿದ್ದಾಳೆ.]*

**ಹೆಂಗಸು:** - ಆಮೇಲೆ?

**ಮುದುಕಿ:** - ಅರಿನೃಪರು ಕೇರಳವ ಮುತ್ತಿದರು. ದೊರೆ ರಣದಿ
ಕಾದಾಡಿ ಮಿತ್ತುವಿಗೆ ತುತ್ತಾದ. ಅವನ ಪತಿವ್ರತೆ,
ರಾಣಿ, ಈ ಬಾಲಕನ ತಾಯಿ, ಸಹಗಮಿಸಿದಳು.
ಹಗೆಯವರು ಆರಸುಕುವರನ ಕೊಲ್ಲಲೆಂದರಸಿದರು;
ದೂತರನಟ್ಟಿ ಎಲ್ಲಿಲ್ಲಿಯುಂ ಸೋದಿಸಿದರು.
ನಾನು ಮೊದಲೆಯೆ ಅರಿತು, ಬಾಲಕನ ಬೈತಿಟ್ಟ
ತಾವಿಂದೆ, ಕತ್ತಲಲಿ ತೊಟ್ಟಿಲನು ಹೊತ್ತು,

ಅವರ ಕಣ್ಣಿಗೆ ಬೀಳದಂತೆ, ಕಾಡುಮಲೆಗಳಲಿ
ಅಲೆದಲೆದು, ಅನ್ನವಿಲ್ಲದೆ ಹಗಲಿರುಳು ನಡೆದು,
ತೊಳಲಿ, ಕಡೆಗೀ ನಗರಿಗೈತಂದೆ. ಇಲ್ಲಿ ದಿನವೂ
ತಿರಿದು ಸಲಹಿದೆ ಕಂದನಂ.*(ಕಣ್ಣೊರಸಿಕೊಳ್ಳುತ್ತಾಳೆ.)*

**ಹೆಂಗಸು:** - ಅಳುವುದೇಕಮ್ಮಾ?
ಶ್ರೀಹರಿಯೆ ಕಾಯುವನು.

**ಮುದುಕಿ:** - ನನಗಾತನೆಯೆ ಕಣ್ಣು;
ನನಗಾತನೆಯೆ ಹೃದಯ; ನನಗಾತನೇ ಜೀವ!
ನಾನಿನ್ನು ಹೋಗುವೆನು. ಇನ್ನವನ ರಕ್ಷಣೆಯ
ಬಾರ ಇದುವರೆಗೆ ಸಲಹಿದ ಶ್ರೀಹರಿಯ ಮೇಲೆ!
*(ತಡೆಯಾಲಾರದೆ ಬಿಕ್ಕಿ ಬಿಕ್ಕಿ ಅಳುತ್ತಾಳೆ.)*

**ಹೆಂಗಸು:** - *(ಮುದುಕಿಯ ತಲೆ ಎಳವಿ ಸಂತೈಸುತ್ತಾ)*
ಬಾಲಕನು ಹರಿಭಕ್ತನೆಂದೊರೆದೆ. ತಾಯೀ,
ಭಕ್ತವತ್ಸಲನಲ್ತೆ ಶ್ರೀಹರಿ? ಭಯವೇಕೆ?

**ಮುದುಕಿ:** - *(ತಟಕ್ಕನೆ ಪ್ರಶಾಂತಲಾದಂತೆ ಹೆಂಗಸನ್ನೆ ನೋಡುತ್ತಾ)*
ಆರಮ್ಮಾ ನೀನು? ನಿನ್ನ ಕೈ ಸೋಂಕಿಂದೆ
ನನ್ನ ಅಳಲಿಕೆಯೆಲ್ಲ ನೀಗಿದಂತಾಯ್ತುಲಾ!

**ಹೆಂಗಸು:** - *(ನಸುನಕ್ಕು)* ನಾನಿಲ್ಲೆ ಗುಡಿಯ ಗುಡಿಸುವ ದಾಸಿ.
ನೀನಿಲ್ಲಿಗೈತಂದ ದಿನದಿಂದ ನಿನ್ನನಾ
ಗುಡಿಯೊಡೆಯ, ನೀನರಿಯದಂತೆ, ರಕ್ಷಿಸುತಿಹನು
ನಿಮ್ಮಿರ್ವರನು. ಅವನೆ ಕಳುಹಿದನಿಂದು ನನ್ನನ್
ನಿನ್ನೆಡೆಗೆ. ಎದೆಗೆಡದಿರಜ್ಜೀ. ಭಗವಂತನಿಗೆ
ಸೇರಿಹುದು ನಿನ್ನ ಕಂದನ ಕಾಪು.

**ಮುದುಕಿ:** - ತಂಗೀ,
ಭಗವಂತನಿಲ್ಲದಿರೆ ನಾನೇಸರವಳು? ಅವನೆ
ಕಾಪಾಡಿಹನು ದಿಟ: ನಾನೇಂ ಬರಿ ನಿಮಿತ್ತ!
ಎಷ್ಟೊ ಕಷ್ಟವ ಸಹಿಸಿ ಪಾಲಿಸಿದೆ ಮಗುವ.

ಇಡೆ ತೊಟ್ಟಿಲಿಲ್ಲ; ಆಡಿಸುವರಿಲ್ಲ; ಮನೆಯಿಲ್ಲ;
ಉಡುಗೆ ತೊಡುಗೆಗಳಿಲ್ಲ; ಎರೆಯೆ ನೀರಿಲ್ಲ;
ಕುಡಿಸೆ ಹಾಲಿಲ್ಲ; ಎಣ್ಣೆ ಬೆಣ್ಣೆಗಳಿಲ್ಲ; ಮುದ್ದಿಸಲು
ತಾಯ್ತಂದೆಯರುಮಿಲ್ಲ. ಅದನ್ನೆಲ್ಲ ಕಂಡೆನ್ನ
ಕರುಳುರಿದು, ಎದೆ ಬೇಯುತ್ತಿತ್ತು. ಆದರೂ
ಮೊಳೆವಲ್ಲು, ಉಗುವ ಜೊಲ್ಲು, ದಟ್ಟಿತಡಿ, ತೊದಲನುಡಿ,
ತೊಳತೊಳಗುತಿಹ ಸೊಬಗು, ಮೆರೆವ ನಗುಮೊಗದ ಬಗೆ,
ಪೊಳೆವ ಕಣ್, ನುಣ್ ಕದಪು, ಚೆಲ್ವ ಪಣೆ, ಇವೆಲ್ಲಮಂ
ನೋಡಿ, ಬಾಲಕನ ಲೀಲೆಯಂ ಕಂಡು ಹಿಗ್ಗಿ
ಸುಖಿಯಾದೆ…. ಶ್ರೀಹರಿ! ಗೋವಿಂದ! ಭಕ್ತವತ್ಸಲ!
ದೀನಬಂಧು! ಕಂದನಂ ಕಾಪಾಡು. ತೆರಳುವೆನು
ನಿನ್ನ ತೊಡೆಮೇಲಿಟ್ಟು!…. ತಂಗೀ, ಬಾಯಾರುತಿದೆ.
*(ಹೆಂಗಸು ನೀರುಕುಡಿಸುತ್ತಾಳೆ. ಮುದುಕಿ ನಿಡುಸುಯ್ದು)*
ಅಯ್ಯೊ, ನನ್ನ ಕಂದಮ್ಮನೆಲ್ಲಿ?

**ಹೆಂಗಸು:** - ಹೊರಗೆಲ್ಲಿಯೊ ಆಡಲು ಹೋಗಿಹನು….
ಹುಡುಕಿ ಕಳುಹಿಸುವೆ. *(ಎದ್ದು ನಿಲ್ಲುತ್ತಾಳೆ.)*
ಅಜ್ಜೀ, ಭಗವತ್ ಕೃಪೆ ಸುಖದ ಗುರಿಗೆಮ್ಮನೊಯ್ಯಲ್
ಒಮ್ಮೊಮ್ಮೆ ನಿರ್ಮಿಪುದು ಕ್ಲೇಶಕಷ್ಟದ ಸೇತುವಂ.
ಧೈರ್ಯಗೆಡದಿರು, ತಾಯಿ. ಸಲ್ಲದಿಲ್ಲಿ ನಿರಾಶೆ.
ಕಾಣ್ ಕೃಪಾನಿಧಿಯ ಕೈಯನೀ ದುರ್ವಿಧಿಯೊಳುಂ.
*(ಹೆಂಗಸಿನ ಮುಖದಮೇಲೆ ಜ್ಯೋತಿಯಾಡಿದಂತಾಗಿ ಅವಳ ದೇವತಾರೂಪದ ಛಾಯೆ ಕಾಣಿಸಿಕೊಳ್ಳುತ್ತದೆ. ಮುದುಕಿ ಬೆರಗಾಗಿ ಕೈಮುಗಿಯುವಾಗಲೆ ಆಕೆ ಹೋಗುತ್ತಾಳೆ.]*

**ಮುದುಕಿ:** - *(ಸ್ವಗತ)* ನೀನ್ ಬಣ್ಣಿಸಿದ ಭಗವಂತನಾ ಕೃಪೆಯೆ
ನೀನೆಂದು ತೋರುತಿದೆ. ತಂಗಿ. ಇಲ್ಲದಿರೆ
ನನಗಿದೇನೀ ಶಾಂತಿ, ನನ್ನ ಮುದ್ದಿನ ಕಂದನಂ
ತೊರೆದಗಲುವೀ ಕಡೆಗಾಲದೊಳ್?…. ಕಂದಾ,
ನನ್ನ ಜೀವಾನಂದಾ, ಎಲ್ಲಿರುವೆ ಬಾ ಬೇಗ,
ನಿನ್ನ ಸಿರಿಮೊಗವನೀಸುತೆ ಕಣ್ ಮುಚ್ಚುವೆ.
*(ಚಂದ್ರಹಾಸನು ಓಡಿಬರುತ್ತಾನೆ.)*
ಬಂದೆಯಾ, ಕಂದ, ಸುಖವಾಗಿ ಆಡಿದೆಯಾ?

**ಚಂದ್ರಹಾಸ:** - ಅಜ್ಜೀ, ನೀನೆನ್ನ ಕೂಗಿದೆಯಾ?

**ಮುದುಕಿ:** - ನಿನಗಾರು ಹೇಳಿದರು, ಮಗೂ?

**ಚಂದ್ರಹಾಸ:** - ಅರಿಲ್ಲ, ಅಜ್ಜಿ ಗಾಳಿ ಮರದಲಿ ಸುಳಿಯೆ
ಕೋಗಿಲೆಯ ದನಿಯಲ್ಲಿ ನೀನೆನ್ನ ಕರೆದಂತೆ
ಆಯ್ತು. ತೊರೆಯ ಎಡೆ ನಾ ನಿಂತು
ಸುಳಿಸುಳಿದು ಸುತ್ತಿ, ನೆಗೆದು, ಕಲ್ಗಳನೊತ್ತಿ,
ಮೊರೆವ ತೆರೆಗಳನು ನೋಡುತಲಿದ್ದೆ.
ನೀನೆನ್ನ ಕರೆದವೋಲಾಯ್ತು. ಓಡುತ ಬಂದೆ.

**ಮುದುಕಿ:** - ಕಂದ, ಹತ್ತಿರಕೆ ಬಾ, ಕುಳಿತುಕೊ.
*(ಚಂದ್ರಹಾಸನು ಹಾಸಗೆಯಮೇಲೆ ಮುದುಕಿಗೆ ಒತ್ತಿ ಕುಳಿತುಕೊಳ್ಳುತ್ತಾನೆ. ಮುದುಕಿ ಅವನ ಕೆನ್ನೆಗಲ್ಲಗಳನ್ನು ಸವ ರುತ್ತಾ)*
ಸದಾ ಶ್ರೀಹರಿ ನಿನಗೆ ಕೃಪೆಮಾಡಲಿ! *(ಆಶೀರ್ವದಿಸುತ್ತಾಳೆ.)*

**ಚಂದ್ರಹಾಸ:** - *(ತೋರಿಸುತ್ತಾ)* ನೋಡಜ್ಜೀ, ಬಟ್ಟೆಯೆಡೆ ತೊರೆಯ ಮಳಲಲ್ಲಿ ಆಟವಾಡುತಿರೆ
ಬಟ್ಟಗಲ್ಲೊಂದೆನಗೆ ದೊರೆಯಿತು.
ಅಜ್ಜೀ, ಸೋಜಿಗದ ಕಲ್ಲು; ರಮಣೀಯವಾಗಿದೆ.
ಕತ್ತಲೆಯ ಕರಗಿಸಿ ಎರಕ ಹೊಯ್ದಂತೆ ಮಿರುಗುತಿದೆ.

**ಮುದುಕಿ:** - *(ಅದನ್ನು ತೆಗೆದುಕೊಂಡು ನೋಡಿ ಹಣೆಗೆ ಮುಟ್ಟಿಸಿಕೊಂಡು)*
ಮಂಗಳದ ಸೂಚನೆಯ ಹರಳು, ಮಗೂ.
ನೀನಿದನು ಅಗಲದೆ ಆವಗಂ ಪೂಜೆಗೆಯ್.
ಮುರಹರನ ಬೆಂಬಲ, ಕೃಪೆ, ಒಲವು
ಎಲ್ಲ ದೊರಕುವುದು ನಿನಗೆ….
*[ಚಂದ್ರಹಾಸನು ಅದನ್ನು ತೆಗೆದಿಟ್ಟುಕೊಂಡು ಮತ್ತೊಂದನ್ನು ತೆಗೆದು ತೋರುತ್ತಾ]*

**ಚಂದ್ರಹಾಸ:** - ಇದು ರನ್ನದಲರು. ಈ ತೆರನ ನೋಡಿಹೆಯಾ, ಅಜ್ಜೀ?

**ಮುದುಕಿ:** - *(ನೋಡಿ ಬೆರಗುವಟ್ಟು)* ಎಲ್ಲಿ ಸಿಕ್ಕಿತು, ಕಂದ, ಈ ಅರಸೊಡವೆ?

**ಚಂದ್ರಹಾಸ:** - ಬೀದಿಯೆಡೆ ಮಳಲ ದಿಣ್ಣೆಯ ಮೇಲೆ
ನಾನು ಗೆಳೆಯರ ಕೂಡಿ ಆಡುತಿರೆ,

ಮಂತ್ರಿಯ ಮಗಳಂತೆ ಅವಳು, ಪುಟ್ಟಚೆಲುವೆ,
ತನ್ನ ತಂದೆಯ ಹಿಂದೆ ಅಣ್ಣನೊಡಗೂಡಿ
ಹೋಗುತ್ತಿದ್ದವಳು ನನ್ನೊಡನೆ ಮಾತಾಡಿ
ಕೊಟ್ಟಳಜ್ಜೀ ಇದನು... *(ಮುದುಕಿ ಅನ್ಯಮನಸ್ಕಳಾಗುತ್ತಾಳೆ.)*

**ಮುದುಕಿ:** - *(ಸ್ವಗತ)* ಇಂತಪ್ಪ ರನ್ನದೊಡವೆಯ ರಾಸಿಯೊಳೆ
ನೀ ಹುಟ್ಟಿ ಬಂದೆ... ಅರಿಯದೆಯೆ ಸುಖಿ ನೀನು;
ಅರಿತೆನಗೊ ಉರಿನೋವು... ಅರವಸಿರಿನಲಿ ಬಂದೂ
ಹೆರರ ಬಿಕ್ಕಿಗೆ ನೀನು ಕೈನೀಡುವಂತಾಯ್ತೆ?
*[ಸುಯ್ದು ಕಂಬನಿಗರೆಯುತ್ತಾಳೆ.]*

**ಚಂದ್ರಹಾಸ:** - ಏಕಳುವೆ, ಅಜ್ಜಿ?
ನಾನಿದನು ತೆಗೆದುಕೊಂಡುದು ತಪ್ಪೆ? ಮನ್ನಿಸಜ್ಜೀ!
ಅರಿಯದೆಯೆ ಮಾಡಿದೆನು; ಇನ್ನು ಮಾಡುವುದಿಲ್ಲ.
ನಿನಗೆ ನೋವಾಗುವುದನೆಂದಿಗೂ ನಾನೆಸಗೆ.

**ಮುದುಕಿ:** - *(ಮುದ್ದಿಸಿ ಸಂತೈಸುತ್ತ)* ತಪ್ಪೇನು ಅದರಲ್ಲಿ? ತಪ್ಪಲ್ಲ, ಕಂದ.

**ಚಂದ್ರಹಾಸ:** - ಮತ್ತೆ? ನೀನಕೆ ಕಣ್ಣೀರ ಕರೆಯುತಿಹೆ?...
ಅಜ್ಜೀ, ನೀನು ಯಾವಾಗಲೂ ಕಣ್ಣೊರಸಿಕೊಳುತಿರುವೆ.
ಏತಕೋ ನಾನರಿಯೆ. ಎನಿತೆನಿತು ಕೇಳಿದರೂ
ನೀನು ಹೇಳುವುದಿಲ್ಲ... ಕಂಡಕಂಡವರೆಲ್ಲ,
ಅಜ್ಜೀ, ನನ್ನ ತಂದೆತಾಯ್ಗಳ ಹೆಸರ ಕೇಳುವರು.
ಇಂದು ಮಂತ್ರಿಯು ಕೂಡ ಕೇಳಿದನು.

**ಮುದುಕಿ:** - ಏನೆಂದೆ?

**ಚಂದ್ರಹಾಸ:** - ನಾನರಿಯೆ ಎಂದೆ.

**ಮುದುಕಿ:** - *(ಸ್ವಗತ)* ತಿಳಿಯದಿರೆ ಸುಖವಿರಲು ತಿಳಿವೆ ಸಂಕಟಕರ!
ತಿಳಿಸಿದರೆ, ಕತ್ತಲಲಿ ಮಿಂಚು ಹೊಳೆದಂತಾಗಿ,
ಬಟ್ಟೆಗೆಡುವುದು, ಕುರುಡು ದಟ್ಟೈಸಿ! ನಿನಗರುಹಿ
ನಿನ್ನ ಹಿಂದಣ ಸಿರಿಯ, ನಾನೇಕೆ ಕೊರಗಿಸಲಿ?
*[ಚಂದ್ರಹಾಸನಿಗೆ ಬಹಿರಂಗವಾಗಿ]*

ಕಂದಾ, ಶ್ರೀಹರಿಯೆ ನಿನಗೆ ತಂದೆ.
ನಿನ್ನನಾತನೆ ಕಾಯ್ದು ಸಲಹುವನು.
ಕಷ್ಟದಲಿ ಅವನ ಕರೆ; ಅವಗಂ ಮರೆಯದಿರು.
*[ತುಂಬ ದಣಿದು ನಿಟ್ಟುಸಿರಿಡುತ್ತಾಳೆ. ಉಸಿರು ಕಟ್ಟಿತೊ ಎಂಬಂತೆ ಕೆಮ್ಮುತ್ತಾಳೆ. ತಡೆಯಲಾರದೆ ಹಾಸಗೆಗೊರಗುತ್ತಾಳೆ. ಚಂದ್ರಹಾಸನು ಹೆದರಿ  ಅಳುದನಿಯಿಂದ]*

**ಚಂದ್ರಹಾಸ:** - ಅಜ್ಜೀ, ಅಜ್ಜೀ, ಏನಾಯ್ತು, ಅಜ್ಜಿ?
ಹಿಡಿದುಕೊಳ್ಳಲೆ ನಿನ್ನ? *(ಎಂದು ಅವಳನ್ನು ಆತುಕೊಳ್ಳಲು*
*ಪ್ರಯತ್ನಿಸಿ ಸೋಲುತ್ತಾನೆ.)*

**ಮುದುಕಿ:** - *(ತಡೆ ತಡೆದು ಮೆಲುದನಿಯಲ್ಲಿ)* ಕಂದ, ನಾನು ಹೋಗುತ್ತೇನೆ.
ನನಗೆ ಕರೆ ಬಂದಿದೆ.

**ಚಂದ್ರಹಾಸ:** - *(ಶೋಕಿಸುತ್ತ)* ಹೋಗಬೇಡ, ಅಜ್ಜೀ. ನಿನ್ನ ಮಾತನು
ಎಂದೂ ಮಿರುವುದಿಲ್ಲ.
*[ಬಿಕ್ಕಿಬಿಕ್ಕಿ ಅಳುತ್ತಾನೆ.]*

**ಮುದುಕಿ:** - *(ನಿದಾನವಾಗಿ)* ಮಗೂ, ಆ ಗುಡಿಯ ಗುಡಿಸುವ ದಾಸಿಯಂತೆ; ಬಂದಿದ್ದಳಿಲ್ಲಿ. ಇನ್ನು ನಿನಗವಳೆ ಅಜ್ಜಿ.
ಹೆದರದಿರು, ಕಂದ.... ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ! *(ಸಾಯುತ್ತಾಳೆ.)*

**ಚಂದ್ರಹಾಸ:** - *(ದಟ್ಟವಾಗಲು ಪ್ರಾರಂಭಿಸಿದ ಮುಂಗತ್ತಲೆಯಲ್ಲಿ ಅಜ್ಜಿಯ ನಿಶ್ಚಲ ಮುಖ ನೋಡಿ ಹೆದರಿ)*
ಅಜ್ಜೀ, ಮಾತಾಡು. ಕತ್ತಲಾಗುತಿದೆ.
ನನಗೆ ಹೆದರಿಕೆ. ಹಣತೆ ಹೊತ್ತಿಸಲೇ?
ಎಸರಿಡಲು ಬೆಂಕಿ ಹೊತಿಸಲೇ?
ನೀರು ತರಬೇಕೇನು? ಹೇಳು, ಅಜ್ಜೀ ಅಜ್ಜೀ! *(ಅಳುತ್ತಾ)*
ಹೊರಗೆ ಯಾರೊ ಬಂದರು, ಅಜ್ಜೀ!
ಹೆಜ್ಜೆ ಸದ್ದಾಗುತಿದೆ! ಗದ್ದಲವಾಗುತಿದೆ!
*[ಬೀಷಣ, ಕಾಳ, ಮಾರ ಮೂವರು ಚಂಡಾಲರು ಬರುತ್ತಾರೆ.]*
ಅಜ್ಜೀ, ಬಂದರು, ಬಂದರು, ಬಂದರು! ಅಯ್ಯೊ!
*[ಚಂದ್ರಹಾಸನು ಭಯಂಕರಾಕಾರರನ್ನು ನೋಡಿ ಹೆದರಿ ಕೂಗಿ ಅಜ್ಜಿಯ ಮೇಲೆ ಬಿದ್ದು ಅಪ್ಪಿ ಮೂರ್ಛೆಹೋಗುತ್ತಾನೆ.*
*]*

**ಭೀಷಣ:** - ಹುಡುಕಿ ಸಾಕಾಯ್ತು ಇವನಿಗಾಗಿ.... ಏನು ನೋಡುವೆ?
ಎತ್ತಿಕೊ, ಮಾರ.

**ಮಾರ:** - ಅಯ್ಯೋ ಈ ಮಗುವನ್ನೆ ನಾವು ಕೊಲೆಮಾಡುವುದು?

**ಕಾಳ:** - ಕೈಯುಗುರ ಕೆಲಸಕ್ಕೆ ಕೊಡಲಿ ತಂದಂತೆ!

**ಮಾರ:** - *(ಚಂದ್ರಹಾಸನನ್ನು ಎತ್ತಿಕೊಳ್ಳಲು ಎಳೆಯುತ್ತಾನೆ.)*
ಬಿಗಿಯಾಗಿ ಹಿಡಿದಿದ್ದಾನೆ ಅಜ್ಜಿಯನ್ನು!
*(ಬಲವಾಗಿ ಎಳೆದು ಹೆಗಲಮೇಲೆ ಹಾಕಿಕೊಳ್ಳುತ್ತಾನೆ.)*

**ಕಾಳ:** - ನಮ್ಮ ನೋಡಿಯೆ ಜೀವ ಹಾರಿತೊ ಈ ಹುಡುಗನಿಗೆ?

**ಭೀಷಣ:** - ಏನು ಕಾಲ ಕಂಡಿದ್ದಾಳೊ ಈ ಮುದುಕಿ?
ಇನ್ನೂ ನಿದ್ದೆ ಮಾಡುತ್ತಿದ್ದಾಳಲ್ಲ! ಇರಿ ಅವಳೆದೆಗೆ, ಕಾಳ.
ಅವಳು ಬದುಕ್ಕಿದ್ದರೆ ಈ ಕಾರ್ಯ ಬಹಿರಂಗವಾದೀತು.
ಜನರಾರೂ ಅರಿಯದಿರಲೆಂದು ಮಂತ್ರಿಯ ಕಟ್ಟಾಣೆ.
*(ಕಾಳ ಇರಿಯುತ್ತಾನೆ.)*

**ಮಾರ:** - ಎಲ್ಲಿಗೊಯ್ಯುವುದಿವನ?

**ಕಾಳ:** - ವರ್ತಕನ ಕೊಲೆಮಾಡಿದಾ ಕಾಡಿಗೆ.

**ಭೀಷಣ:**- ಬೇಡ, ಸೈನ್ಯಾಧಿಕಾರಿಯನು ಕತ್ತರಿಸಿದಾ ದರಿಮಲೆಗೆ.
ದೂರವಾದರೂ ಗೋಪ್ಯ ರಕ್ಷಣೆಯಾಗಲಿ!

**ಮಾರ:**- ಮಲ್ಲಿಗೆಯ ಹೂ ಹಗುರ ಈ ಹಸುಳೆ. ದೂರ ಎಷ್ಟಾದರೇನು?
*(ಗೂಬೆ ಕೂಗುತ್ತದೆ.)*

**ಕಾಳ:** - ಏಕೊ ಗೂಬೆ ಕೂಗುವುದಿಲ್ಲ!

**ಭೀಷಣ:** - ಮತ್ತೇನು ಕೋಗಿಲೆ ಕೂಗಬೇಕ್ಕಿತ್ತೇನು, ನಿನ್ನ ಈ
ಶುಭಕಾರ್ಯಕೆ?.... ಬನ್ನಿ ಬೇಗ. *(ಹೊರಡುತ್ತಾನೆ.)*

*[ಕಾಳ ಭೀಷಣನನ್ನು ಹಿಂಬಾಲಿಸುವ ಅವಸರದಲ್ಲಿ ಎಡವಿಬೀಳುತ್ತಾನೆ. ಅವನ ಕೈಗೆ ವಿಷಯೆಯಿತ್ತಿದ್ದ ರನ್ನದೊಡವೆ ತಗುಲಿ ಸಿಕ್ಕುತ್ತದೆ. ಅದನ್ನು ಮಾರನಿಗೆ ತೋರಿ]*

**ಕಾಳ:** - ದಿಟಕ್ಕೂ ಶುಭಕಾರ್ಯವೆ ಕಣಾ!
*(ಸೊಂಟಕ್ಕೆ ಸಿಕ್ಕಿಸಿಕೊಳ್ಳುತ್ತಾನೆ. ಚಂದ್ರಹಾಸನನ್ನು ಎತ್ತಿಕೊಂಡು ಮಾರನೂ ಅವನ ಹಿಂದೆ ಕತ್ತಿಹಿಡಿದು ಕಾಳನೂ ಹೊರಡುತ್ತಾರೆ.)*

*ಪರದೆ ಬೀಳುತ್ತದೆ.*

*

## ಅಂತ್ಯರಂಗಂ-ದೃಶ್ಯ ೪,

<u>**ದೃಶ್ಯ೪**</u>

*[ಚಂದ್ರಶಾಲೆ. ಹಾಲು ಚೆಲ್ಲಿದ ಹಾಗೆ ಬೆಳುದಿಂಗಳು. ಅಲ್ಲಿ ವಿಷಯೆ ಒಬ್ಬಳೆ ಕುಳಿತು ಮೈಮರೆತು ತನಗೆ ತಾನೆ ಕನವರಿಸುವಂತಿದ್ದಾಳೆ ]*

**ವಿಷಯೆ:** - ಎನಿತು ಮಲಗಿಹನು, ಮಾಮರದ ತಣ್ಣೆಳಲಲ್ಲಿ,
ಮೂಲೋಕದಾನಂದ ಮೂರ್ತಿಮತ್ತಾದಂತೆ!
ವದನದೆಳನಗೆ ಎಂತು ಸಿಂಚಿಸಿದೆ ಮೋಹವನು?
ಸ್ವಪ್ನಲೋಕದೊಳಾವ ಸಂತಸವ ಸವಿಯುತಿಹನೊ?
ಕನಸಿನಲಿ ಅವ ಚೆಲುವೆಯ ಕಂಡು ನಗುತಿಹನೊ?...
ನಿನ್ನ ಕನಸಿನ ಆ ಕಾಂತೆಯಾದರು ಅಗುವಾ
ಪುಣ್ಯವೆನ್ನದಾಗಬಾರದೇ?... *(ಕಣ್ಣೊರಸಿಕೊಳ್ಳುತ್ತಾಳೆ.)*
*[ರಾಜುಕುಮಾರಿ ಚಂಪಕಮಾಲಿನಿ ಮೆಲ್ಲಗೆ ಹಿಂದಿನಿಂದ ಪ್ರವೇಶಿಸುತ್ತಾಳೆ.]*

**ಚಂಪಕಮಾಲಿನಿ:** - ಹಾಲುಗಲ್ಲಲಿ ಕಡೆದ ಪಡಿಮೆಯೆನೆ ಕುಳಿತಿಹನು!
ಸುಯ್ಯುತಿಹಳೇಕೆ? ಕಣ್ಣೊರಸಿಕೊಂಡಳಲ್ತೆ? -
ಇರಲಿ ಕಣ್ಣಮುಚ್ಚಾಟದಲಿ ರಮಿಸುವೆನವಳ.
*[ಹಿಂದಿನಿಂದ ಹೋಗಿ ಕಣ್ಣು ಮುಚ್ಚುತ್ತಾಳೆ]*

**ವಿಷಯೆ:** - *(ಬೆಚ್ಚಿ, ತನ್ನ ಕಣ್ಣುಗಳನ್ನು ಮುಚ್ಚಿದ್ದ ಎರಡೂ ಕೈಗಳನ್ನು ಮುಟ್ಟಿ ನೋಡುತ್ತಾ)*
ಆರದು?

**ಚಂಪಕಮಾಲಿನಿ:** - *(ಕೀರಲು ದನಿಯಿಂದ)*
ನೀ ಕಾಣುತ್ತಿದ್ದಾ
ಕನಸಿನವ! *(ಚಂಪಕಮಾಲಿನಿ ಬೇಕೆಂತಲೆ ತನ್ನ ದನಿಯನ್ನು ಬದಲಾಯಿಸಿದ್ದರಿಂದ ಗುರುತಿಸಲಾರದೆ)*

**ವಿಷಯೆ:** - ಓಹೊ, ನಿನ್ನ ಗುರಿತಿಸಲು ನಿನ್ನ ದನಿ ಬೇಕೆ ನನಗೆ?
ಸಾಲದದೇನೀ ನಿನ್ನ ಕರಕಮಲಗಳ ಸೋಂಕೆ?
ತಂಗಿ ಚಂಪಕೆಗಲ್ಲದಿನ್ನಾರಿಗೀ ಮೆಯ್ಯ ಸೊಂಪು?
ಬಿಡು, ಕೆಳದಿ. *(ಕೈ ಬಿಟ್ಟು ಗಟ್ಟಿಯಾಗಿ ನಗುತ್ತಾ ಮುಂದಕ್ಕೆ ಬಂದ ಚಂಪಕಮಾಲಿನಿಗೆ)*
ಎಷ್ಟು ಹೆದರಿಸಿಬಿಟ್ಟೆ, ತಂಗಿ?

**ಚಂಪಕಮಾಲಿನಿ:** - ಈ ಚಂದ್ರಶಾಲೆಯಲಿ, ಈ ಬೆಳ್ದಿಂಗಳಲಿ
ಇಲ್ಲಿಗೈತಹ ಕೆಚ್ಚು ಮನ್ಮಥನಿಗಲ್ಲದೆಯೆ
ಮತ್ತಾರಿಗುಂಟು? ಅವನೆಯೆ ತಾನೆ ನಿನ್ನ ಈ
ಭಯಕೆ ಕಾರಣ? ಅದಿರಿಲಿ, ಹೇಳು, ಸಖಿ:
*(ತನ್ನ ಎರಡೂ ಅಂಗೈಗಳನು ಮುಂದೆ ಚಾಚಿ)*
ನನ್ನ ಈ ಕೈಗಳೇತಕೆ ಒದ್ದೆಯಾಗಿಹವು?

**ವಿಷಯೆ:** - *(ಚೆನ್ನಾಗಿ ನೋಡಿದಂತೆ ನಟಿಸಿ)* ವಿರಹತಾಪದಿ ಬೆಮರಿ!

**ಚಂಪಕಮಾಲಿನಿ:** - *(ಅಣಕಿಸಿ)* ಆಹಾ! ತಾಪ ನಿನಗೆ, ಬೆಮರು ನನಗೆ?
ಏನ್ ತರ್ಕಸಿಂಹಿಣಿಯೋ? ತಪ್ಪು ನಿನತಲ್ಲ.
ಆ ಮನ್ಮಥನ ತರ್ಕಶಾಸ್ತ್ರವೆ ಹೀಗೆ! ಇರಲಿ,
ನಾನೆ ಕಾರಣವೊರೆವೆ, ನಿನ್ನ ಕಣ್ಣೀರಿಂದೆ
ನನ್ನ ಕೈ ತೊಯ್ದಿಹುದು. ಏಕೆ ಆ ನೀರು?
ನಿನ್ನ ಕಣ್ಣೇನು ಚಂದ್ರಕಾಂತ ಶಿಲೆಯೆ?
ಬೆಳ್ದಿಂಗಳಿಗೆ ಇಂತು ಸೋರುವುದಕೆ?

**ವಿಷಯೆ:** - ಆ ಚಂದ್ರನೀ ಹಾಸಕ್ಕೆ ನಿನ್ನ ಮೈಸೋತು.....

**ಚಂಪಕಮಾಲಿನಿ:** - ಓಹೋ ಅರ್ಥವಾಗುತಿದೆ!

**ವಿಷಯೆ:** - ಏನೆಂದೆ?

**ಚಂಪಕಮಾಲಿನಿ:** - *(ನಗುತ್ತಾ)* ಏನಿಲ್ಲ; ಕೌಮುದಿಯ ಪಾಲ್ಗಡಲು
ಮನಮೋಹಿಸುವ ಶಾಂತಿಯಿಂದೆಸೆಯುತಿದೆ ಎಂದೆ!

**ವಿಷಯೆ:** - *(ಬಿಸಿಸುಯ್ದು)* ಇರಬಹುದು.

**ಚಂಪಕಮಾಲಿನಿ:** - ಆ ಚಂದ್ರಹಾಸದಿಂ
ಮಾಧುರ್ಯದಂಬುಧಿ ಬೆಳ್ದಿಂಗಳೀ ರಾತ್ರಿ.

**ವಿಷಯೆ:** - *(ನಸು ಮುನಿಸು ನಟಿಸಿ)* ಇರಬಹುದು!

**ಚಂಪಕಮಾಲಿನಿ:** - ಕೆಳದಿ, ಇರಬಹುದು ಏಕೆ?
*(ಮತ್ತೆ ವಿಷಯೆ ಸುಯ್ಯುತ್ತಾಳೆ)*

ಏಕೆ ಬಿಸುಸುಯ್ಯುತಿಹೆ?
ನಿನ್ನೆಯಿಂ ನೀನಿಂತು ಕೊರಗಿ ಕುಗ್ಗಿಹೆ ಏಕೆ?
ಪಂಜರದ ಗಿಳಿಯೊಡನೆ ಸರಸ ಕೇಳಿಯನೇಕೆ
ತೊರೆದಿರುವೆ? ಪೊಂದೊಡವುಗಳನೇಕೆ ಬಿಸುಟಿರುವೆ?
ಸಖಿಯರೊಡಗೂಡಿ ನುಡಿಯದೆ ಮೌನವಾಗಿರುವೆ?
ಹೇಳು, ಮುದ್ದಿನ ಕೆಳದಿ. *(ಪಕ್ಕದಲ್ಲಿ ಕುಳಿತು ಸ್ನೇಹದಿಂದ)*

ಬಿರುನುಡಿಯನಾಡಿದರೆ?
ಬಯಕೆಯನು ಸಲ್ಲಿಸದೆ ಧಿಕ್ಕರಿಸಿದರೇ ನಿನ್ನ?
ಮೈಯಲ್ಲಿ ಏನಾದರೂ ರುಜೆ ತೋರಿಹುದೆ?

**ವಿಷಯೆ:** - ಏನಿಲ್ಲ, ತಂಗಿ.
ನಿರ್ವೊಯ್ದು ಸುಣ್ಣ ಮರಳುವ ತೆರದಿ ಬೇಯುತಿದೆ
ಹೃದಯ. ಶೀತಳ ಸುಧಾಮಯೂಖನು ಕೂಡ
ಬೆಂಗದಿರನಂತಿಹನು. ಏತಕೋ ನಾನರಿಯೆ!
ಸೃಷ್ಟಿಯೆಲ್ಲವು ನನ್ನ ಮೂದಲಿಸುವಂತಿಹುದು.
ತಳಿರ ಮರೆಯಲ್ಲಿಡಗಿ ಬಗ್ಗಿಸುವ ಕೋಗಿಲೆಯೂ
ನನ್ನನಣಕಿಸುವಂತೆ ಕೂಗುತಿದೆ.

**ಚಂಪಕಮಾಲಿನಿ:** - ಅಕ್ಕ,
ಹುದುಗಿರುವ ಯಾತನೆಯ ಹೊರಗೆಳಯಲೊಲ್ಲೆ,

ಬರಿದೆ ಏನೇನೊ ಮಾತುಗಳನಾಡುತಿಹೆ.
ನೀನು ನಿಜ ಹೇಳಿದರೆ ಸರಿ; ಅಲ್ಲದೊಡೆ,
ನಿನಗೆ ನಾ ಬೇಡೆಂದು ಇಲ್ಲಿಂದ ತೆರಳುವೆನು.
*(ಹೊರಡುವಂತೆ ನಟಿಸುತ್ತಾಳೆ)*

**ವಿಷಯೆ:** - ಹೋಗದಿರು, ತಂಗಿ. ಹೇಳುವೆನು.
ನಿನಗಲ್ಲದಿನ್ನಾರಿಗೀ ಹೃದಯದೊಳಗುಟ್ಟು?

**ಚಂಪಕಮಾಲಿನಿ:** - ಹೇಳಕ್ಕ, ನಾನಾರಿಗೂ ಹೇಳೆ.

**ವಿಷಯೆ:** - ನನ್ನ ಜೀವದ ಜೀವ ನೀನು, ತಂಗಿ,
ಇತ್ತ
ಬಾ. *(ವಿಷಯೆ ಚಂಪಕಮಾಲಿನಿಯ ಕಿವಿಯಲ್ಲಿ ಹೇಳುತ್ತಿರುತ್ತಾಳೆ. ಅಷ್ಟರಲ್ಲಿ ಪಂಕಜೆ ಓಡೋಡಿ ಬಂದು, ತೆಕ್ಕನೆ ನೋಡಿ ನಿಲ್ಲುತ್ತಾಳೆ)*

**ಪಂಕಜೆ:** - *(ವ್ಯಂಗ್ಯ ಧ್ವನಿಯಿಂದ)* ಓಹೋ, ತಪ್ಪಾಯ್ತು! ಬಳಿಗೆ ಬರಬಹುದೆ?

**ವಿಷಯೆ:** - *(ಮುಗುಳುನಗುತ್ತಾ)* ಏನಿದೀ ದಾಕ್ಷಿಣ್ಯ? ಎಂದಿಲ್ಲದುದು?
ಬಾ, ಪಂಕಜೆ.

**ಚಂಪಕಮಾಲಿನಿ:** - ಏನು ಅವಸರ, ಕೆಳದಿ? ಏಕೆ ಏದುತ್ತಿರುವೆ?

**ಪಂಕಜೆ:** - ಏನನೊ ಗುಟ್ಟನಾಡುತಲಿದ್ದಿರಿ?

**ವಿಷಯೆ:** - ಏನಿಲ್ಲ, ನಿನಗೇಕೆ?

**ಪಂಕಜೆ:** - ಲೋಕಕ್ಕೆ ಗೊತ್ತುಂಟು! ನಿನಗೊಬ್ಬಳಿಗೆ ಗುಟ್ಟು!

**ಚಂಪಕಮಾಲಿನಿ:** - ಏನದು ಗೊತ್ತಾಗಿರುವುದು?

**ಪಂಕಜೆ:** - ಈಗಳಾನರಿತೆ, ಸಖಿ ಏಕೆ ಕೊರಗುತಿದ್ದಳು
ಎಂದು.

**ಚಂಪಕಮಾಲಿನಿ:** - ನಿನ್ನರಿವನೆಮಗಿನಿತು ಹಂಚಬಾರದೆ,
ಪಂಕಜೆ? ಸವಿಯಬಾರದೆ ನಾವೂ, ರುಚಿನೋಡಿ?

**ಪಂಕಜೆ:** - *(ತುಸು ರಾಗಪೂರ್ವಕವಾಗಿ)*
ಪಾವಗಿದುಳಿದುರಂಟೆ? ಹರನ ಕೋಪದೊಳುರಿದು
ಜೀವಿಸಿದರುಂಟೆ? ಕಾಳ್ಗಿಚ್ಚಿನೊಳ್ ಕೆಳೆಗೊಂಡು
ಬೇವುತಸುವಿಡಿದು ಬಾಳ್ದವರುಂಟೆ? ಸುಗ್ಗಿಯಲಿ
ತುಂಬುಪೆರೆ ತೆಂಗಾಲಿ ಹೊಗಣೆಯರೊಡ್ಡಿದುರುಳಿಗೆ
ಸಿಲುಕಿ ಅಳುಕದೆ ಇಹರು ಉಂಟೇ?

**ವಿಷಯೆ:** - *(ನಗುತ್ತಾ)* ಏನಿದು ನಿನ್ನ ಗಮಕ ಕಲೆ? ಅದ್ಭುತ!

**ಪಂಕಜೆ:** - ಚಂಪಕಾ, ಕೇಳಿದೆಯ ಹೊಸಸುದ್ದಿ?

**ಚಂಪಕಮಾಲಿನಿ:** - ಏನದು

**ಪಂಕಜೆ:** - ನನಗೊಂದು ಮಂತ್ರ ತಿಳಿದಿಹುದು.

**ಚಂಪಕಮಾಲಿನಿ:** - ಗುರುವಾರು?

**ವಿಷಯೆ:** - ಆಕೆಯೋಪನೊ ಏನೊ?

**ಪಂಕಜೆ:** - ನನ್ನಕ್ಕನದನೆನಗೆ ಹೇಳಿಕೊಟ್ಟಳು ಇಂದೆ.
ಸಿದ್ಧಿವಡೆದಿಹೆನು ತಪಸ್ಸು ಮಾಡಿ!
ಅದನ್ನಿಲ್ಲಿ ಜಪಿಸಿದರೆ... *(ಹಿಹಿಹಿ ನಗುತ್ತಾಳೆ)*

**ಚಂಪಕಮಾಲಿನಿ:** - ಜಪಿಸಿದರೆ?

**ಪಂಕಜೆ:** - ನಡೆವ ಅದ್ಭುತ ಪವಾಡಕ್ಕೆ ಮೈಮರೆಯುವಿರಿ!

**ಚಂಪಕಮಾಲಿನಿ:** - *(ಪರಿಹಾಸ್ಯದಿಂದ)* ಅಬ್ಬಬ್ಬ!

**ಪಂಕಜೆ:** - ಹೆದರದಿರಿ!
ಅದನಿಲ್ಲಿ ಜಪಿಸಿದರೆ ನಮ್ಮ ಕೆಳದಿಯ ತಾಪ
ಅರೆಚಣದಿ ಮಾಯವಾಗುವುದು; ನಾ ಬಲ್ಲೆ.

**ಚಂಪಕಮಾಲಿನಿ:** - ಜಪಿಸು ಹಾಗಾದರೆ.

**ಪಂಕಜೆ:** – ಜಪಿಸಲೇ, ವಿಷಯೆ?

**ವಿಷಯೆ:** – ಏನಾದರೂ ಮಾಡು!

**ಪಂಕಜೆ:** – ಹೊಸ ಸುದ್ದಿ ಏನೆಂದು
ಕೇಳಿದೆಯಾ? ಚಂದನಾವತಿಯಿಂದ ಬಂದಿಹನು,
ಚಂದ್ರಹಾಸ! ಪಾಪ, ವಿಷಯೆಗೆ ತಿಳಿಯನವನು!
ಅಲ್ಲವೇ, ವಿಷಯೆ?

**ವಿಷಯೆ:** – ನಿನಗೇಕೆ ಆ ಚಿಂತೆ?

**ಪಂಕಜೆ:** – ನಾಳೆ ಅವನಿಗೆ ಮದುವೆಯಂತೆ!

**ವಿಷಯೆ:** – *(ದಿಗಿಲು ಬಿದ್ದು)* ಆಂ! ಯಾ... ಯಾ... ರೊಡನೆ

**ಪಂಕಜೆ:** – *(ವಿಷಯೆಗೆ)* ನಿರ್ಲಿಪ್ತೆ ನಿನಗೇಕೆ? ಆವಳೋ ದುರ್ಭಾಗ್ಯೆಯೊಡನೆ!

**ಚಂಪಕಮಾಲಿನಿ:** – ಅವಳಿಗಿಂ ಮಿಗಿಲಿಹರೆ ಸೌಭಾಗ್ಯೆಯರ್ ಜಗದಿ?

**ಪಂಕಜೆ:** – ಓಹೊ, ನನಗೂ?.... ಒಬ್ಬ ಚಂದ್ರನಿಗಿಬ್ಬರಾಸೆ!

**ವಿಷಯೆ:** – *(ಪಂಕಜೆಗೆ)* ಮೂದಲಿಸದಿರು ಬರಿದೆ ನೀನೆನ್ನ ತಂಗಿಯನು!
ಅವಳಾತನಂ ನೋಡಿಯೂ ಇಲ್ಲ!....

**ಪಂಕಜೆ:** – ಓಹೋ,
ನೋಡಿದುದು ನೀನೊಬ್ಬಳೆಯೆ; ಅಂತಾದರೆ....

**ಚಂಪಕಮಾಲಿನಿ:** – ಸಾಕು ನಿನ್ನಾಟ. ಬೇಗನೊರೆ, ಕೆಳದಿ.

**ಪಂಕಜೆ:** – *(ರಾಗವಾಗಿ)* ನಾಳೆ ಅವನಿಗೆ ಮದುವೆಯಂತೆ.
ವಿಷಯೆಯನೆ ಕೇಳಿ ತಿಳಿದುಕೊ ವಿಷಯವಂ.
ವಿಷಯೆ ಎಂಬಾ ಕನ್ಯೆ ಎಲ್ಲಿಹಳೊ ನಾನರಿಯೆ.

**ಚಂಪಕಮಾಲಿನಿ:** – *(ವಿಷಯೆಯ ಕಡೆ ತಿರುಗಿ)*
ಅಕ್ಕ, ನಿಜಹೇಳು, ನೀ ಬಲ್ಲೆಯೇನು?

**ಪಂಕಜೆ:** - ಪಾಪ! ಬಲು ಮುಗ್ಧೆ! ಅವಳಿಗೇನು ಗೊತ್ತು?

**ಚಂಪಕಮಾಲಿನಿ:** - ಹೇಳಬಾರದೆ ಬೇಗ, ಪಂಕಜಾ?

**ಪಂಕಜೆ:** - ಇಷ್ಟುದಿನ ನಮ್ಮೊಡನೆ ಇದ್ದವಳು, ಹೇಳದೆಯೆ
ಕೇಳದೆಯೆ ಒಳಸಂಚು ನಡೆಸುತ್ತ. ನಾಳೆ
ಚಂದ್ರಹಾಸನ ಕಟ್ಟಿಕೊಂಡೋಡುವಳು, ನೋಡು!
ವೈವಾಹಕೆಲ್ಲ ಸನ್ನಾಹಗಳು ನಡೆದಿಹವು....
ನಾಳೆ "ಬನದ ತಣ್ಣೆಳಲಿನಲಿ ತಳಿರ ಶಯನದಿ"
ಎಂಬ ಗೀತೆಯ ಹಾಡಬೇಕಿವಳು.

**ಚಂಪಕಮಾಲಿನಿ:** - *(ವಿಷಯೆಗೆ ಪರಿಹಾಸ್ಯದಿಂದ)*
ಕೆಳದಿ,
ಸಖಿಯರನು ಕೇಳದೆಯೆ ಹೀಗೆ ಗಂಡನ ಗೊತ್ತು
ಮಾಡುವರೆ? ನಿನಗಾರು ಅಪ್ಪಣೆಯನಿತ್ತವರು?
ಚಂದ್ರಹಾಸನ ನೀನು ಮದುವೆಯಾಗುವುದೆನಗೆ
ಸರಿಯಿಲ್ಲ.

**ವಿಷಯೆ:** - *(ಪ್ರತಿಹಾಸ್ಯ ಧ್ವನಿಯಿಂದ)* ನೀನೆ ಆಗು, ಬೇಡವೆಂದೆನೆ ನಾನು?
ಬರಿದೆ ಕರುಬಿದರೆ ಫಲವೇನು?

**ಚಂಪಕಮಾಲಿನಿ:** - ಬಿನ್ನಾಣಿ, ಸೊಕ್ಕೆಲ್ಲ ಇಳಿಯುವುದು ನಾಳೆ!

**ಪಂಕಜೆ:** - ಕೇಳಲ್ಲಿ ಮಂಗಳವಾದ್ಯಗಳು!
*[ವಾದ್ಯಗಳು ಭೋರ್ಗರೆಯುತ್ತವೆ]*

**ಚಂಪಕಮಾಲಿನಿ:** - ಕೌಮುದಿ ಹೇಗಿರುವುದೀಗ, ಸಖೀ?

**ವಿಷಯೆ:** - ಚಂದ್ರಮನ ವದನಹಾಸವನೆ ಹೋಲುತಿದೆ!

**ಪಂಕಜೆ:** - ಚಂದ್ರಮನ ವದನಹಾಸವನೊ?....
ಚಂದ್ರಹಾಸನ ವದನವನೊ?....
ಮುಗ್ಧೆ ಎಂದವರಾರು ಇವಳ?

ಶೃಂಗಾರದಲ್ಲಿವಳು ವಿದಗ್ಧೆಯರನೂ
ದಗ್ಧಗೈಯುವ ಪ್ರೌಢೆಯಲ್ತೆ?

**ಚಂಪಕಮಾಲಿನಿ:** - *(ವಿಷಯೆಯನ್ನು ಮುದ್ದಾಡುವಂತೆ ಅಭಿನಯಿಸುತ್ತಾ)*
ಅಯ್ಯೊ ಬಿಂಕದ ಹೆಣ್ಣೆ; ಕಬ್ಬುವಿಲ್ಲನ ಕಣ್ಣೆ!

*[ಎಲ್ಲರೂ ಗಹಗಹಿಸಿ ನಗುತ್ತಿರುತ್ತಾರೆ.]*

*ಪರದೆ ಬೀಳುತ್ತದೆ.*

*

## ಅಂತ್ಯರಂಗಂ-ದೃಶ್ಯ ೫,೬

<u>**ದೃಶ್ಯ೫**</u>

*[ದುಷ್ಟಬುಧ್ಧಿಯ ಮನೆಯ ಒಂದು ಕೋಣೆ. ದುಷ್ಟಬುದ್ಧಿ ಒಂದು ಆಸನದ ಮೇಲೆ ಕುಳಿತಿದ್ದಾನೆ. ಮದನ ಸ್ವಲ್ಪ ದೂರ ದಲ್ಲಿ ತಲೆತಗ್ಗಿಸಿ ನಿಂತಿದ್ದಾನೆ. ಮಂತ್ರಿ ಕೋಪೋಗ್ರನಾಗಿದ್ದಾನೆ.]*

**ದುಷ್ಟಬುದ್ಧಿ:** - ಮೂರ್ಖ! ಮರುಳ! ನೀಚ! ಕುಲಗೇಡಿ!
ನಾನು ಬರೆದಿಹುದೇನು? ನೀನು ಮಾಡಿಹುದೇನು?
ತಿರುಪೆ ಬೇಡಿನ್ನು, ನಡೆ! ನಾನಿಲ್ಲದಂದು
ನನ್ನ ಮಗಳಿಗೆ ಮದುವೆ ಮಾಡಿದೆಯ, ಮೂರ್ಖ!
ನಿನ್ನ ದೊರೆತನಕಾಗಿ ಜೀವವನೆ ಸಮೆಸಿದೆನು.
ನಿನಗಾಗಿ ನೆತ್ತರಿನ ಕಡಲಲ್ಲಿ ಮುಳುಗಿದೆನು.....
ನಿನಗೇಕೆ ಸಾಮ್ರಾಜ್ಯ? ನಿನಗೇಕೆ ಅರಸುತನ?
ಹುಟ್ಟುತಿರುಕನಿಗೆ? ಬೀದಿಯನಲೆದು ತಿರಿ ಇನ್ನು!
ಹಾ ವಿಧಿಯೆ! *(ಮುಖ ಮುಚ್ಚಿಕೊಳ್ಳುತ್ತಾನೆ.)*

**ಮದನ:** - *(ಶೋಕಧ್ವನಿಯಿಂದ)* ಅಪ್ಪಯ್ಯ ನಾನೆಸಗಿದಪರಾಧವೇನು?

**ದುಷ್ಟಬುದ್ಧಿ:** - ನಿನಗಿನ್ನು ವನವಾಸವೇ ಗತಿ.

**ಮದನ:** - ಖತಿಯೇಕೆ, ಜೀಯ, ನಿಮ್ಮಡಿಗಳ ನಿರೂಪಮಂ
ಪ್ರತಿಪಾಲಿಸಿಹೆನು. ನಿಮ್ಮ ಆಣತಿಯಂತೆ
ವಿಷಯೆಗೆ ವಿವಾಹಮಂ ವಿರಚಿಸಿದೆ! ತಪ್ಪೇನು?

**ದುಷ್ಟಬುದ್ಧಿ:** - ನಿನಗಕ್ಕರದ ಗುರುತಿಹುದೆ, ಹೇಳು? ನಿನಗೆ
ಬಿಜ್ಜೆಗಲಿಸಿದ ಬೊಜ್ಜುಹಾರುವ, ಆ ಗಾಲವ,
ಹಾಳಾಗಿಹೋಗಲಿ! ಎಲ್ಲಿ? ಕೊಡು ಪತ್ರಿಕೆಯ,
ನೋಡುವೆನು. *(ಮದನ ಹೋಗುತ್ತಾನೆ)*

ಆದುದಾಯಿತು. ಇನ್ನು ಜಾಮಾತನಂ
ಕೊಂದು ಹೊರತೆನಗೆ ಸುಖ ಶಾಂತಿ ಸಂಪತ್ತು
ಆವುದೂ ಇಲ್ಲ. ವಿಷಯೆಯ ಓಲೆಭಾಗ್ಯ
ಸುಟ್ಟುರಿದರೇನಂತೆ! ನಿರ್ಭಾಗ್ಯೆ ಹಾಳಾಗಲಿ!
ಊರ ಹೊರ ಬನದೊಳಿಹ ಚಂಡಿಕಾಲಯಕೆ
ಚಂದ್ರಹಾಸನಂ ಕಳುಹಿ ಕಟುಕರಿಂ ಕೊಲ್ಲಿಪೆನ್.
*[ನವವಧು ವಿಷಯೆ ಹೆದರಿ ಹೆದರಿ ನಾಚುತ್ತ ಮೆಲ್ಲಮೆಲ್ಲನೆ ಬರುತ್ತಾಳೆ. ದುಷ್ಟಬುದ್ಧಿಗೆ ಮಗಳನ್ನು ನೋಡಿದೊಡನೆ ಅಭ್ಯಾಸಬಲದಿಂದೆಂಬಂತೆ ಸಂತೋಷದ ಮಂದಸ್ಮಿತ ಮುದ್ರೆಯೊಂದು ಸುಳಿದು, ಒಡನೆಯೆ ಮಾಯವಾಗಿ, ಬದ್ಧಭ್ರಕುಟಿಯ ವದನವಿಕಾರತೆಯುಂಟಾಗುತ್ತದೆ. ಅದನ್ನು ಗಮನಿಸಿದ ಮಗಳು ತತ್ತರಿಸಿ ಕೃತಕವಾದ ನಗೆಮೊಗದಿಂದ ಮಾತನಾಡಿಸುತ್ತಾಳೆ.]*

**ವಿಷಯೆ:** - ಅಪ್ಪಯ್ಯ, ವಂದಿಸುವೆ. *(ಎಂದು ತಂದೆಯ ಚರಣಗಳಿಗೆ ಎರಗುತ್ತಾಳೆ.)*

**ದುಷ್ಟಬುದ್ಧಿ:** - *(ತಟಕ್ಕನೆ ಮೇಲೆದ್ದು ಉಗ್ರವಾಗಿ)*
ಮುಟ್ಟದಿರು! ಮುಟ್ಟದಿರು!
ನೀನೆಂದು ವಿಷಯೆಯಲ್ಲ, ವಿಷಕನ್ಯೆ!
ನೋಡಲಾರೆನೀ ನಿನ್ನ ನಾಟಕದ ವೇಷಮಂ.
ಹೊರಡಾಚೆ, ನನ್ನೆದುರು ನಿಲ್ಲದಿರು...

**ವಿಷಯೆ:** - *(ಅಳುತ್ತಾ)* ಅಪ್ಪಯ್ಯ, ತಪ್ಪ ಮನ್ನಿಸು. ಏನು ತಪ್ಪಿದ್ದರೂ ನನ್ನದದು.
ಅಣ್ಣಯ್ಯನದಕೆ ಹೊಣೆಯಲ್ಲ.
ಪಾದಗಳಿಗೆರಗಿ ಬೇಡಿಕೊಳ್ಳುವೆ, ತಂದೆ!
*[ಎಂದು ಮತ್ತೊಮ್ಮೆ ಅಡ್ಡಬೀಳಲು ಹವಣಿಸುತ್ತಾಳೆ. ದುಷ್ಟಬುದ್ಧಿ ಮತ್ತೆ ಹಿಂಜರಿದು ನಿಷ್ಠುರನಾಗಿ.]*

**ದುಷ್ಟಬುದ್ಧಿ:** - ತೊಲಗು, ತೊತ್ತಿನ ಮಗಳೆ! ತೊಲಗಾಚೆ! ನನ್ನ
ಕಣ್ಮುಂದೆ ನಿಲ್ಲದಿರು. ಮಿರ್ತುವಡಗಿದೆ ನಿನ್ನ
ನಗೆದಿಂಗಳಾಟವನು ನಟಿಸುವೀ ಮೊಗದಲ್ಲಿ...
ಮುಡಿದಲರ್ಗಂಪಲ್ಲ, ಹೆಣಗಂಪು ಸೂಸುತಿದೆ
ನಿನ್ನ ಮೆಯ್ಯಿಂ. ತೊಲಗು, ನಿರ್ಭಾಗ್ಯೆ, ನಿಲ್ಲದಿರ್
ನನ್ನಿದಿರ್. ನೀನು ಹೆಣ್ಣಲ್ಲ, ಹೆಣ್ಣಿನ ವೇಷವನು
ಹೊತ್ತ ಸುಡುಗಾಡು. ತೊಲಗಾಚೆ! ನಿಲ್ಲದಿರ್!...
*[ಆರ್ಭಟಿಸುತ್ತಾನೆ. ವಿಷಯೆ ಮರವಟ್ಟಳಂತೆ ಹೆದರಿ ಮುದುರಿ ಕುಗ್ಗಿ ಹೊರಡುತ್ತಾಳೆ. ದುಷ್ಟಬುದ್ಧಿ ಮತ್ತೆ ಮೊದಲಿನ ಆಸನಕ್ಕೆ ಹೋಗಿ ಕುಳಿತು ಕೈಯಿಂದ ಮುಖ ಮುಚ್ಚಿಕೊಂಡು ಸಂಕಟಪಡುತ್ತಾನೆ.]*

**ಮದನ:** - *(ಪ್ರವೇಶಿಸಿ, ಕಟ್ಟುಗ್ರಭಾವದಿಂದ ನಿಲ್ಲುತ್ತಾನೆ. ತಂದೆ ತಲೆಯೆತ್ತದಿರಲು ಸ್ವಲ್ಪ ಹೊತ್ತು ಕಾದು)*
ಅಪ್ಪಯ್ಯ, ಏತಕೀ ವ್ಯರ್ಥ ಉಗ್ರತೆ, ಮಗಳಮೇಲೆ?
ತಪ್ಪು ಏನಿದ್ದರೂ ಮದುವೆ ಮಾಡಿದ ನನ್ನದಲ್ತೆ?
ಏನಾದರೂ ನಿಮ್ಮ ಆಣತಿಯ ಮೀರಿದೆನೆ?
ಇದೊ ಕೊಳ್ಳಿ, ಇಲ್ಲಿರುವುದಾ ಪತ್ರಿಕೆ.
*[ಮಂತ್ರಿ ಮೆಲ್ಲಗೆ ತಲೆಯೆತ್ತುತ್ತಾನೆ. ಕಣ್ಣುಗಳಿಂದ ನೀರು ಸುರಿದ ಗುರುತು ಮುಖದ ಮೇಲೆ ತೋರುತ್ತದೆ. ಮುಖಭಂಗಿ ಅತೀವ ದೈನ್ಯವಾಗಿದೆ. ಸೆರಗಿನಿಂದ ಮುಖವೊರಸಿಕೊಂಡು ಕೈ ನೀಡುತ್ತಾನೆ. ಮದನನು ಕೊಟ್ಟ ಪತ್ರಿಕೆಯನ್ನು ಸಾವಧಾನವಾಗಿ ಓದುತ್ತಾನೆ. ಸಂಕಟ ಕ್ರೋಧ ಆಶ್ಚರ್ಯಾದಿಭಾವಗಳ ಸುಳಿದಾಟದಿಂದ ವದನ ತೆರೆತೆರೆಯಾಗುತ್ತದೆ. ಕೊನೆಗೆ ನಿಡಿದಾಗಿ ಸುಯ್ದು ಕನಿಕರಕ್ಕೆ ಅರ್ಹವಾಗಬಹುದಾದ ದೀನಭಾವದಿಂದ ನುಡಿಯುತ್ತಾನೆ.]*

**ದುಷ್ಟಬುದ್ಧಿ:** - ಮದನ, ನಿನ್ನ ತಪ್ಪಿದರೊಳಿನಿತಿಲ್ಲ.
ಮರುಗದಿರು ಬೈದೆನೆಂದು.

**ಮದನ:** - ತಂದೆ ಬೈದರೆ ಕೋಪವೇಕೆ?.... ಜೀಯ,
ನನ್ನನೀಗಳೆ ಕರೆತರುವುದೆಂದು ದೂತರನ್
ಕಳುಹಿಹನು ಕುಂತಳೇಂದ್ರನ್. ತೆರಳಲೇ?

**ದುಷ್ಟಬುದ್ಧಿ:** - ತೆರಳು. ನಾನೊರೆದ ರಾಜಕಾರಣ ಗೋಪ್ಯಮಂ
ಮರೆಯದೆಯೆ ಕೈ ಗೂಡಿಸು.... ಮತ್ತೆ...
*(ಹೊರಡಲಿರುವ ಮದನ ನಿಲ್ಲುತ್ತಾನೆ. ದುಷ್ಟಬುದ್ಧಿ ಏನನ್ನೊ ಚಿಂತಿಸಿ)*
ಕಳುಹಿಸಿಲ್ಲಿಗೆ ಚಂದ್ರಹಾಸನಂ ಬೇಗದಿಂ.

**ಮದನ:** - ಅಪ್ಪಣೆ.*(ಮದನ ಹೋಗುತ್ತಾನೆ.)*

**ದುಷ್ಟಬುದ್ಧಿ:** - ನನ್ನ ಕೋಪವನವಗೆ ಕಾಣಿಸದೆ ಮುಚ್ಚಿಡುವೆ...
ನನ್ನನೇಪರಿ ಮೂದಲಿಸುತಿಹೆ? ಎಲೈ ದುರ್ವಿಧಿಯೆ,
ನಿನ್ನ ವ್ಯೂಹಕೆ ಪ್ರತಿವ್ಯೂಹಮಂ ಒಡ್ಡದಿರೆ
ನಷ್ಟಬುದ್ಧಿಯೆ ನಾ ದಿಟಂ, ದುಷ್ಟಬುದ್ಧಿಯಲ್ತು!
ನನ್ನಾತ್ಮಜೆಯ ಕಣ್ಣನೀರಿನಲಿ ನನ್ನ ಈ
ಪುರುಷಾರ್ಥವನ್ನಿಟ್ಟೆಯಾ?....

ಆ ಕುಳಿಂದನಿಗೆ
ಸೊಕ್ಕಿದವನಿಗೆ ತಕ್ಕುದನೆ ಮಾಡಿ ಬಂದಿಹೆನ್.
ಗುಪ್ತಸೈನ್ಯಾಚರಣೆಯಿಂ ಚಂದನಾವತಿಯಂ
ಅಂಡಲೆದೆನಾ ಕುಳಿಂದನಂ ದಂಡಿಸಿದೆನ್.
ಹಿಂಡಿ ಹಿಳಿದರ್ಥಮಂ, ಸೆರೆಗೆ ನೂಂಕಿದೆನವನ
ಕಾಲ್ಗೆ ನಿಗಳಮಂ ಪೂಡಿ.... ಈ ನಂಟು
ಆ ಸಫಲಪ್ರಯತ್ನಮಂ ವ್ಯರ್ಥಗೈಯಲ್ಕೇಂ
ಬಿಟ್ಟಪೆನೆ? ಏನಾ ಕುಳಿಂದಕನ ಸೊರ್ಕು!
ರಾಜ್ಯಮಂ ಕೊಟ್ಟೊಡೆ, ನನ್ನಂ ಮರೆದು,
ನನಗೆ ತಿಳುಹದೆಯೆ ತನಗೊರ್ವ ಮಗನಂ
ಮಾಡಿಕೊಂಡು.... ದತ್ತುಮಗನಂ ಕೊಂಬುದೇನ್
ಮಕ್ಕಳಾಟಿಗೆಯಾಯ್ತೆ?.... *(ದೂರ ನೋಡುತ್ತಾನೆ)*
ಅವನೆ? ಹೌದವನೆ!
*[ಮದುಮಗನ ವಸನ ಭೂಷಣಗಳಿಂದಲಂಕೃತನಾಗಿ ಚಂದ್ರಹಾಸನು ಪ್ರವೇಶಿಸುತ್ತಾನೆ.]*

**ಚಂದ್ರಹಾಸ:** - ಪೂಜ್ಯರಿಗೆ ವಂದಿಪೆನು.*(ಅಡಿಗೆರಗುತ್ತಾನೆ.)*

**ದುಷ್ಟಬುದ್ಧಿ:** - ವೀರವರ, ಬಾರೈ, ಚಂದ್ರಹಾಸ!
ನೀನಿನ್ನೆಗಂ ದೂರದವನಾಗಿರ್ದಯ್;
ಇನ್ನೆಮಗೆ ಅಳಿಯನಾಗಿರುವೆ.
ಕುಳಿತುಕೊ. *(ಚಂದ್ರಹಾಸನು ಕುಳಿತುಕೊಳ್ಳುತ್ತಾನೆ.)*

**ಚಂದ್ರಹಾಸ:** - ದೂರದಿಂ ಬಂದ ದಣಿವಿಂ ತಮಗಾಯಸಂ
ತಿಣ್ಣಮಾಯ್ತೆಂಬಂತೆ ತೋರುತಿದೆ. ಪೂಜ್ಯರಿಗೆ
ವಂದನಂಗೈಯ್ಯಲೈತಂದೆ. ತಾವಿನ್ನು

ಒಂದಿನಿತು ವಿಶ್ರಮಿಸಿಕೊಳ್ಳಿ. ನಾನ್ ಬಂದಪೆನ್.
*[ಅರ್ಧ ಏಳಲೆಸುತಿದ್ದ ಅವನನ್ನು ಸನ್ನೆಯಿಂದ ಕುಳ್ಳಿರಿಸಿ]*

**ದುಷ್ಟಬುದ್ಧಿ:** - ಅಂತಪ್ಪ ದಣಿವೇನಿಲ್ಲ! ದಣಿವೆಂದೇನ್
ರಾಜ್ಯಾಕಾರ್ಯದಿ ಮುಳುಗಿದಾತಂಗೆ?....ಓಹೊ,
ಮರೆತಿದ್ದೆ ನಾನೊಂದನೆಮ್ಮಯ ಕುಲಾಚಾರಮಂ.
ವಂಶದಾಚಾರಮದು ವರನಾದವಂಗೆ.
ಊರ ಹೊರ ಬನದೊಳಿಹ ಚಂಡಿಕಾಲಯಕೆ ನೀಂ
ನೀರಜಸಖಾಸ್ತ ಸಮಯದೊಳೊರ್ವನೆಯೆ ಪೋಗಿ
ಗೌರಿಯಂ ಪೂಜಿಪುದು, ಸರ್ವಮಂಗಳೆಯಂ.

**ಚಂದ್ರಹಾಸ:** - ತಪ್ಪದೆಯೆ ಹೋಗುವೆನು ಜಗದಂಬೆಯೆಡೆಗೆ.

**ದುಷ್ಟಬುದ್ಧಿ:** - ಒರ್ವನೆಯೆ ಪೋಗವೇಳ್ಕುಂ; ಕುಲಾಚಾರಕ್ಕೆ
ಭಂಗಮಪ್ಪುದು, ತಪ್ಪಿದರೆ; ಮುನಿಯುವಳ್ ಚಂಡಿ;
ಕೇಡಹುದು ನಾಡಿಂಗೆ.

**ಚಂದ್ರಹಾಸ:** - ಸಂಪ್ರದಾಯಕ್ಕಿನಿತು
ಭಂಗ ಬರದಂತೆ ನಡೆಯುವುದೆನ್ನ ಕರ್ತವ್ಯ.

**ದುಷ್ಟಬುದ್ಧಿ:** - *(ಹುಸಿನಗುವೆರಸಿ)*
ನಿಮ್ಮ ರಾಜ್ಯವ ನೋಡಿ ನನಗೆ ಸಂತಸವಾಯ್ತು.
ನಿನ್ನ ತಂದೆಯ ಕೂಡೆ ನಾಡನೆಲ್ಲವ ಸುತ್ತಿ
ಬಂದಿಹೆನು.

**ಚಂದ್ರಹಾಸ:** - ಶ್ರೀ ಹರಿಯ ಕೃಪೆ! ಮೇಣ್ ನಿಮ್ಮ ದಯೆ!

**ದುಷ್ಟಬುದ್ಧಿ:** - *(ನಗುತ್ತಾ ಎದ್ದು, ತನ್ನೊಡನೆಯೆ ಎದ್ದು ನಿಂತ ಚಂದ್ರಹಾಸನ ಭುಜವನು ಚಪ್ಪರಿಸಿ.)*
ಮೇಣ್ ನಿನ್ನೊಂದು ಪರಾಕ್ರಮಂ!...
ನೀನಿನ್ನು ತೆರಳು. ಚಂಡಿಕಾರಾಧನೆಗೆ
ಬೇಕಾದುದೆಲ್ಲವನು ಸಿದ್ಧಪಡಿಸುವ ಮುನ್ನ
ಇನ್ನುಳಿದ ಕಟ್ಟಳೆಗಳೆಲ್ಲವನು ಮುಗಿಸು, ನಡೆ.
*(ಚಂದ್ರಹಾಸನು ನಮಸ್ಕರಿಸಿ ಬೀಳ್ಕೊಳ್ಳುತ್ತಾನೆ. ದುಷ್ಟಬುದ್ಧಿಯ ಮುಖ ಮತ್ತೆ ಕರ್ಕಶವಾಗುತ್ತದೆ.*
ಕಿಂಕರಾ! *[ಕರೆಯುತ್ತಾನೆ]*

**ಸೇವಕ:** - *(ಪ್ರವೇಶಿಸಿ)* ಜೀಯ!

*[ದುಷ್ಟಬುದ್ಧಿ ಸೇವಕನ ಕಿವಿಯಲ್ಲಿ ಏನನ್ನೊ ಹೇಳುತ್ತಿರುತ್ತಾನೆ.]*

*ಪರದೆ ಬೀಳುತ್ತದೆ.*

*

<u>**ದೃಶ್ಯ೬**</u>

*[ಕಾಳಿಕಾಲಯಕ್ಕೆ ಹೋಗುವ ದಾರಿ. ಸಾಯಂ ಸಮಯ. ಚಂದ್ರಹಾಸ, ರಣಸಿಂಹ, ವೀರಸೇನ ಬರುತ್ತಾರೆ. ಚಂದ್ರ ಹಾಸನ ಕೈಲಿ ಪೂಜೆಯ ಸಾಮಗ್ರಿಯಿರುವ ಹರಿವಾಣವಿರುತ್ತದೆ.]*

**ಚಂದ್ರಹಾಸ:** - ನೀವು ಇಲ್ಲಿಯೆ ನಿಲ್ಲಿ. ನಾನೊರ್ವನೆಯೆ ನಡೆದು
ಪೂಜೆಯಂ ಪೂರೈಸಿ ಬರುವೆ.

**ರಣಸಿಂಹ:** - ನಾವೂ ಬರುತ್ತೇವೆ ನಿನ್ನೊಡನೆ.

**ಚಂದ್ರಹಾಸ:** - ಬೇಡ, ಪದ್ಧತಿಯ ಮೀರುವುದು ತರವಲ್ಲ.
ಮಾವನಿಗೆ ತಿಳಿಯೆ ಕೋಪಗೊಳ್ಳದೆ ಇರನು.

**ವೀರಸೇನ:** - ಮಂತ್ರಿ ಏತಕೆ ಇಂತು ವರ್ತಿಪನೊ ನಾನರಿಯೆ!
ವಿಷಯೆ ಮದನರ ಬೈದು, ತನ್ನ ಸತಿಯಂ
ತಾರಕಾಕ್ಷಿಯಂ ಬಡಿದು , ಸೇವಕರ ನಿಂದಿಸಿ,
ಮದುವೆಗೈತಂದ ಕಮಲಮುಖಿಯರ ದೂರಿ,
ಸಿಟ್ಟಿನಿಂದುರಿದನಂತೆ!

**ಚಂದ್ರಹಾಸ:** - ರಾಜ್ಯಕಾರ್ಯದೊಳೇನು ಕೋಪವುಂಟಾಗಿಹುದೊ?

**ರಣಸಿಂಹ:** - ಅವನೊಳೆನಗೇಕೊ ಸಂದೇಹ.
ಹುಚ್ಚನಂತಾಡುವನು!

**ವೀರಸೇನ:** - ನೋಡಲ್ಲಿ, ಮದನ ಬರುತಿಹನು.
ನುಡಿಯ ಬೇಡಂತು *(ಪಡಿಹಾರಿ ಮತ್ತು ಕಿಂಕರರೊಡನೆ ಮದನನ ಪ್ರವೇಶ)*

**ಮದನ:** - ಚಂದ್ರಹಾಸಾಪ್ರಭುಗೆ ಜಯವಾಗಲಿ!

**ಚಂದ್ರಹಾಸ:** - ಏನಿದೀ ಪರಿಹಾಸ್ಯ, ಮದನ?
ನಿನಗೆ ನಾನೆಂದು ಪ್ರಭುವಾದೆ?

**ಮದನ:** - ಪರಿಹಾಸ್ಯವಿನಿತಿಲ್ಲ: ಇಂದೆ ಆಗಲಿಹೆ!
ಆಗಳೆಯೆ ಆಗಿರುವೆ ಎಂದರೂ ಸುಳ್ಳಾಗದು!
ನೀವೀಗ ಹೊರಟಿರುವುದೆಲ್ಲಿಗೆ?

**ಚಂದ್ರಹಾಸ:** - ಪೂಜೆಗೆ, ಚಂಡಿಕಾಲಯಕೆ.

**ರಣಸಿಂಹ:** - ಮದನ, ನೀನೀಗ ಎಲ್ಲಿಂದ ಬರುತಲಿಹೆ?

**ಮದನ:** - ತಂದೆಯ ನಿರೂಪಮಂ ಪೊತ್ತು
ಕುಂತಳೇಂದ್ರನ ಬಳಿಗೆ ತೆರಳಿದ್ದೆ.
ಚಂದ್ರಹಾಸನಂ ಈಗಳೆಯೆ ನಾನೊಡಗೊಂಡು ಬರ್ಪುದು
ಎಂದಾಜ್ಞೆ ಇತ್ತೆನ್ನಂ ಕಳುಹಿದನು ಕುಂತಳೇಂದ್ರಂ.

**ರಣಸಿಂಹ:** - ಏನ್ ಅನಿತೊಂದು ಅವಸರಂ?
ನಿಜ ಶರೀರಚ್ಛಾಯೆ ತಲೆಯಿಲ್ಲದಿರೆ ಕಂಡು
ಗಾಲವ ಪುರೋಹಿತಂಗರಿಪಲ್ ಆತನ್
ಅದು ಮೃತಿಗೆ ಕಾರಣಂ ಎನಲ್ಕೆ,
ಕುಂತಳೇಂದ್ರಂ ತನ್ನೊರ್ವಳೆಯೆ ಸುತೆಯಂ
ಚಂದ್ರಹಾಸಂಗೆ ಗಾಂಧರ್ವವೈವಾಹ ವಿಧಿಯಿಂ
ಕೊಟ್ಟು, ರಾಜ್ಯಬಾರವನವನ ಕೈಲಿಟ್ಟು,
ಶ್ರೀಹರಿಯ ಜಾನಿಸಲು ಬನಕೆ ಹೊರಡುವನಂತೆ.
*(ಚಂದ್ರಹಾಸನಿಗೆ)*
ನೀನೀಗಳೆಯೆ, ಒಂದಿನಿತು ತಳುವದೆಯೆ,
ಹೋಗವೇಳ್ಕರಮನೆಗೆ.

**ಚಂದ್ರಹಾಸ:** - ನಿನ್ನ ಪಿತೃವಾಜ್ಞೆಯಂ ನಡಸುವ ಕುಲವ್ರತದ
ಚಂಡಿಕಾರಾಧನೆಯ ಮಾಡುವವರಾರು?

**ಮದನ:** - ವಂಶದಾಚಾರವದು ನಾನು ಮಾಡಿದರಾಯ್ತು.
ನೀನೀಗ ರಣಸಿಂಹ ವೀರಸೇನರ ಕೂಡಿ
ರಾಜನಲ್ಲಿಗೆ ತೆರಳು. ನಿನಗಾಗಿ ಕಾದಿಹನು!
ಪೂಜೆಯ ಸುವಸ್ತುಗಳನಿಲ್ಲಿ ತಾ.
ದಾರಿ ತೋರುವನಿವನು ಈ ಪಡಿಹಾರಿ.
*[ಚಂದ್ರಹಾಸನು ಹರಿವಾಣವನ್ನು ಕೊಡುತ್ತಿರುವಾಗ ಮದನನ ಕೈಯಿಂದ ಅದು ಬಳುಕಿ ಪೂಜಾಸಾಮಗ್ರಿಯಲ್ಲಿ ಕೆಲವು ಕೆಳಗೆ ಬೀಳುತ್ತವೆ. ಪಡಿಹಾರಿ ಅದನಾಯ್ದು ಹಾಕುತ್ತಾನೆ]*

**ಚಂದ್ರಹಾಸ:** - ಏನಿದಪಶಕುನ? ನಾನೆ ಪೂಜೆಯ ತೀರ್ಚಿ
ಆಮೇಲೆ ಹೋಗುವೆನು ದೊರೆಯೆಡೆಗೆ.

**ಮದನ:** -*(ನಗುಮೊಗನಾಗಿ)*
ಏನಿದು? ಕೈತೊಡರಿ ಬಿದ್ದುದಕೆ ಶಕುನವೇಂದೇಕೆ
ಅಂಜುತಿಹೆ, ವೀರನಾಗಿಹ ನೀನು?
ನಡೆ, ಚಂದ್ರಹಾಸ; ನೀನು ಭಗವದ್ ಭಕ್ತ!
ನಿನಗೆ ಕೇಡುಂಟೆ? ನಿನಗೊಳ್ಳಿತಕ್ಕೆ!
*[ವೀರಸೇನ ರಣಸಿಂಹರೊಡನೆ, ಪಡಿಹಾರಿ ದಾರಿತೋರುತ್ತಿರಲು, ಚಂದ್ರಹಾಸನು ಹೊರಡುತ್ತಾನೆ.]*

**ಮದನ:** - ನಾನೊಬ್ಬನೆಯೆ ಹೋಗಬೇಕಾ ಚಂಡಿಕಾಲಯಕೆ.
ನೀವೆನ್ನೊಡನೆ ಬರೆ, ಚಂದ್ರಹಾಸಂಗೆ
ಕುಲವ್ರತದ ನನ್ನಿ ಭಂಗವಾಗುವುದು.
ಬೇಗದಿ ಬಂದಪೆನು ಪೂಜೆಯಂ ಪೂರೈಸಿ.
ನೀವೆನ್ನ ಅಯ್ಯನೆಡೆಯಂ ಸಾರ್ದು ತಳ್ವದೆಯೆ
ನಡೆದ ರಾಜಕಾರ್ಯವನೆಲ್ಲಮಂ ಪೇಳ್ವುದು,
ನಿಮಗಾಗಳೆಯೆ ನಾಂ ಪೇಳ್ದವೋಲೆ.
*(ಕಿಂಕರರು ಕೈಮುಗಿದು ಹೊರಡುತ್ತಾರೆ)*
ಸೂರ್ಯನಾಗಲೆ ಮುಳುಗಿದನು. ಮುಸುಗುತಿದೆ
ಕತ್ತಲೆಯ ಮುಂಗಪ್ಪು. ಹಕ್ಕಿ ಹಾರುತಿವೆ
ಹಿಂಡಾಗಿ ಗೂಡಿಂಗೆ. ಇತ್ತ ನಭದಲಿ ಚುಕ್ಕಿ
ಮೂಡುತಿದೆ.... ಅತ್ತಾ ದಿಗಂತದಿಂದೇಳುತಿಹ
ಕಾರ್ಮೊಡಗಳ್ ಮಿಂಚುತಿವೆ....ಹಾ ಗುಡುಗೂ
ಕೇಳುತಿದೆ!.... ದೂರದೊಳ್ ಆ ಚಂಡಿಕಾಲಯದ
ಪೊಂಗಳಸವೆಂತು, ಕಿಕ್ಕಿರಿದ ಮರದಳಿರ

ಕರ್ಣತ್ತಿಯಂ ಮೀರಿ, ಮೇಲೆದ್ದು ಮಿನುಗುತಿದೆ,
ಬೈಗುಗೆಂಪಿನ ಛಾಯೆಯಲಿ, ನೆತ್ತರ್ ಸೋರ್ವ
ರುದ್ರಕಾಳಿಯ ಜೋಲ್ವ ಕೆನ್ನಾಲಗೆಯವೋಲ್!

*[ಹೊರಡುತ್ತಾನೆ]*

*ಪರದೆ ಬೀಳುತ್ತದೆ.*

*

## ಆದಿರಂಗಂ-ದೃಶ್ಯ ೫,೬,೭

**ದೃಶ್ಯ೫**

*[ಕುಂತಳನಗರಕ್ಕೆ ಅತಿದೂರದ ಗೊಂಡಾರಣ್ಯ. ಕಗ್ಗತ್ತಲು. ಚಂದ್ರಹಾಸ ನೆಲದ ಮೇಲೆ ಬಿದ್ದಿದ್ದಾನೆ. ಪಕ್ಕದಲ್ಲಿ ಮೂವರು ಚಂಡಾಲರು ನಿಂತಿದ್ದಾರೆ. ಒಬ್ಬನ ಕೈಲಿ ದೀವಿಗೆ, ಇನ್ನಿಬ್ಬರ ಕೈಲಿ ಕತ್ತಿ ಇವೆ.]*

**ಕಾಳ:** - ನೀನು ನೋಡಿದೆಯೇನು, ಭೀಷಣ?

**ಭೀಷಣ:** - ಇಲ್ಲ, ನಾ ನೋಡಿಲಿಲ್ಲ.

**ಕಾಳ:** - *(ಮಾರನಿಗೆ)* ನೀನು?

**ಮಾರ:** - ಏನೊ ಕಂಡ ಹಾಗಾಯ್ತು.

**ಕಾಳ:** - ನಾನು ದೀವಿಗೆ ಹಿಡಿದು ಮುಂದೆ ಬರುತಿದ್ದೆ.
ದೂರದಲಿ ದೀವಿಗೆಯ ಬೆಳಕಿನಲಿ,
ಒಂದು ಭಯಂಕರಾಕಾರ
ನಮ್ಮ ಮುಂದೆಯೆ ನಡೆದುಹೋದಂತೆ ಕಾಣಿಸಿತು.
ನಿಮಗೆ ತೋರಿಸಬೇಕು ಎನುವಷ್ಟರಲ್ಲಿ
ಮಾಯವಾಗುತಿತ್ತು;.... ಮತ್ತೆ ತೋರುತಿತ್ತು.

**ಮಾರ:** - ಎಂತಪ್ಪ ಆಕಾರ?

**ಕಾಳ:** - ಹೆಂಗಸಿನ ಆಕಾರ! ಮುಡಿ ಕೆದರಿಕೊಂಡಿತ್ತು.

**ಭೀಷಣ:** - ನಾ ಹಿಂದೆ ಬರುತಿದ್ದೆನಷ್ಟೆ?
ಈಗೊಮ್ಮೆ ಆಗೊಮ್ಮೆ ಏನೊ ಒಂದು
ಹಿಂದಿನಿಂದೆಳೆದ ಹಾಂಗಾಗುತಿತ್ತು!
ತಿರುಗಿ ನೋಡಿದಾಗ ಏನೂ ಕಾಣಿಸುತ್ತಿರಲಿಲ್ಲ!
ನನಗೆಂದೂ ಹೀಂಗಾಗಿರಲಿಲ್ಲ.
ನಿಮಗೇ ಗೊತ್ತು, ನಾನೇನು ದೆವ್ವಗಿವ್ವಕ್ಕೆ
ಹೆದರುವಂಥವನಲ್ಲ.... ಹೋಗಲಿ,
ಇನ್ನೆಮ್ಮ ಕೆಲಸ ಪೂರೈಸಲಿ.

**ಚಂದ್ರಹಾಸ:** - *(ಅರೆನಿದ್ದೆಯಲ್ಲಿ)* ಅಜ್ಜೀ! ಅಜ್ಜೀ! *(ನರಳುತ್ತಾನೆ.)*

**ಮಾರ:** - *(ತನ್ನೊಳಗೆ)* ನನ್ನ ಮಗನ ದನಿಯಂತೆ ಕೇಳಿ ಏಕೊ ಮನಸ್ಸು ಮರುಗುತ್ತದೆ.

**ಕಾಳ:** - *(ಮಾರನಿಗೆ)* ನನಗೇಕೊ ಎದೆ ಕಿವುಚಿದಂತಾಗುತ್ತಿದೆ. ಹಿಂದೆಂದೂ ನನಗೆ ಹೀಂಗಾಗಿರಲಿಲ್ಲ.

**ಭೀಷಣ:** - ಏ ಮಾರ, ಎಚ್ಚರಾಗುವ ಮೊದಲೆ ಕೊಚ್ಚಿಬಿಡು.
ಪಾಪ, ಹಸುಳೆ ಹೆದರಿದರೆ... ನಮಗೆ... ಆಹಾ!
ಎದ್ದು ಕುಳಿತೆಬಿಟ್ಟನಲ್ಲಾ!

**ಚಂದ್ರಹಾಸ:** - *(ಕುಳಿತು, ಕಣ್ಣುಜ್ಜಿಕೊಂಡು, ಸುತ್ತಲೂ ನೋಡಿ, ಕಂಡು, ಹೆದರುಗಣ್ಣಾಗಿ)*
ಅಜ್ಜೀ, ಅಜ್ಜೀ!
ನೀ ಹೇಳಿಕೊಂಟ್ಟಂತೆ ಶ್ರೀಹರಿಯ ನೆನೆಯುವೆನು,
ಬಾರಜ್ಜಿ! ಬಿಟ್ಟುಹೋಗದಿರೆನ್ನ.
ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!
ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!

**ಮಾರ:** - *(ಇದ್ದಕ್ಕಿದ್ದಂತೆ ನೆಗೆದುಬಿದ್ದು)*
ಯಾರೊ ಹೊಡೆದವರು ನನ್ನ ಬೆನ್ನಿಗೆ?

**ಭೀಷಣ:** - ನಿನಗೇನು ಮರುಳೊ? ಹದರಿ ಸಾಯುವೆಯಲ್ಲ!

**ಮಾರ:** - ನಿಜವಾಗಿಯೂ ಯಾರೊ ಹೊಡೆದ ಹಾಂಗಾಯ್ತು.

**ಭೀಷಣ:** - ಈಗಲ್ಲ; ಇವನ ಕೊಲ್ಲದೆ ಬಿಟ್ಟರೆ ಮುಂದೆ ಹಾಂಗಾಗುವುದು.

**ಮಾರ:** – ನಾನೊಲ್ಲೆ; ನನಗೇಕೊ ತೊಳ್ಳೆ ನಡುಗುತಿದೆ! ಯಾರು ಬೇಕಾದರೂ ಮಾಡಿ.

**ಭೀಷಣ:** – ಇಂದು ನೀನೆ ಮಾಡಬೇಕು, ನನ್ನಾಣೆ!

**ಮಾರ:** – ಕಾಳ ಮಾಡಲಿ.

**ಕಾಳ:** – ನಾನೊಲ್ಲೆ, ನೀನೆ ಮಾಡು.

**ಭೀಷಣ:** – ಇದೇನು ಹುಡುಗಾಟವೆಂದು ತಿಳಿದೆಯಾ? ರಾಜಾಜ್ಞೆ! ನನ್ನಾಜ್ಞೆಯಂತೆ ನೀ
ನಡೆಯದಿರೆ, ಇದೊ, ನಿನಗಿಲ್ಲಿಯೆ ಶಿಕ್ಷೆ.
*(ಎಂದು ತನ್ನ ಕತ್ತಿಯನ್ನು ಮಾರನ ಕೊರಳಿಗೆತ್ತುತ್ತಾನೆ.)*
ಕಡಿ, ಮಾರ! *(ಮಾರ ವಿಧೇಯನಾಗಿ ಕತ್ತಿ ಎತ್ತುತ್ತಾನೆ.)*

**ಚಂದ್ರಹಾಸ:** – ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!
ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!

**ಮಾರ:** – *(ಎತ್ತಿದ ಕತ್ತಿಯನ್ನು ಹಾಗೆಯೆ ಹಿಡಿದುಕೊಂಡು)*
ಏನಿದು? ಕತ್ತಿ ಕೆಳಗಿಳಿಯುವುದೆ ಇಲ್ಲ!
ಯಾರೊ ಹಿಡಿದಂತಿದೆ!

**ಭೀಷಣ:** – ತಡವೇಕೆ? ಹೋಯ್, ಮಾರ, ಹೊಯ್!

**ಮಾರ:** – ನನ್ನಿಂದಾಗದು, ನನ್ನಿಂದಾಗದು *(ಅಳುದನಿಯಿಂದ)*
ಹಾಳುಮಂತ್ರಿಯ ಸೇವೆ ಸಾಕೆಂದಿಗೆ.

**ಭೀಷಣ:** – *(ಹುಬ್ಬುಗಂಟಿಕ್ಕಿ)* ನಿನಗೆ ಕಾದಿದೆ, ಮಾರ, ಶಿಕ್ಷೆ.
*(ಕಾಳನ ಕಡೆಗೆ ತಿರುಗಿ)*
ಕಾಳ, ಕೊಡು ದೀವಿಗೆಯ ಮಾರನ ಕೈಗೆ.
ಹೊಯ್, ಬೇಗ; ಹೆದರದಿರ್.

**ಮಾರ:** – *(ದೀವಿಗೆ ತೆಗೆದುಕೊಳ್ಳುತ್ತಾ)* ನನ್ನ ಮಗನ ನೆನಪಾಗುವುದೆನಗೆ.
*(ಕಾಳ ಕತ್ತರಿಸಲೆಂದು ಕತ್ತಿ ಎತ್ತುತ್ತಾನೆ)*

**ಚಂದ್ರಹಾಸ:** - ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!
ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!

**ಕಾಳ:** - *(ಬೆಚ್ಚಿ)* ಯಾರೊ ಹಿಡಿದಿದ್ದಾರೆ! ಈ ಕೂರಸಿ ಇಳಿಯುವುದೆ ಇಲ್ಲ. ನಾ ಮೊದಲೆ ಹೇಳಲಿಲ್ಲವೆ? ಈ ಮಗುಗೊಲೆಯ ಕೆಲಸ ಬೇಡ ಎಂದು?

**ಭೀಷಣ:** - ಎಲವೊ ಹೇಡಿ,
ಅಂದು ಆ ವರ್ತಕನ ಕೊಂದಂದು ಹೇಸಲಿಲ್ಲ;
ಸೈನ್ಯಾಧಿಕಾರಿಯ ಕೊಂದಂದು ಹೆದರಲಿಲ್ಲ;
ಬೇಹುಗಾರನ ಕಡಿದು ಕೊಂದಂದು ಅಳುಕಲಿಲ್ಲ;
ಈ ಹುಡುಗನಿಗೆ ಹೆದರುವೆಯಾ?

**ಕಾಳ:** - ಇವನು ಅವರಲ್ಲ; ಅದಕ್ಕೇ ಹದರಿಕೆ!

**ಚಂದ್ರಹಾಸ:** - *(ಚಂಡಾಲರ ಪಕ್ಕಕ್ಕೆ ದಿಟ್ಟಿಸಿ ನೋಡುತ್ತಾ, ಹರ್ಷಿತನಾಗಿ, ನಗೆಬೀರಿ, ಯಾರನ್ನೋ ಕಂಡವನಂತೆ)*
ಅಜ್ಜೀ, ಅಜ್ಜೀ, ಅಜ್ಜೀ, ಕಡೆಗೂ ಬಂದೆಯಲ್ಲ!
ಅಜ್ಜೀ, ಅಲ್ಲೇಕೆ ನಿಂತಿರುವೆ ದೂರ?
ಇಲ್ಲಿ ಬಾ ಹತ್ತಿರಕೆ; ನನ್ನನೆತ್ತಿಕೊ, ಅಜ್ಜೀ,
ಇವರು ಅಂಜಿಸುತಿಹರು!

*[ಮೂವರೂ ಆ ದಿಕ್ಕಿಗೆ ಬೆರಗುಬಡಿದು ನೋಡುತ್ತಾರೆ. ಕಾಳ ಮಾರರು ಹೆದರಿ ದೂರ ಸರಿಯುತ್ತಾರೆ. ಭೀಷಣನಿಗೂ ಮೈನವಿರೇಳುತ್ತದೆ, ಆದರೆ ಧೈರ್ಯನಟಿಸಿ]*

**ಭೀಷಣ:** - *(ಚಂದ್ರಹಾಸನಿಗೆ)* ಎಲ್ಲಿದಾಳೊ ನಿನ್ನ ಅಜ್ಜಿ?
ಕಳ್ಳ, ಸಳ್ಳಾಡುತೀಯಾ?
ನಿನ್ನ ಪೊಳ್ಳಿಗಂಜಲು ನಾವೇನು ಮಕ್ಕಳೆಂದರಿತೆಯಾ?

**ಚಂದ್ರಹಾಸ:** - ಕಣ್ಣಿಲ್ಲವೆ ನಿನಗೆ? ಅಲ್ಲೆ ನಿಂತಿಹಳು ಕಾಣ್!....
*(ಎಂದು ಅಜ್ಜಿಯ ಕಡೆ ನೋಡಿದಂತೆ ತಿರುಗಿ ಆಲಿಸಿ)*
ಏನೆಂದೆ, ಅಜ್ಜಿ? ಈ ಭಯಂಕರಾಕಾರ್
ಆ ಮುಕುಂದನೆ ಮೂರಾಗಿ ಮೊಗವಾಡುವಾಂತಿಹನೆ?
*(ಎಂದು ಮೂವರು ಚಂಡಾಲರನ್ನು ದಿಟ್ಟಿಸಿ ನೋಡಿ)*
ಅಹುದೆ! ಬರಿದೆ ಬೆದರಿದೆ, ಅಜ್ಜಿ,
ಕನಸಂ ನನಸುಗೆತ್ತು! *(ಚಂಡಾಲರಿಗೆ ಕೈಮುಗಿದು)*

ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!
ಗೋವಿಂದ! ಶ್ರೀಹರಿ! ಮುಕುಂದ! ಮುರಾರಿ!
*(ಎಂದು ಕೈಚಪ್ಪಾಳೆಯಿಕ್ಕಿ ಹಾಡುತ್ತಾನೆ.)*

**ಭೀಷಣ:** - *(ಮುಖ ಸಿಂಡರಿಸಿ)* ಸಾಕು ಈ ಬಯಲಾಟ! ಅವನ ಈ
ಹುಸಿ ಬಿರಾಂತಿಗೆ ಹೆದರುವೆಯಾ, ಕಾಳ? ಕೊಡು ಇಲ್ಲಿ
ಕತ್ತಿಯ! ಅವನೇನೊ ಮಂತ್ರ ಹೇಳುತ್ತಾನೆ! ಹೇಳದಂತೆ
ಬಾಯಿಗೆ ಬಟ್ಟೆ ಕಟ್ಟು. *(ಭೀಷಣ ಕತ್ತಿ ತೆಗೆದುಕೊಳ್ಳುತ್ತಾನೆ.)*

**ಕಾಳ:** - ಏನಾದರೂ ಸಾಯಿ! *(ಎಂದು ಬಾಯಿಗೆ ಬಟ್ಟೆ ತುರುಕುತ್ತಾನೆ.)*
*(ಭೀಷಣ ಕತ್ತಿಯೆತ್ತಲು ಚಂದ್ರಹಾಸ ಕೈಮುಗಿಯುತ್ತಾನೆ.)*

**ಭೀಷಣ:** - *(ಬೆರಗು ಬಡಿದು)* ಏನಿದು? ಕತ್ತಿ ಕೆಳಗಿಳಿಯದಲ್ಲಾ! ಹಾಳು ಮಂತ್ರಿಯ
ಮಾತು ಕೇಳಿ ಕೆಟ್ಟೆವಲ್ಲಾ! ಬಾಯ್ಗೆ ಕಟ್ಟಿದ ಬಟ್ಟೆ ಬಿಚ್ಚು, ಕಾಳ.

*(ಕಾಳ ಸಂತಸದಿಂದ ಬೇಗಬೇಗನೆ ಬಟ್ಟೆ ಬಿಚ್ಚುತ್ತಾನೆ. ಚಂದ್ರಹಾಸ ಗೋವಿಂದ ಶ್ರೀಹರಿ ಎಂದು ಹಾಡುತ್ತಾ ಎದ್ದು ನಿಲ್ಲುತ್ತಾನೆ. ಕಾಳ ಅವನ ಕಾಲಿಗೆ ಬಿದ್ದು ನಮಿಸಿ, ಆರನೆಯ ಬೆರಳನ್ನು ಗಮನಿಸಿ ಅಚ್ಚರಿವಡುತ್ತಾ ಏಳುತ್ತಾನೆ.]*

**ಕಾಳ:** - ನೋಡಿದಿರಾ? ಇವನ ಕಾಲಲ್ಲಿ ಆರು ಬೆರಳುಗಳಿವೆ!

**ಭೀಷಣ:** - ಎಲ್ಲಿ? ಎಲ್ಲಿ? *(ಮೂವರೂ ನೋಡುತ್ತಾರೆ.)*
ಏನಾದರೂ ಕುರುಪು ಕೊಂಡೊಯ್ದರಾಯ್ತು. ಇಲ್ಲದಿರೆ ನಮಗೆ ಉಳಿಗಾಲವಿಲ್ಲ. ಮಾರಿಯೆ ಕೊಟ್ಟಳು ಆ ಆರನೆಯ ಬೆರಳ! ಈ ಬೆರಳು ನಮ್ಮನ್ನೂ ಉಳಿಸುತ್ತದೆ; ಅವನನ್ನೂ ಉಳಿಸಿತು!

*[ಭೀಷಣ ಬೆರಳನ್ನು ಸರಕ್ಕನೆ ಕತ್ತರಿಸಿಕೊಳ್ಳುತ್ತಾನೆ. ಚಂದ್ರಹಾಸ ಚೀರಿ ಮೂರ್ಛೆ ಹೋಗುತ್ತಾನೆ. ಇದ್ದಕ್ಕಿದ್ದ ಹಾಗೆ ಏನೊ ಹೂಂಕಾರದಿಂದ ಕಾಡು ನಡಗಿದಂತಾಗುತ್ತದೆ. ಮಾರ 'ಬಂದಳು ಕಣಾ ಅವಳು' ಎಂದು ದೀವಿಗೆಯೊಡನೆ ಓಡುತ್ತಾನೆ. ಕಾಳ ಭೀಷಣರಿಬ್ಬರೂ ಹಿಂಬಾಲಿಸಿ ಓಡುತ್ತಾರೆ. ಅಂತರಿಕ್ಷದಲ್ಲಿ ಗಾನ ಕೇಳಿ ಬರುತ್ತದೆ:*
*"ಚಿಂತಿಸುತ್ತೆನ್ನನೆ ಉಪಾಸನಂಗೆಯ್ವರ್ಗೆ*
*ಹೊಣೆಯಪ್ಪೆನೇಗಳುಂ ಯೋಗಕಕ್ಕೆ ಕ್ಷೇಮಕ್ಕೆ!"]*

*ಪರದೆ ಬೀಳುತ್ತದೆ.*

*

**<u>ದೃಶ್ಯ೬</u>**

*[ಅದೆ ಅರಣ್ಯದ ಮತ್ತೊಂದೆಡೆ. ಮರುದಿನ ಸೂರ್ಯೋದಯಾನಂತರ ಪುಳಿಂದರ ಪಡೆಯೊಂದು ಬೇಟೆಯಾಡುತ್ತ ಬ ರುತ್ತದೆ.]*

**೧ನೆಯ ಪುಳಿಂದ:** - *(ನೆಲವನ್ನು ಪರಿಶೀಲಿಸುತ್ತಾ)* ಇದೆ ಪಂದಿ ಕೆದರಿದ ನೆಲಂ.

**೨ನೆಯ ಪುಳಿಂದ:** - *(ಇನಿತು ಮುಂಬರಿದು ನೋಡಿ)* ಕಾಣ್, ಇದೆ ದಂತಿ ಕದಡಿದ ಕೊಳಂ.

**೩ನೆಯ ಪುಳಿಂದ:** - *(ಒಂದೆಡೆ ಬಗ್ಗಿನೋಡಿ)* ಇದೊ ಇಲ್ಲಿ ಪುಲಿಯುಗಿದ ಮಿಗದ ಮಿದುಳ್.

**೪ನೆಯ ಪುಳಿಂದ:** - ಇತ್ತಲಿದೆ ಸಿಂಗಮೆರಗಿದಾನೆಯ ತಲೆಯ ಮುತ್ತು!

**೫ನೆಯ ಪುಳಿಂದ:** - ಇದೊ ಇಲ್ಲಿ ವನಮಹಿಷನುದ್ದಿಕೊಂಡ ಮರದಿಗುಡು.

**೬ನೆಯ ಪುಳಿಂದ:** - ಇತ್ತಲಿದೆಕೊ ಸಾರಂಗಮಿಕ್ಕಡಿಗ್ಯೆದ ಪಾವು!

**೪ನೆಯ ಪುಳಿಂದ:** - ಇತ್ತಲಿದೆ ಹುಲ್ಲೆಗಳ ಹಕ್ಕೆ; ಮರಿಗಳಿಕ್ಕೆ.

**೧ನೆಯ ಪುಳಿಂದ:** - ನಡೆ, ಮುಂದೆ ನಡೆ.

**೨ನೆಯ ಪುಳಿಂದ:** - ಪಜ್ಜೆವಿಡಿ ಪೂಗು.

**೬ನೆಯ ಪುಳಿಂದ:** - *(ಹಿಂಜರಿದು ನಿಂತು ಎಚ್ಚರಿಕೆ ಹೇಳುವಂತೆ)* ತಡೆ! ನಿಲ್ಲು!

**೩ನೆಯ ಪುಳಿಂದ:** - ನಿಲ್ಲಲೇಕೆ? ಜಡಿ! ಬೊಬ್ಬೆಗುಡು!
*[ಎಲ್ಲರೂ ಸೋವಿನ ಕಾಕು ಹಾಕುತ್ತಾರೆ.]*

**೬ನೆಯ ಪುಳಿಂದ:** - ಎಲೆಲೆ ಪೊದರೊಳಡಗು!

**೫ನೆಯ ಪುಳಿಂದ:** - ಕೈಗೆಡದಿರ್, ಇಸು!

**೪ನೆಯ ಪುಳಿಂದ:** - ತುಡು, ನಿಡುಸರಳ!

**೧ನೆಯ ಪುಳಿಂದ:** - ಕೆಲಕ್ಕೆ ಸಿಡಿಯದಿರ್, ಪೊಡೆ, ಸಾರ್ಚು!

**೪ನೆಯ ಪುಳಿಂದ:** – ಮರಕಡರ್, ಒಡರ್ಚು!

**೩ನೆಯ ಪುಳಿಂದ:** – ಅಡಗಿ ಪೊಯ್!

**೧ನೆಯ ಪುಳಿಂದ:** – ಓಡಿ, ತಡೆಗಟ್ಟಿ; ಬಡಿಕೋಲನಿಡಿ!
*[೨, ೫, ೬ನೆಯ ಪುಳಿಂದರು ಹಿಡಿದಿ ಹಿಡಿದಿ ಎಂದೋಡುತ್ತಾರೆ.]*

**೪ನೆಯ ಪುಳಿಂದ:** – ನಮ್ಮರಸು ಕುಳಿಂದಕನೆಲ್ಲಿ?

**೧ನೆಯ ಪುಳಿಂದ:** – ಓಡಿದನ್ ಹರಿಣನಂ ಬೆಂಬತ್ತಿ.

**೩ನೆಯ ಪುಳಿಂದ:** – ನಮ್ಮ ಹೆಂಗಸರ ಗುಂಪೆತ್ತವೋಯ್ತು?

**೧ನೆಯ ಪುಳಿಂದ:** – ಎಲ್ಲಿಯೊ ನಾ ಕಾಣೆ... *(ತುಸು ಪರಿಹಾಸ್ಯದಿಂದ)*
ಬಡನಡುವಿನಬಲೆಯರ್ ನಮ್ಮೊಡನೆನಿತು ದೂರ
ಬಂದಪರ್? ನವಿಲ್ಗರಿಗಳಂ, ಚಮರಿವಾಲಂಗಳಂ,
ಕರಿಯ ಕುಂಭಸ್ಥಳದ ಮುಕ್ತಾಫಲಂಗಳಂ
ಹುಡುಕುತ್ತ ಹೆರಕುತ್ತ ಇನ್ನೆಲ್ಲಿಹರೊ ಕಾಣೆ.

**೩ನೆಯ ಪುಳಿಂದ:** – ಪಾಳ್ ಕುರ್ಕನೊಂದು ನನ್ನ ಮೇಲಗರಿ,
ಪರಚಿ, ಗಂಟಲ್ಮುರಿದು ಕೊಲಲೆಳಸುತಿತ್ತು.
ದೊರೆ ಎಚ್ಚ ಶರದಿಂದ ಮಡಿದುರುಳ್ದುದು.
ನೋಡಿಲ್ಲಿ ನೆತ್ತರೊಸರುವ ಗಾಯ. *(ತೋರಿಸುತ್ತಾನೆ.)*

**೪ನೆಯ ಪುಳಿಂದ:** – ಒರ್ ಪಂದಿ ಹೂಂಕರಿಸಿ ಕೋರೆದಾಡೆಯ ಮಸೆದು
ನುಗ್ಗಿಬಂದುದು ಕೊಲಲ್. ಕೈಗೂಡಲಿಯಿಂದಿಕ್ಕಿದೆನ್;
ತುಂಡರಿಸಿ ಕೆಡೆದುದಿಳೆಗೆ. ಇಂದಿನ ಬೇಂಟೆಯೆ ಬೇಂಟೆ!

**೧ನೆಯ ಪುಳಿಂದ:** – ಬೇಂಟೆ ತಾಂ ಬಿನದಂಗಳರಸಲ್ತೆ?
*[ಒಳಗಣಿಂದ ಪುಲಿ! ಪುಲಿ! ಸತ್ತೆನ್! ಅಯ್ಯೋ ಸತ್ತೆನ್! ಎಂಬ ಆರ್ತನಾದವೂ ಜಡಿ, ಬಡಿ, ಪೊಡೆ, ಹೊಯ್ ಎಂಬ ಕೂಗು ಕೇಳಿಬರುತ್ತವೆ.]*

**೪ನೆಯ ಪುಳಿಂದ:** – ಅದೇನದಾ ಹುಳುವಿನವರ ಬೊಬ್ಬೆ?

**೩ನೆಯ ಪುಳಿಂದ:** – ಆವನೊ ಪುಲಿಯಿಂದ ಮಡಿದನ್!
*[೬ನೆಯ ಪುಳಿಂದ ಓಡಿಬರುತ್ತಾನೆ.]*

**೬ನೆಯ ಪುಳಿಂದ:** – ಇಲ್ಲೇನು ಮಾಡುವಿರಿ? ದೊಡ್ಡನರಸನನ್ ಪುಲಿ ಪಿಡಿದುದು!
ನೆರವಿಗೆ ಹೋದ ಸಣ್ಣನರಸನನ್
ಕರುಳೀಚೆಗುರುಳ್ವಂತೆ ಸೀಳಿದುದು ಹೊಟ್ಟೆಯನ್!
ಭಲ್ಲೆಯಿಂದಿರಿದ ಪುಟ್ಟನರಸನನ್
ಮೇಲ್ವಾಯ್ದು ಕಚ್ಚಿ ಬಿಸುಟಿತ್ತು!
ಕಂಡದಂ ನನಗೊ ನಡುಗುತಿದೆ ತೊಳ್ಳೆ!
ಕೊನೆಗೆ ಚಿಕ್ಕನರಸನ ಕೊಡಲಿ ಪೆಟ್ಟಿಂಗೆ
ಆರ್ಭಟಿಸಿ ನೆಗೆದುರಿಳಿ ಬಿಳ್ದುದು ಸತ್ತು!
ಪೆರ್ಬ್ಬುಲಿ! ಇರ್ಪ್ಪತ್ತು ಆಳಿಗೇನ್ ಕಡಿಮೆಯಿಲ್ಲ!

**೧ನೆಯ ಪುಳಿಂದ:** – ಬನ್ನಿ, ಬನ್ನಿ, ಓಡಿ ಬನ್ನಿ; ಪೊತ್ತದನ್ ಕೊಂಡೊಯ್ದು ದೊರೆಗೊಪ್ಪಿಸಲ್,
ನಮಗೆ ಪೇರೌತಣಂ ಇಂದು!
*[೧ನೆಯ ಮತ್ತು ೬ನೆಯ ಪುಳಿಂದರು ಓಡುತ್ತಾರೆ.]*

**೩ನೆಯ ಪುಳಿಂದ:** – ಅಯ್ಯೋ ನಮ್ಮ ದೊಡ್ಡನರಸನ್ ಸತ್ತನೆ! *(ಮರುಗುತ್ತಾನೆ)*

**೪ನೆಯ ಪುಳಿಂದ:** – ಪುಲಿಯ ಕೈಯಿಂ ಮಡಿಯೆ ಪೆರ್ಮೆ ಸಾವದು ಕಣಾ!
ಮರುವುಟ್ಟಿನಲ್ಲವಗೆ ದೊರಕುವುದು ದೊರೆತನಂ!

**೩ನೆಯ ಪುಳಿಂದ:** – ಹಾಂಗಾದರವನೇ ಪುಣ್ಯವಂತನ್!

**೪ನೆಯ ಪುಳಿಂದ:** – ಮತ್ತೆ? *(ಇಬ್ಬರೂ ಹೊರಡುತ್ತಾರೆ)*

*ಪರದೆ ಬೀಳುತ್ತದೆ.*

*

**<u>ದೃಶ್ಯ ೭</u>**

*[ಅರಣ್ಯದ ಮತ್ತೊಂದು ಭಾಗ. ನಾಲ್ವರು ಪುಳಿಂದಿಯರು ಹಂದಿಯ ಕೋರೆ, ಜಿಂಕೆಯ ಕೊಂಬು, ಪುನುಗು, ನವಿಲು ಗರಿ, ಮೊದಲಾದ ಅರಣ್ಯಕ ಪದಾರ್ಥಗಳನ್ನು ಸಂಗ್ರಹಿಸುತ್ತಾ ಬರುತ್ತಾರೆ.]*

**೧ನೆಯ ಪುಳಿಂದಿ:** - *(ನೆಲದಕಡೆ ದೂರ ನೋಡಿ)* ಅದೇನದು ಅಲ್ಲಿ ಬಿದ್ದದೆ?

**೨ನೆಯ ಪುಳಿಂದಿ:** - ಹೌದೆ! ಮಿಗದ ಕೊಂಬು! *(ಎಂದು ಓಡಿ ತೆಗೆದುಕೊಳ್ಳುತ್ತಾಳೆ)*

**೩ನೆಯ ಪುಳಿಂದಿ:** - ಏಕಿಂತು ಮೈಮೇಲೆ ನುಗ್ಗುವೆ?
ಆಸೆಬುರುಕಿ! ಕೀಳ್ಪೆಣ್ಣು!

**೨ನೆಯ ಪುಳಿಂದಿ:** - ನೀನಾರ್ಗೆ, ಕೇಳುವಳ್?

**೩ನೆಯ ಪುಳಿಂದಿ:** - ಮೊದಲದನ್ ಕಂಡವಳಿಗಾ ಕೊಂಬು ಸೇರ್ದುದು.

**೨ನೆಯ ಪುಳಿಂದಿ:** - ಕಂಡವಳಿಗಲ್ತು, ಕೊಂಡವಳ್ಗೆ.

**೪ನೆಯ ಪುಳಿಂದಿ:** - ಅಲ್ಲೇನು ಮಾಡುವಿರಿ? ಓಡಿಬನ್ನಿ.
ನವಿಲುಗರಿಗಳ ಹಿಂಡೆ ಕೆಡೆದಿಹುದಿಲ್ಲಿ;
*[ಎಲ್ಲರೂ ಸಂಭ್ರಮದಿಂದ ಸಶಬ್ದವಾಗಿ ಓಡಿ ಆಯುತ್ತಾರೆ]*

**೧ನೆಯ ಪುಳಿಂದಿ:** - ಕಾಣಿಲ್ಲಿ, ಈ ಮರದ ಬೇರ್ಗೆ
ಪುನುಗನೊತ್ತಿದೆ ಪುನುಗುಬೆಕ್ಕು.
*[ಅದನ್ನು ಒರೆಸಿ ಕುಡಿಕೆಗೆ ತುಂಬುತ್ತಾಳೆ.]*

**೩ನೆಯ ಪುಳಿಂದಿ:** - ಅಃ ಎಂತಪ್ಪ ಕಂಪು! *( ಆಘ್ರಾಣಿಸುತ್ತಾಳೆ.)*

**೨ನೆಯ ಪುಳಿಂದಿ:** - ನಿನಗೆನಿತೆ ಸಿಕ್ಕಿತು ಮೃಗಸಾರಮೃತ್ತಿಕೆ, ತಂಗಿ?

**೪ನೆಯ ಪುಳಿಂದಿ:** - ಒಂದು ಅಂಡೆಯ ತುಂಬ.

**೧ನೆಯ ಪುಳಿಂದಿ:** - ಮಾರಾಣಿ ಬೆಸಸಿಹಳು, ತನಗಿನಿತು ಬೇಕೆಂದು.

**೩ನೆಯ ಪುಳಿಂದಿ:** - ಹೂವೂ ಬೇಕಂತೆ, ಆವುದೊ ನೋಂಪಿಗೆ.

**೨ನೆಯ ಪುಳಿಂದಿ:** - ಸೌಭಾಗ್ಯವೇನಿದ್ದರೇನಂತೆ? ಸುತರಿಲ್ಲ.
ಪಾಪ, ಕೊರಗುತಿರುವಳು ತಾಯಿ,
ಪುತ್ರನಂ ಪಡೆಯಲ್ಕೆ ನೋಂತು.

**೪ನೆಯ ಪುಳಿಂದಿ:** - ಪುತ್ರವತಿಯಹುದು ಜನ್ಮಾಂತರದ ಪುಣ್ಯಂ.
ಮುನ್ನೆ ತಾಂ ನೋಂತುದಲ್ಲದೆ, ಪೇಳ್
ಬರಿದೆ ಬಯಸಿದೊಡೆ ಬಂದಪುದೆ?

**೩ನೆಯ ಪುಳಿಂದಿ:** - ಪುತ್ರನಂ ಪಡೆಯಲೆಂದೇ ನೋಂಪಿಯಂ
ಕೈಕೊಂಡಿಹಳ್. ಅದಕೋಸುಗವೆ ಬೆಸಸಿಹಳ್
ಫಲಂಗಳಂ ಪುಷ್ಪಂಗಳಂ ತರಲ್.

**೧ನೆಯ ಪುಳಿಂದಿ:** - ನಮ್ಮರಸಿ ಮೇಧಾವಿನಿಗೆ ತಾನಾದಂದು
ಶುಭದ ಪುತ್ರೋತ್ಸವಂ
ನಮ್ಮ ಸೌಬಾಗ್ಯಕೆಣೆಯಿಲ್ಲದಾಗುವುದು.
ಬನ್ನಿ ಹೂಗಳನಾಯ್ದು ಒಯ್ಯುವಂ…
ನಾ ಕುಯ್ವೆ ಸಂಪಗೆಯನ್.

**೨ನೆಯ ಪುಳಿಂದಿ:** - ಸುರಗಿಯಂ ನಾನೇರಿ ಕೊಯ್ವೆನ್.

**೩ನೆಯ ಪುಳಿಂದಿ:** - ಕೇದಗೆಯನಾನ್ ಮುಳ್ಳೆಣಿಸದೆಯೆ ಕೊಯ್ವೆನ್.

**೪ನೆಯ ಪುಳಿಂದಿ:** - ಸೀತಾಳಿ ದಂಡೆಗಳನಾನ್ ತಂದಪೆನ್.
*[ಇದ್ದಕಿದ್ದಂತೆ ಖುರಪುಟ ಧ್ವನಿ ಕೇಳಿಸುತ್ತದೆ.]*

**೧ನೆಯ ಪುಳಿಂದಿ:** - ಅಕೊ ಅಕೊ ಅಕೊ! ಮಿಗ ಮಿಗ ಮಿಗ!

**ಎಲ್ಲರೂ:** - *(ನೋಡುತ್ತಾ)* ಮಿಗ! ಮಿಗ! ಮಿಗ! ಹೋ! *(ಕೂಗುವರು)*

**೧ನೆಯ ಪುಳಿಂದಿ:** - ಅಕ್ಕ, ಮಿಂಚಿನೋಟವ ಮುಂಚಿ ಹಾರಿತಲ್ತೆ?

**೨ನೆಯ ಪುಳಿಂದಿ:** - ಅಗೊ ಅಗೊ ಅಗೊ
ಬೆನ್ನಟ್ಟಿ ಓಡುತಿಹನೊರ್ವ ಬೇಂಟೆಗಾರಂ.
*[ಎಲ್ಲರೂ ವಿಸ್ಮಯದಿಂದ ನೋಡುತ್ತಿರುತ್ತಾರೆ.]*

**೩ನೆಯ ಪುಳಿಂದಿ:** - ಓವೊ ಅವನೆಮ್ಮ ಅರಸು ಕುಳಿಂದಕಂ!

**೧ನೆಯ ಪುಳಿಂದಿ:** - ಅವನಿಲ್ಲದಿನ್ನಾರು ಮಿಗವನಂತಟ್ಟುವರ್?

**೪ನೆಯ ಪುಳಿಂದಿ:** - ನೋಡಕ್ಕ, ಆ ಮಿಗಂ ಕೊಂಕುಗೊರಲಿಂ
ಪಿಂತಿರುಗಿ ಹಾರುತಿದೆ!

**೩ನೆಯ ಪುಳಿಂದಿ:** - ಆಹಾ ಅದರಡಿಗಳಿಳೆಯನೇಂ
ಮುಟ್ಟಿಯುಂ ಮುಟ್ಟದೆಯೆ ಚಲಿಸುತಿವೆ!

**೪ನೆಯ ಪುಳಿಂದಿ:** - ಅಯ್ಯೋ, ಮತ್ತೆ,
ನಮ್ಮೆಡೆಗೆ ತಿರುಗುತಿದೆ ಸಾರಂಗ.

**೨ನೆಯ ಪುಳಿಂದಿ:** - ಕಾಣದರ ಬಾಯಲ್ಲಿ ಜೊಲ್ಲನೊರೆ!

**೪ನೆಯ ಪುಳಿಂದಿ:** - ಹತ್ತೆ ಸಾರ್ದುದು ಕಾಣ್:
ಅಳ್ಳೆಯಂತುಬ್ಬಿ ತಗ್ಗುತ್ತಿದೆ.

**೧ನೆಯ ಪುಳಿಂದಿ:** - ಬೆಮರಿಳಿದು ಕರ್ಪುಬಣ್ಣಕೆ ತಿರುಗಿಹುದು ಮೈ!

**೨ನೆಯ ಪುಳಿಂದಿ:** - ಓವೊ ಕಾಣ್, ಬೆನ್ನಟ್ಟಿ ಬಂದನದೊ ನಮ್ಮ ದೊರೆ.
*[ಕುಳಿಂದಕನು ಬಿಲ್ಲು ಬಾಣ ಹಿಡಿದು ಧಾವಿಸಿ ಬರುತ್ತಾನೆ. ಪುಳಿಂದಿಯರನ್ನು ಕಂಡುಕೇಳುತ್ತಾನೆ.]*

**ಕುಳಿಂದಕ:** - ಎತ್ತಲೋಡಿತಾ ಜಿಂಕೆ?

**೧ನೆಯ ಪುಳಿಂದಿ:** - ಇತ್ತಣ್ಗೆ *(ಎಂದು ಕೈತೋರಿಸುತ್ತಾಳೆ.)*

**ಕುಳಿಂದಕ:** - *(ಸ್ವಗತ)* ನಾಲ್ಕೈದು ಹರಿದಾರಿಯಿಂ ಬೆಂಕೊಂಡು
ಬಂದುದೂ ಬರಿದಾಯ್ತೆ? ಎಚ್ಚಲಗ ಲೆಕ್ಕಿಸದೆ
ಧಾವಿಸಿತೆ? ನನ್ನನೆಲ್ಲಿಗೊ ಉಯ್ವ ಪಾಂಗಿಂದೆ,
ಮರೆಯಾಗಿ ಮತ್ತೆ ತೋರಿ, ಮತ್ತೆ ಮರೆಯಾಗಿ
ಮಾರೀಚನಾಟಮಂ ಮೆರೆದುದಲ್ತೆ?...
ಇರಲಿ; ನೋಳ್ಪೆನೆಲ್ಲಿಗೆಯ್ದುವುದೆಂದು!
*[ಮತ್ತೆ ಧಾವಿಸಿ ಓಡುತ್ತಾನೆ.]*

**೨ನೆಯ ಪುಳಿಂದಿ:** - ಮಿಗವನೇನ್ ಬಿಡುವನೆಂದರಿತೆಯಾ?
ಹೆತ್ತದರ ಹಿಡಿಯ ಹೊಟ್ಟೆಯ ಹೊಕ್ಕರೂ ಬಿಡನು!

**೪ನೆಯ ಪುಳಿಂದಿ:** - ನಾವೂ ಓಡುವಂ. ಬನ್ನಿ ಹೊತಾಯ್ತು.

**೩ನೆಯ ಪುಳಿಂದಿ:** - ಓಡಲೇನ್ ನೀನ್ ಗಂಡೇ?

**೨ನೆಯ ಪುಳಿಂದಿ:** - ಗಂಡಸರ ಮೀರಿಹಳು ಅವಳು!
*[ದೂರದಲಿ ಕಲಕಲ ನಿನಾದ ಕೇಳುತ್ತದೆ.]*

**೧ನೆಯ ಪುಳಿಂದಿ:** - ಏನದು ಕೋಲಾಹಲಂ?

**೨ನೆಯ ಪುಳಿಂದಿ:** - ಪುಲಿ ಪಿಡಿದುದೊ? ಪಂದಿ ತಿವಿದುದೊ?
ನಮ್ಮವರೊಳಾವಂಗೆ ಏನಾದುದೊ? *(ಕಳವಳಿಸುತ್ತಾಳೆ)*

**೪ನೆಯ ಪುಳಿಂದಿ:** - ಬನ್ನಿ, ಬನ್ನಿ,; ಬೇಗಬನ್ನಿ; ಓಡಿಬನ್ನಿ!
*[ಎಲ್ಲರೂ ಧಾವಿಸುತ್ತಾರೆ]*

*ಪರದೆ ಬೀಳುತ್ತದೆ.*

*

## ಅಂತ್ಯರಂಗಂ-ದೃಶ್ಯ ೭,೮

<u>ದೃಶ್ಯ೭</u>

*[ಕಾಳಿಕಾ ದೇವಸ್ಥಾನದ ಸುತ್ತಣ ಕಾಡು. ಹಳುವಿನ ನಡುವೆ ಭೀಷಣ, ಕಾಳ, ಮಾರ ಮೂವರೂ ಬಿಚ್ಚಿದ ಕತ್ತಿಗಳನ್ನು ಹಿಡಿದು ಮಾತನಾಡುತ್ತಿರುತ್ತಾರೆ.]*

**ಭೀಷಣ:** - ಮಾರ, ನೀನು ಬಾಗಿಲ ಹಿಂದೆ ಅವಿತಿರು;
ಕಾಳ, ನೀನು ಮೂರ್ತಿಯ ಹಿಂದೆ ಅಡಗಿರು;
ನಾನಿಲ್ಲಿಯೆ ನಿಂತಡಗಿ, ಅವನು ಬರುವ ಹಾದಿಯನ್ನೆ
ನೋಡುತ್ತಿರುವೆ. ದೂರದಲಿ ಕಂಡೊಡನೆ ಗುಡುಗಿ
ಬಂದವಿತುಕೊಳ್ಳುವೆ, ನಿಮಗೆ ಸೂಚನೆಯಾಗಿ.

**ಮಾರ:** - ಅಂದವನ ಬಿಟ್ಟಂತೆ ಇಂದು ಬಿಟ್ಟರೆ ನಮ್ಮ ತಲೆ
ಅಟ್ಟೆಗಳ ಮೇಲಿರುವುದಿಲ್ಲ.

**ಕಾಳ:** - ಇಂದು ಬಿಡುವುದೆ? ಯಾರು ಬಿಟ್ಟರೂ ನಾನು ಬಿಡೆ.

**ಭೀಷಣ:** - ಒಂದೆ ಏಟಿಗೆ ತುಂಡಾಗುವಂತೆ ಹೊಡೆಯಬೇಕು.
ಯಾರೂ ಹಿಂಜರಿಯಬಾರದು. ಜೋಕೆ! ಅವನು
ಕತ್ತಿಕಾಳೆಗದಿ ಬಲುಗಟ್ಟಿಗನಂತೆ. ರಣಾಂಗಣದಿ
ನೂರು ಕಾಲಾಳುಗಳನೊಮ್ಮೆಗೆ ತುಂಡು ಮಾಡುವ ಜಾಣ್ಮೆ
ಇಹದಂತೆ!

**ಮಾರ:** - ನಿನಗೇಕೆ ಆ ಚಿಂತೆ? ನಮ್ಮ ಮಾರಿಯ ಮುಂದೆ
ನಾವು ಹೆದರುವುದುಂಟೆ?

**ಕಾಳ:** - ಇಂದವಳಿಗೆ ಸಿರಿಯ ನರಬಲಿ!

**ಮಾರ:** - ಒಬ್ಬನೆ ಬರುವನೊ? ಕೂಡಿ ಬರುವನೊ?

**ಭೀಷಣ:** - ಒಬ್ಬನಾಗಲಿ ಇಬ್ಬರಾಗಲಿ ತುಂಡುಮಾಡುವುದೆ
ನಮ್ಮ ಕರ್ತವ್ಯ. ಏ ಕಾಳ, ಕತ್ತಿಗಳನು ಚೆನ್ನಾಗಿ
ಮಸೆದಿರುವೆಯಷ್ಟೆ?

**ಕಾಳ:** - *(ಕತ್ತಿಯ ಬಾಯಿಗೆ ಕೈಹಾಕಿ ತೋರಿಸುತ್ತಾ)*
ಓಹೊ, ಕಲ್ಲನೂ ಕತ್ತರಿಸಬಲ್ಲುದು!

**ಭೀಷಣ:** - *(ಮೇಲೆ ನೋಡಿ)* ಏನಾಗಲೆಯ ಮೋಡ ಕವಿದು
ಮುಂಗಪ್ಪು ಹಬ್ಬಿಬಿಟ್ಟಿದೆ. ಗುಡುಗು ಮಿಂಚು
ಬೇರೆ! *(ತಕ್ಕನೆ ಚಕಿತನಾಗಿ ದೂರ ನೋಡಿ)* ನೋಡಿ, ಓ ಆ
ದೂರದಲ್ಲಾವುದೊ ಆಕೃತಿ ಚಲಿಸಿದಂತೆ ಕಾಣುವುದಿಲ್ಲವೆ?
*[ಎಲ್ಲರೂ ಅತ್ತ ನೋಡುತ್ತಾರೆ.]*

**ಮಾರ:** - ನನ್ನ ಕಣ್ಣು ಮಂದ. ನನಗೇನೂ ಕಾಣಿಸುವುದಿಲ್ಲ.

**ಕಾಳ:** - *(ನಕ್ಕು)* ಕಣ್ಣೊಂದೆ ಏನು? ತಲೆಯೂ ಮಂದವೆ ನಿನಗೆ!
*(ಎಂದು ದೂರ ನೋಡಿ)* ಹೌದು, ಏನೊ ಚಲಿಸಿದಂತಾಗುತಿದೆ.

**ಭೀಷಣ:** - ನಿಮ್ಮ ನಿಮ್ಮ ತಾಣಗಳಿಗೆ ಹೋಗಿ ಅಡಗಿರಿ. ಅವನೆ
ಬರುತಿಹನು. ನಾನು 'ಹೊಯ್ ' ಎಂದು ಕೂಡಲೆ ಬಂದು
ಮುತ್ತಬೇಕು ತಿಳಿಯಿತೆ?
*[ಮೂವರೂ ಬೇಗ ಬೇಗನೆ ಗುಡಿಯ ಕಡೆ ಓಡಿ ಮರೆಯಾಗುತ್ತಾರೆ. ಬಳಿಕ ಪೂಜಾ ಸಾಮಗ್ರಿಯಿರುವ ಹರಿವಾಣ ಹಿಡಿದು ಮದನ ಪ್ರವೇಶಿಸುತ್ತಾನೆ.]*

**ಮದನ:** - ಯಾರೋ ಮಾತನಾಡಿದ ಹಾಗೆ ಕೇಳಿಸಿತು.
ಯಾರಿರುವರಿಲ್ಲಿ ಈ ಹೊತ್ತಿನಲ್ಲಿ? *(ಸುತ್ತನೋಡಿ)*
ಕಾಡುಗತ್ತಲೆಗೆ ಮೋಡಗತ್ತಲೆಯೂ ಸೇರಿ
ಮಸಿಮುದ್ದೆಯಾಗಿ ಅಳಸಿಹೋಗಿಹುದೆಲ್ಲ.
ನಾನು ಕೇಳಿದುದು ಕಲ್ಪನೆಯ ಸದ್ದಿರಬೇಕು.
ಗುಡುಗು ಸದ್ದಿನಲಿ ಮರಗಳ ನಡುವೆ ನುಗ್ಗುವೀ
ಗಾಳಿಯೇ ಗೊಣಗಿದಂತಾಯ್ತೆ ಏನೊ?
*(ಗೂಬೆ ವಿಕಾರವಾಗಿ ಕೂಗುತ್ತದೆ)*
ಏನು ಗೂಗೆಯ ಕೂಗಿನಿತು ಕರ್ಕಶ, ವಿಕಾರ!
ಸುತ್ತಲಿಹ ಪ್ರೇತ ಭೂಮಿಯ ಮಹಿಮೆಯಿರಬೇಕು!
ಎನಿತು ಧೈರ್ಯವನೊತ್ತಿದರು ಎದೆಗೆ, ಮನವೇಕೊ
ಕಳವಳಿಸುತಿಹುದು! ಕತ್ತಲೆಯೆ ಅಂತು!...
ತಂದೆಯಿಂದಿನ ವರ್ತನೆಯ ಕಾರಣವೊ? ಇರಬೇಕು...
ತಂಗಿಯನಂತು ಬೈದುದಂ ಕಂಡೆನಗೆ
ತಂದೆಯನೆ ನಿಗ್ರಹಿಪ ಕೋಪವುರಿದಿತ್ತು!
ಕೋಮಲೆ, ಮುಗ್ಧೆ, ನವವಧು, ಪ್ರೇಮಮೂರ್ತಿ,
ಅವಳನಾಪರಿ ಕಲೆಯುವುದೆ?... ಅಥವಾ,
ಅವಳೆಸದಿದಾ ಕಜ್ಜಗುಟ್ಟು ತಂದೆಗೇನಾದರೂ
ತಿಳಿದಿಹುದೋ? - ಪಾಪ, ಮುದ್ದು ತಂಗಿ!
ಅಪ್ಪಯ್ಯನಂತು ಬೈದುದಕೆ ಹೆದರಿ ಮುದುರಿ
ಬಿಕ್ಕಿ ಬಿಕ್ಕಳುತೆ ನನ್ನೆಡೆಗೆ ಓಡಿಬಂದು
ಪತ್ರವನು ತಾನೆ ತಿದ್ದಿದಾ ಮುಗ್ಧಗೋಪ್ಯವನು
ಒರೆದಳಲ್ತೆ? ತನ್ನ ತಪ್ಪನು ಅಪ್ಪಯ್ಯಗೊಪ್ಪಿಸುವೆ
ಎಂದವಳನೆಂತೊ ನಾನೆ ತಡೆದೆ.... ಆದರೂ
ಎಲ್ಲಿ ಹೇಳಿ ಬಿಡುವಳೊ ಎಂದು ನನಗೆ ಅಳ್ಕು!....
ಏಕಿಂತು ಕ್ರೂರಿಯಾದನೊ ತಂದೆ ನಾನರಿಯೆ.
ನಾನೆ ಕಾರಣವಂತೆ! ಅಂತೆಂಬರನಿಬರೊ!....

ಕುಂತಳೇಂದ್ರನ ರಾಜ್ಯವನು ನನಗೆ ಮಾಡುವುದೊಂದೆ
ಆತನಾ ಕ್ರೌರ್ಯಕ್ಕೆ ಗುರಿಯಂತೆ!….
ದೊರೆಯ ಕುವರಿಯನೆನಗೆ ತಂದುಕೊಂಡು
ಆ ಉಪಾಯವ ಸಾಧಿಸುವುದವನ ಬಯಕೆಯಂತೆ!
ಆದರೀಗಳಾ ಬಟ್ಟೆಯೂ ಕಟ್ಟಿದಂತೆಯೆ:
ಗಾಂಧರ್ವ ವೈವಾಹವಿಧಿಯಿಂ ದೊರೆಯ ಮಗಳಾಗಳೆಯೆ
ನನ್ನ ತಂಗೆಗೆ ತಂಗೆಯಾಗಿಹಳಲ್ತೆ?….
ಅದು ತಿಳಿಯೆ, ತಂದೆಯ ಮುನಿಸಿನುರಿಯನ್
ಆನುವುದೆಂತೊ? ಆರ ಆಹುತಿಯಪ್ಪುದೊ?…
ಎನಿತೊ ಸೂಳ್ ಎನಗೆಯೆ ಒರಲಿ ಸಾವಾದರೂ
ಎಂಬಾಸೆ ಸುಳಿದಿಹುದು ನನ್ನ ಹೃದಯದಲಿ.
ಚಂದ್ರಹಾಸನಿಗೇನು ಕೇಡೊದಗುವುದೊ ಎಂದು
ನನಗಳ್ಕು…. ನನ್ನ ಹರಣವನೊಡ್ಡಿಯಾದರೂ
ಆ ಸಾತ್ವಿಕ ಶಿರೋಮಣಿಯ ಕ್ಷೇಮಕ್ಕೆ ಹೊಣೆ ನಿಲುವೆ….
ಮುದ್ದು ತಂಗಿಗೆ ಅಮಂಗಳಂ ಬರದಿರ್ಕೆ - *(ದೂರಕ್ಕೆ ನೋಡಿ)*
ಈ ಕಾಡುಗತ್ತಲಲಿ ಆ ಗುಡಿಯ ಹಣತೆಯ ಸೊಡರು
ಎಂತು ಹೋರಾಡುತಿದೆ, ಬೆಳಕಿನ ಬದುಕಿಗೆಳಸಿ!
ಅಂತೆಯೆ ಅಲ್ತೆ ನನ್ನೆದೆಯ ಬೆಳಕೂ!
*[ಆ ಬೆಳಕನ್ನೆ ಗುರಿಮಾಡಿ ನಡೆದು ಮರೆಯಾಗುತ್ತಾನೆ]*

*ಪರದೆ ಬೀಳುತ್ತದೆ.*

*

<u>**ದೃಶ್ಯ೮**</u>

*[ತನ್ನ ಅರಮನೆಯ ಒಂದು ವಿಶಾಲ ಕಕ್ಷೆಯಲ್ಲಿ ದುಷ್ಟಬುದ್ಧಿ ಹಿಂದೆ ಮುಂದೆ ತಿರುಗುತ್ತಿದ್ದಾನೆ. ಸಂಜೆಗಪ್ಪು ಕವಿದಿದೆ. ಕೋಪ ಕ್ರೌರ್ಯ ಶೋಕಾದಿ ನಾನಾ ಭಾವಗಳಿಂದ ಅರೆಮರುಳನಂತೆ ವರ್ತಿಸುತ್ತಿದ್ದಾನೆ]*

**ದುಷ್ಟಬುದ್ಧಿ:** - ಕಟ್ಟಾಣೆಯಿತ್ತಿಹೆನು. ಅಂದಿನಂತಾಗದು.
ಇಂದವನ ಕೊಂದೆ ತೀರ್ಚುವರು!…
*(ಸುತ್ತ ನೋಡಿ ಕತ್ತಲಾಗುತ್ತಿರುವುದನು ಗಮನಿಸಿ)*
ಏನಿನ್ನೂ ದೀಪಮಂ ಪೊತ್ತಿಸಿಲ್ಲ…ಯಾರಲಿ?

**ಸೇವಕ:** - *(ಓಡಿಬಂದು)* ಆಜ್ಞೆ ಮಹಾಸ್ವಾಮಿ.

**ದುಷ್ಟಬುದ್ಧಿ:** - ಕಾಣ್ಬುದಿಲ್ಲವೆ ನಿನಗೆ ಕತ್ತಲಾಗುತ್ತಿಹುದು?

**ಸೇವಕ:** - ದೀವಿಗೆಯ ಹೊತ್ತಿಸುವ ಸಮಯವಾಗಿಲ್ಲ, ಒಡೆಯ;
ಕರ್ಮೊಡ ಕವಿಯುತಿದೆ. ಅದಕೆ ಈ ಕತ್ತಲೆ!

**ದುಷ್ಟಬುದ್ಧಿ:** - ಸಾಕು ವಿವರಣೆ. ನಡೆ, ಬೆಳಕ ತಾ.
*(ಸೇವಕ ಹೋಗುತ್ತಾನೆ)*
ಈ ಬೆಳಕಿನಿಂದೇನಹುದು? ಆ ಬೆಳಕು ನಂದಿದರೆ!
*(ಸುಯ್ದು)*
ಅಯ್ಯೊ, ಮಗಳ ವೈಧವ್ಯದಿಂ
ಮಗನಭ್ಯುದಯಮಂ ಸಾಧಿಸುವುದಾಯ್ತೆ?
ಛೀಃ ವಿಕಟ ವಿಧಿಯೆ!...
*(ಸೇವಕನು ಬೆಳಕು ತಂದಿಟ್ಟು ಹೋಗುತ್ತಾನೆ)*
ಎಂತೊದಗಿತಾ ತಪ್ಪು?
'ವಿಷವ ಮೋಹಿಸುವಂತೆ' ಎಂಬುದೆಂತಾಯ್ತು
'ವಿಷಯೆ ಮೋಹಿಸುವಂತೆ' ?
ವಿಧಿ ಕೃತವೊ? ತನ್ನ ಮೋಸವೊ?
ಬರೆದವನ ಮರೆಹೊ?
ಅಲ್ಲದಿರೆ ಚಂದ್ರಹಾಸನದೆ ಮೃಷೆಯೊ?...
ದಿಟಂ, ಮದನನ ಮೇಲೆ ತಪ್ಪಿಲ್ಲ ... ಎಂತೂ
ಅಂದೆನಗೆ ಋಷಿಗಳಾಡಿದ ಮಾತು ಪುಸಿಯದಲ್ತೆ?
ಆದೊಡಂ... ಆದೊಡಂ.... ಆದೊಡಂ...
ಉಪಾಯದಿಂದೀಗಳಾಂ ವಧಿಸದಿರ್ದೊಡೆ
ಹುಸಿಯಹದು ನನ್ನ ಸಂತತಿಗೆ
ಈ ಧರೆಯನಾಳ್ವ ಸಂಪದಂ...*(ಮುನಿಸು ಏರಿ)*
ಕುಲಘಾತಕಗೆ ಮದುವೆಯಾದಾ ವಿಷಯೆ, -
ತಂದೆ ಪಿಂತಿರುಗುವಾ ಮೊದಲೆ ಏನವಳ್ಗಿರ್ದತ್ತೊ
ಈ ಮದುವೆಯವಸರಂ? - *(ಹಹ್ಹಹ್ಹಾ ಹುಚ್ಚುನಗೆ ನಗುತ್ತಾ)*
ವಿಧವೆಯಾಗಿರಲಿ... *(ಅಳುತುಟಿಯಾಗಿ)* ಅಯ್ಯೋ
*(ದೈನ್ಯದಿಂದ ದುಃಕಿಸುತ್ತಾನೆ.)*

*(ಹೊರಗೆ ಬಾಗಿಲು ತಟ್ಟಿದ ಸದ್ದಾಗುತ್ತದೆ.)*
ಯಾರಲ್ಲಿ?

**ಸೇವಕ:** - *(ಪ್ರವೇಶಿಸಿ ಅವಸರದಿಂದ ಹೇಳುತ್ತಾನೆ)*
ಮದನ ಒಡೆಯರು ಅಟ್ಟಿರುವ ಕಿಂಕರಂತೆ!
ಸಮಯವನೆ ಕಾಯುತಿಹರು.

**ದುಷ್ಟಬುದ್ಧಿ:** - ಬರಹೇಳು.*(ಸ್ವಗತ)* ನಾನೊರೆದ ಗುಪ್ತಕಾರ್ಯದಲಿ
ವಿಜಯಿಯಾಗಿಹನೊ? ಇಲ್ಲದಿರೆ, ಮತ್ತೆ,
ಮತಿಗೇಡಿತನವನೆ ಮೆರೆದಿಹನೊ?
*(ಕಿಂಕರರಿಬ್ಬರು ಪ್ರವೇಶಿಸಿ ನೆಲಮುಟ್ಟಿ ನಮಸ್ಕರಿಸಿ ಕೈಮುಗಿದು ಬಾಗಿ ನಿಲ್ಲುತ್ತಾರೆ. ದುಷ್ಟಬುದ್ಧಿ ಪ್ರಶ್ನದೃಷ್ಟಿಯಾಗಿ ಅವರನ್ನು ದುರುದುರನೆ ನೋಡುತ್ತಾನೆ. ಅವನ ದೃಷ್ಟಿರೋಷಕ್ಕೆ ಆಳುಕಿ ಮಾತನಾಡಲಂಜಿದ್ದ ಕಿಂಕರರ ಮೇಲೆ ರೇಗಿ, ನೆಲಕ್ಕೆ ಕಾಲು ಕುಟ್ಟಿ)*
ಮೂಕರೇನ್ ನೀವು? ಏಕಿಂತು ಕೆಮ್ಮನೆಯೆ
ನಿಂತಿಹಿರಿ, ಬೆಪ್ಪುಗಳೆ?

**೧ನೆಯ ಕಿಂಕರ:** - *(ಬೆಚ್ಚಿ ಬೆದರಿ ತೊದಲುತ್ತಾನೆ.)*
ನಾವು... ತಮ್ಮ... ನಾವು... ಸನ್ನಿಧಿಗೆ...

**ದುಷ್ಟಬುದ್ಧಿ:** - ಏನದು? ಬೊಗಳೊ ಬೇಗದಿಂ!

**೨ನೆಯ ಕಿಂಕರ:** - ಮದನ ಒಡೆಯರು ಅವಸರವನರುಹಿ
ನಮ್ಮನಿಲ್ಲಿಗೆ ಕಳುಹಿದರು ತಮ್ಮ ಸನ್ನಿಧಿಗೆ.

**ದುಷ್ಟಬುದ್ಧಿ:** - ಏನೆಂದು?

**೨ನೆಯ ಕಿಂಕರ:** - ಗಾಲವರ ಬುದ್ಧಿಯಂ ಕೇಳ್ದು, ಕುಂತಳೇಂದ್ರಂ
ಚಂದ್ರಹಾಸ ಪ್ರಭುಗೆ ತನ್ನ ಕುವರಿಯಂ
ಗಾಂಧರ್ವ ವೈವಾಹ ವಿಧಿಯಿಂ
ರಾಜ್ಯಸಹಿತಂ ಧಾರೆಯೆರೆದಿತ್ತು, ತಾಂ
ಸಕಲ ಸೌಭಾಗ್ಯಮಂ ತ್ಯಜಿಸಿ
ಯೋಗಸಿದ್ಧಿಯಂ ಪಡೆಯೆ
ವನವಾಸಕುದ್ಯೋಗಿಸಿದನೆಂದು.

*[ದುಷ್ಟಬುದ್ಧಿಯ ಕಣ್ಣುಗಳೂ ಮುಖಭಂಗಿಯೂ ಕಿಂಕರನ ಒಂದೊಂದು ಮಾತಿಗೂ ಅಚ್ಚರಿ ಮುನಿಸು ಜುಗುಪ್ಸೆ ಮೊದ ಲಾದ ಭಾವಗಳಿಂದ ವಿಕೃತವಾಗುತ್ತಾ ಹೋಗುತ್ತಾವೆ.]*

**ದುಷ್ಟಬುದ್ಧಿ:** - ನಿಜವನೊರೆವೆಯೊ? ನಿನ್ನ ಮರಣನಾಂದಿಯಂ
ಪಾಡುತಿರುವೆಯೊ? ಒರಲೊ, ಪಿಶಾಚಿ! *(ಗರ್ಜಿಸುತ್ತಾನೆ)*

**೨ನೆಯ ಕಿಂಕರ:** -
*(ಮೆಲ್ಲಗೆ ಹಿಂದಕ್ಕೆ ಸರಿದು ಮರೆಯಾದ ಮೊದಲನೆಯ ಕಿಂಕರನನ್ನು ಗಮನಿಸದರೂ ಗಮನಿಸಲೊಲ್ಲದವನಂತೆ)*
ಒಡೆಯ, ಕುಮಾರರು ಒರೆದುದನೆ ನಾನೊರೆದಿಹೆನು.
ನನ್ನದೆಂಬುದು ಒಂದಿನಿತೂ ಇಲ್ಲ.

**ದುಷ್ಟಬುದ್ಧಿ:** - *(ವ್ಯಂಗ್ಯಧ್ವನಿಯಿಂದ)*
ಎಲ್ಲಿಹನೊ? ಕುಮಾರನೆಲ್ಲಿಹನೊ? ಅರಸಂಗೆ
ನೆರವಾಗುತಿಹನೇಂ, ಚಂದ್ರಹಾಸಂಗೆ
ಪಟ್ಟಾಭಿಷೇಕೋತ್ಸವಂ ಗೆಯ್ವ ಸಂಭ್ರಮದಿ?...
*(ತನಗೆ ತಾನೆಂಬಂತೆ)*
ಮೂಢ! ಮೂಢ! ಮೂಢ!...
ನಾನಿರ್ದೊಡಂ ಸತ್ತನೆಂದೆಯೆ ತಿಳಿದರೇನಾ
ದ್ರೋಹಿಗಳ್? ವಿದ್ರೋಹಿಗಳ್!
ಬಲಿಗೊಳ್ಳದಿರಳು ನನ್ನ ಕೋಪಕಾಳಿ
ಆ ನೀಚರ್ಕಳೆಲ್ಲರಂ!

**೨ನೆಯ ಕಿಂಕರ:** - ಅಹುದುಹುದು ಜೀಯ,
ಮದನ ಕುಮಾರರಾ ಕಾಳಿಯನೆ ಪೂಜೆಗೈಯಲ್ಕೆ
ತೆರಳಿದರು ಊರ ಹೊರಗಣ ಚಂಡಿಕಾಲಯಕೆ.

**ದುಷ್ಟಬುದ್ಧಿ:** - *(ದಿಗ್ ಭ್ರಾಂತನಾಗಿ)*
ಆಂ! ಆಂ! ಏನೆಂದೆ?

**೨ನೆಯ ಕಿಂಕರ:** - ಕುಮಾರರಾ ಚಂಡಿಕಾಲಯಕೆ ತೆರಳಿದರು.

**ದುಷ್ಟಬುದ್ಧಿ:** - ಚಂದ್ರಹಾಸನೆ?

**೧ನೆಯ ಕಿಂಕರ:** - ಅಲ್ಲ; ಮದನ ಕುಮಾರರು!
ಪೂಜೆಗಾಗಿಯೆ ಹೋಗುತಿದ್ದಾ ಚಂದ್ರಹಾಸಪ್ರಭುವಂ
ದಾರಿಯಲಿ ಸಂಧಿಸಿ,ಕುಮಾರರವರಂ
ರಾಜಕಾರಣವರುಹಿ ಕಳುಹಿದರು ದೊರೆಯೆಡೆಗೆ.

**ದುಷ್ಟಬುದ್ಧಿ:** - ಕುಲಾಚಾರಮಂ ಮೀರಿದನೆ ಪಾಪಿ?

**೧ನೆಯ ಕಿಂಕರ:** - ಕುಲವ್ರತವ ಪಾಲಿಸಲೆಂದೆ ಅಳಿಯಂದಿರ ಕೈಲಿದ್ದ
ಪೂಜಾಸಾಮಗ್ರಿಯಂ ತಾವೆ ಕೈಗೊಂಡು
ಚಂಡಿಕಾಲಯಕೆ ತೆರಳಿದರು, ನಮ್ಮನಿಲ್ಲಿಗೆ ಕಳುಹಿ.

**ದುಷ್ಟಬುದ್ಧಿ:** - *(ಹಮ್ಮಯಿಸಿ, ಸುಯ್ದು, ತತ್ತರಿಸಿ, ರೋದನಧ್ವನಿಯಿಂದ)*
ಸಾಕು! ಸಾಕು! ಸಾಕು!
ತೊಲಗು! ತೊಲಗು! ತೊಲಗು!
ನೀ ದೂತನಲ್ಲ, ಯಮನ ಭೂತ!
ನಿಲಬೇಡ, ಕಣ್ಣೆದುರು ನಿಲಬೇಡ,
ಓ ವಿಧಿಯ ವಿಕಟ ಪರಿಹಾಸ್ಯರೂಪೀ, ಪಾಪೀ,
ತೊಲಗೋ ಇಲ್ಲಿಂದ!
*(ಕಿಂಕರನು ಭಯಗ್ರಸ್ತನಾಗಿ ಹಿಂಜರಿದು ಮರೆಯಾಗುತ್ತಾನೆ)*
ಅಯೋ! ಅಯೋ! ಅಯೋ!...
ನಮ್ಮುಪಾಯಮೆ ತಂದುದೆ ನಮಗಪಾಯಮಂ?
ಓ ವಿಧಿ, ಏಕಿಂತು ಮೂದಲಿಸುತಿರುವೆ?
ಇನ್ನೇನಂ ಕಾಯ್ದಿಟ್ಟಿರುವೆ ನೀನೆನಗೆ?...
ಕಜ್ಜ ಮೀರುವ ಮುನ್ನಮೆ ಉಜ್ಜುಗಂಗೆಯ್ಯದಿರೆ...
ಅಯೋ ಅಯೋ ಅಯೋ
ನೆನೆಯಲಾರೆ! ನೆನೆಯಲಾರೆ!
ನೆನೆಯಾಲಾರೆ, ನಡೆವ ಆ ಘೋರಮಂ!...
ಇದೊಮ್ಮಿಂಗೆ ಕ್ಷಮಿಸಿ ನನ್ನಂ
ಪೊರೆಯಲಾರೆಯ ನನ್ನ ಕಂದನಂ, ಓ ನನ್ನ ದುರ್ವಿಧಿ?
ತೋರೆನಗೆ ದಾರಿಯಂ
ಆ ಚಂಡಿಕಾಲಯಕೆ ತೋರೆನಗೆ ದಾರಿಯಂ;
ಬೇಗ! ಬೇಗ!
*(ದಿಕ್ಕು ತಪ್ಪಿದವನಂತೆ ಅತ್ತ ಇತ್ತ ತತ್ತರಿಸಿ ಓಡಾಡುತ್ತಾನೆ)*

ಕಾಲುಗಳೆ ಸೋಲುತಿಹವಲ್ಲಾ!
ಓಡೋಡಿ ಕೇಡಂ ತಡೆಯಬೇಕಾಗಿರುವ
ಈವೊಳ್ತಿನಲ್ಲಿ? ಕಣ್ಗೆ ಕತ್ತಲ್ಗಟ್ಟುತಿಹುದಲ್ಲಾ!
ಅಯ್ಯೋ! ಅಯ್ಯೋ! ಮದನಾ! ಮದನಾ!
ನಿಲ್ಲು, ನಿಲ್ಲು! ಬಂದೆ, ಬಂದೆ!... ನಿನ್ನ ತಂದೆ!
*[ತತ್ತರಿಸುತ್ತಾ ಓಡುತ್ತಾನೆ]*

*ಪರದೆ ಬೀಳುತ್ತದೆ.*

*

## ಆದಿರಂಗಂ-ದೃಶ್ಯ ೮,೯

<u>**ದೃಶ್ಯ೮**</u>

*[ದಟ್ಟವಾದ ಅರಣ್ಯದ ಮಧ್ಯೆ ಹಸುರು ಹಬಬಿದ ಒಂದು ಕಿರುದಿಬ್ಬದ ಮೇಲೆ ಬಾಲಕ ಚಂದ್ರಹಾಸನು ನಿದ್ರಿಸುವನೆಂಬಂತೆ ಮಲಗಿದ್ದಾನೆ. ಕತ್ತರಿಸಿದ ಕಾಲ್ಬೆರಳಿನಿಂದ ನೆತ್ತರು ಸೋರಿ ಅಲ್ಲಲ್ಲಿ ಕೆಂಪಾಗಿದೆ. ಅವನ ಮೈಮೇಲೆಯೂ ಹಾರಿದ ರಕ್ತದ ಕಲೆಗಳಿವೆ. ಮೂವರು ದಿವ್ಯ ಛಾಯಾಮಮೂರ್ತಿಗಳಾದ ದೇವಿಯರು ಬಾಲಕನ ಕನಸಿನಲ್ಲಿ ಎಂಬಂತೆ ಕಾಣಿಸಿಕೊಳ್ಳುತ್ತಾರೆ. ಅವನ ಸುತ್ತಲೂ ನೃತ್ಯವಿನ್ಯಾಸದಲ್ಲಿ ಸುಳಿಯುತ್ತಾರೆ. ತಮ್ಮ ಪುಷ್ಪಸದೃಶ ಕೈಗಳಿಂದ ಅವನ ಮೇಲೆ ತಮ್ಮ ರಕ್ಷಣಾಶಕ್ತಿಯನ್ನು ಪ್ರೋಕ್ಷಿಸುತ್ತಾರೆ.]*

**ಮೊದಲನೆಯ ದೇವಿ:** - ಪೃಥಿವಿಯೆದೆಯಿಂದುದಿಸಿ ಏರಿ
ಭಗವನ್ತನಡಿಯರಸಿ ಹಾರಿ
ಬಂದೆ ನಾ ಪ್ರಾರ್ಥನಾದೇವಿ!

**ಎರಡನೆಯ ದೇವಿ:** - ಭಗವಂತನಡಿಯಿಂದೆ ಹೊಮ್ಮಿ
ಪೃಥಿವಿಯೆದೆಗವತರಿಸೆ ಚಿಮ್ಮಿ
ಇಳಿದೆನೈ ನಾ ಕೃಪಾದೇವಿ!

**ಮೂರನೆಯ ದೇವಿ:** - ಲೋಕವನು ನಾಕಕ್ಕೆ ಬೆಸೆಯೆ
ನಾಕವನು ಲೋಕಕ್ಕೆ ಹೊಸೆಯೆ
ಐತಂದೆ ನಾ ಭಕ್ತಿದೇವಿ!
*[ಹಾಡುತ್ತಾ ಹಾಡುತ್ತ ಅದೃಶ್ಯವಾಗುತ್ತಾರೆ.]*

**ಚಂದ್ರಹಾಸ:** - *(ಮೆಲ್ಲಮೆಲ್ಲಗೆ ಎಚ್ಚತ್ತು ಕುಳಿತು ಸುತ್ತಲೂ ಬೆಬ್ಬಳಿಸಿ ನೋಡಿ)*
ಏಗಳುಂ ನನಗೆ ಕನಸಿನಲಿ ಕಾಣುವಾ
ಮೂವರಾ ದಿವ್ಯಮೂರ್ತಿಗಳೆಲ್ಲಿ?
ಇಂಪಾಗಿ ಉಲಿದೆನ್ನ ಸಂತೈಸಿದರ್;
ನೆತ್ತರ್ ಸೋರ್ವ ಗಾಯಕ್ಕೆ ಮದ್ದಿಕ್ಕಿ
ನೋವನಾರಿಸಿದರ್!...ಅಜ್ಜೀ, ಓ ನನ್ನಜ್ಜೀ, *(ಅಳುತ್ತಾನೆ.)*
ನೀ ಕಲಿಸಿದಾ ಶ್ರೀಹರಿಯ ನೆನೆಯುವೆನ್.
*[ಮೆಲ್ಲನೆಯೆ ಕೀರ್ತನೆ ತೊಡಗುತ್ತಾನೆ]*
ಗೋವಿಂದ ಶ್ರೀಹರಿ ಮುಕುಂದ ಮುರಾರಿ!
ಗೋವಿಂದ ಶ್ರೀಹರಿ ಮುಕುಂದ ಮುರಾರಿ!
ಗೋವಿಂದ ಶ್ರೀಹರಿ ಮುಕುಂದ ಮುರಾರಿ!
ಗೋವಿಂದ ಶ್ರೀಹರಿ ಮುಕುಂದ ಮುರಾರಿ...!
*[ಬೇಟೆಯ ಉಡುಪಿನ ಕುಳಿಂದಕನು ಬಿಲ್ಪಿಡಿದು ಹುಡುಕುನೋಟ ಬೀರುತ್ತಾ ಪ್ರವೇಶಿಸುತ್ತಾನೆ.]*

**ಕುಳಿಂದಕ:** - ಕನಸಿನ ಕುರಂಗದದಿ ಮಾಯವಾಯ್ತಲಾ
ಆ ಮಿಗುಂ! ಎಲ್ಲಿಯಾದರೂ ಅಡಗಿದೆಯೊ ಇಲ್ಲಿ?...
ಅಃ ಏನಿದು? ಆರೊ ಹಾಡಿಹರಿಲ್ಲಿ ಇಂಚರದಿ!*(ಆಲಿಸಿ)*
'ಗೋವಿಂದ ಶ್ರೀಹರಿ ಮುಕುಂದ ಮುರಾರಿ!'
ಈ ದಟ್ಟ ಪಳುವದಲಿ ಮುಕುಂದನಂ ಕರೆವರಾರ್?
ಪಸುಳೆಗೊರಲಿಂ ಪೊಣ್ಮಿದಂತಿಹುದು ಶ್ರೀಹರಿಯ ನಾಮಂ,

*[ಆಲಿಸುತ್ತಾ ಮುಂಬರಿದು, ನೋಡಿ, ಕಂಡು]*
ಆವನೀ ಸುಕುಮಾರನಿಲ್ಲಿ ಕುಳಿತುಲಿದಿಹನ್?
ಅಯ್ಯೊ ನೆತ್ತರ್ ಮಯಂ ಮೆಯ್ಯೆಲ್ಲ! ನನ್ನ ಆ
ಜಿಂಕೆಗೆಚ್ಚಾ ಬಾಣಮೇನಾದೊಡಂ ಈ
ಬಾಲಕನ ಮೆಯ್ಗೆ ತಗುಲಿದುದೊ? ಶ್ರೀಹರೀ!
ಶ್ರೀಹರೀ! ಕಾಪಾಡು, ಕಾಪಾಡು! ಮಗೂ! ಮಗೂ!...
*[ಓಡಿ ಚಂದ್ರಹಾಸನ ಪಕ್ಕದಲ್ಲಿ ಕುಳಿತು ಮೈದಡವಿ ಸಂತೈಸಿ]*
ಏನಾದುದಯ್ ನಿನಗೆ ಕಂದ? ಏಕೆ ಈ ನೆತ್ತರ್?
ಆರವನ್? ಎಲ್ಲಿಯನ್? ಇಲ್ಲಿಗೆಂತೈತಂದೆ?
ಬಾಣಮೆಚ್ಚುದೆ ನಿನಗೆ? ಶ್ರೀಹರಿ! ಶ್ರೀಹರಿ!

**ಚಂದ್ರಹಾಸ:** - ಬಾಣಮಲ್ತು. ಕಾಲ್ ವೆರಲ್! *(ತೋರುತ್ತಾನೆ.)*

**ಕುಳಿಂದಕ:** - ಇದೇನ್? ಕೊಯ್ದಿಹುದು ಕಾಲ್ ಬೆರಳ್!
ಆರ ಕಜ್ಜಮಿದು, ಪೇಳ್, ಕುಮಾರ?

**ಚಂದ್ರಹಾಸ:** - ಅಜ್ಜಿಯೊಡನಿದ್ದೆನ್ನನ್
ಕಾರೊಡಲ ಚಂಡಾಲರೆಳೆತಂದು
ಕೊಲುವ ಯತ್ನವಮಾಡಿ, ಕಜ್ಜ ಕೈಗೂಡದಿರೆ,
ಕಾಲ್ಬೆರಳ ಕೊಯ್ದು ಕೊಂಡೋಡಿದರು!

**ಕುಳಿಂದಕ:** - ಎಲ್ಲಿಂದ ತಂದರ್ ನಿನ್ನನ್?

**ಚಂದ್ರಹಾಸ:** - ಅಜ್ಜಿಯೆಡೆಯಿಂ.

**ಕುಳಿಂದಕ:** - ಅವ ಊರಿಂದೆ? ಆವ ಪೆಸರ್?

**ಚಂದ್ರಹಾಸ:** - ನಾನರಿಯೆ, ಬಹುದೂರದಿಂ.

**ಕುಳಿಂದಕ:** - ನೀನಾರವಂ, ಕಂದ?

**ಚಂದ್ರಹಾಸ:** - ಶ್ರೀಹರಿಯವಂ, ಅಜ್ಜಿ ಪೇಳ್ದಂದದಿಂ.

**ಕುಳಿಂದಕ:** - ನಿನ್ನ ಪಿತನಾರು?

**ಚಂದ್ರಹಾಸ:** - ಶ್ರೀಹರಿ.

**ಕುಳಿಂದಕ:** - ಊರ ಪೆಸರಂ ಪೇಳಲಾರೆಯಾ?

**ಚಂದ್ರಹಾಸ:** - ಶ್ರೀಹರಿಯೆ ನನ್ನೂರು.

**ಕುಳಿಂದಕ:** - ಇರಲಿ, ಮಗು. ನಿನ್ನ ಬೆರಳಂ ತೊಳೆದು ಮರ್ದಿಕ್ಕುವೆನ್
*[ಸಗ್ಗಳೆಯ ನೀರಿಂದೆ ತೊಳೆಯುತ್ತಾನೆ.]*

**ಚಂದ್ರಹಾಸ:** - ಅಯ್ಯೋ ನೋವೊ!

**ಕುಳಿಂದಕ:** - ಹೆದರದಿರು, ಬಾಲಕನೆ. ನಿನ್ನ ನೆಮ್ಮೂರಿಂಗೆ
ಒಯ್ದು, ಶುಶ್ರೂಷೆಗೆಯ್ದು, ಸಲಹುವೆನ್.

ನಾನುಂ ನಿನ್ನ ಶ್ರೀಹರಿಯ ಕಿಂಕರಂ!
*[ಸೊಂಟದಲ್ಲಿ ನೇತಾಡುತ್ತಿದ್ದ ತುತ್ತೂರಿಯನು ಬಾಯ್ಗಿಟ್ಟು ಊದುತ್ತಾನೆ. ತನ್ನ ಧನ್ಯತೆಗೆ ಹರ್ಷಿಸಿ ತನಗೆ ತಾನೆ ಹೇಳಿಕೊಳ್ಳುತ್ತಾನೆ.]*
ನೋಡಿದರೆ ರಾಜಪುತ್ರನ ತೆರದಿ ತೇಜಸ್ವಿ;
ಶ್ರೀಹರಿಯ ದಿವ್ಯಪುತ್ರನೆ ದಿಟಂ ಎಂಬಂತೆ
ರಾಜಿಪನು. ನೆನೆಯುತಿಹನಾತನನೆ ಸಂಕಟದ
ಈ ಸಮಯದಲಿ... ಎನ್ನ ಪುಣ್ಯದ್ರುಮಂ
ಫಲಿಸಿತಿಂದು. ಮೇಧಾವಿನಿಯ ಬಂಜೆತನಮಿಂದು
ಪೋದತ್ತು. ಸಫಲಮಾಯ್ತಾಕೆಯ ಮಹಾವ್ರತಂ.
ಕತ್ತಲೆಯ ಮನೆಗಿಂದು ಮಣಿದೀಪವಾಯಿತ್ತು;
ಬತ್ತಿದ ಸರೋವರಕೆ ನವಜಲಮೊದವಿದತ್ತು;
ಸಂತಾನಮಿಲ್ಲದ ಕುಳಿಂದಕನ ಬಾಳ್ಗತ್ತಲೆಗೆ
ಆದುದುತ್ತಮ ಕುಮಾರೋದಯಂ! ಮುಕುಂದ ಕೃಪೆ!
ಮೃಗಯಾವ್ಯಸನದಿಂದೆ ಕಾನನಕೆ ಬಂದು ನಾಂ
ಕೃಷ್ಣಮೃಗಮಂ ಅಟ್ಟಿ ಬೆಂಬತ್ತಿದೊಡೆ
ದೊರೆಕೊಂಡನೀ ಕೃಷ್ಣಮೃಗಬಾವದರ್ಭಕಂ.
ಶ್ರೀಹರಿ, ನಿನ್ನೀ ಕೃಪಾಲೀಲೆಯನರಿವರಾರು?
*[ಪುಳಿಂದರ ಒಂದು ಗುಂಪು ಬರುತ್ತದೆ.]*

**೧ನೆಯ ಪುಳಿಂದ:** - ಎತ್ತಣಿಂದಾಲಿಸಿದೆಯೋ ತುತ್ತೂರಿಯನ್?

**೨ನೆಯ ಪುಳಿಂದ:** - ಇತ್ತಣಿಂದೆಯೆ.

**೩ನೆಯ ಪುಳಿಂದ:** - ನಮ್ಮ ದೊರೆಗ ಪಾಯಂ ಒದಗಿದುದೊ?

**ಕುಳಿಂದಕ:** - ಪುಳಿಂದರಿರಾ! *(ಕರೆಯುತ್ತಾನೆ)*

**೪ನೆಯ ಪುಳಿಂದ:** - ಓವೊ ಇಲ್ಲಿಹನ್! ಇಲ್ಲಿಹನ್!

**೨ನೆಯ ಪುಳಿಂದ:** - ಕಾಣಿಲ್ಲಿ! ಕಾಣಿಲ್ಲಿ!
*[ಮುದ್ದು ಸೂಸಿ ಚಂದ್ರಹಾಸನೆಡೆಗೆ ಓಡುತ್ತಾನೆ.]*

**ಕುಳಿಂದಕ:** - ದೂರ ನಿಲ್, ಪುಳಿಂದ. ಅಂಜುವನ್ ಸುಕುಮಾರನ್.

**೧ನೆಯ ಪುಳಿಂದ:** - ಏನ್ ಚಂದ ಈ ಸಿಸು!

**೩ನೆಯ ಪುಳಿಂದ:** -  ದೇವಲೋಕದ ಕಂದ!

**೪ನೆಯ ಪುಳಿಂದ:** - ನಮ್ಮ ದೊರೆ ನಂದವನಕ್ಕೆ ಬೇಂಟೆವೋಗಿ
ತಂದಿರ್ಪನೀ ಕಂದರ್ಪನಂದನನ್!

**ಕುಳಿಂದಕ:** - *(ನಗುತ್ತಾ)* ನೀನ್ ಪುಳಿಂದಕವಿಯಲ್ತೆ?
ಸನ್ಮಾನಿಸುವೆನ್. ಅದಿರಲಿ. ನೀನಿಗ ಚಂದನಾವತಿಗೆ
ಮುಂದೋಡಿ ಈ ಮಂಗಳದ ಸುದ್ದಿಯಂ
ಪುರಕೆಲ್ಲ ಸಾರು. ಮಾರಾಣಿಗಿದನರುಹು.
ದೊರೆಗಾದ ಪುತ್ರೋತ್ಸವಕೆ ಪಸುರ್ದೋರಣಂಕಟ್ಟಿ
ಪಟ್ಟಣವ ಸಿಂಗರಿಸಿ
ಪ್ರಜೆಗಳೆಲ್ಲರ್ ಸಂತಸದೊಳೋಲಾಡಲಿ!
*[೪ನೆಯ ಪುಳಿಂದನೂ ಮತ್ತೊಬ್ಬನೂ 'ಅಪ್ಪಣೆ" ಎಂದು ಹೊರಡುತ್ತಾರೆ.]*
ಬೇಂಟೆಯಾಡಿದ ಮೃಗಂಗಳಂ ನೀಮೆ ಪಸುಗೆಗೊಂಡು
ಹಬ್ಬಮಂ ಮಾಡಿ ಉಣಿ, ಬೇಡರಿರ.

**೨ನೆಯ ಪುಳಿಂದ:** - ಅಯ್ಯೊ ಕಾಣಿಲಿ; ಗಾಯಗೊಂಡಿದೆ ಬೆರಳ್!

**ಕುಳಿಂದಕ:** - ಚಂಡಾಲರೀ ತರಳನಡಿವೆರಳ ಕೊಯ್ದಿಹರು.
ನೋವ ಸೈರಿಸಲಾರದಳುತಿಹನು.

**೩ನೆಯ ಪುಳಿಂದ:** - ಬಲ್ಲೆನಾಂ
ಮರ್ದ್ದನೊಂದನ್. ಈಗಳೆಯೆ ತಂದಪೆನ್.
*[ಎಂದು ಓಡುತ್ತಾನೆ.]*

**ಕುಳಿಂದಕ:** - *(೧ನೆಯ ಪುಳಿಂದನಿಗೆ)*
ನೀನಿವನನ್ ಹೆಗಲ ಮೇಲೇರಿಸಿಕೊ.
*[ಚಂದ್ರಹಾಸನನ್ನು ಎಚ್ಚರಿಕೆಯಿಂದ ಎತ್ತಿ ಕೂರಿಸುತ್ತಾನೆ.]*
ಕಾಡಿನಿಂದಾಚೆ ಹೆದ್ದಾರಿಯಲಿ ನಿಲ್ಲಿಸಿಹ
ನನ್ನ ತೇರ್ಗವನನೊಯ್.
*(ಒಂದನೆಯ ಪುಳಿಂದನನ್ನು ಹಿಂಬಾಲಿಸಿ ಪುಳಿಂದರೆಲ್ಲ ಹೊರಡುತ್ತಾರೆ.)*
ಮೇಧಾವಿನಿಯ ಪುಣ್ಯದಿಂದೆಂತಪ್ಪ ಬೇಂಟೆ

ದೊರೆತುದಿಂದು! ಮೇರೆದಪ್ಪುವ ಸುಖಕೆ
ಮುಚ್ಚಿವೋಪಳೊ ಏನೊ ಕಂದನಂ ಕಂಡು?
ಕಂದನನವಳ್ ಕಾಣ್ಬ ಮುನ್ನಮೆ ನಾನ್
ಕಾಣವೇಳ್ಕಾಕೆಯನ್. ಧನ್ಯನಾಂ, ಧನ್ಯೆ ತಾಂ,
ಧನ್ಯಮೆಮ್ಮೀ ನಾಡು! ಧನ್ಯಮೀ ಕಾಡೂ,
ಶ್ರೀಹರಿಯಕಂದನಂ ನನಗಿತ್ತ ಸಗ್ಗವೀಡು!
*[ಹೊರಡುಲುದ್ಯುಕ್ತನಾಗುತ್ತಾನೆ.]*

*ಪರದೆ ಬೀಳುತ್ತದೆ*

*

<u>**ದೃಶ್ಯ ೬**</u>

*[ಚಂದನಾವತಿಯ ರಾಜಬೀದಿ. ಪಂಡಿತರಿಬ್ಬರು ದಾನದಕ್ಷಿಣೆಯ ಭಾರಕ್ಕೆ ಕುಸಿದು, ಬಾಗಿ ಹೊರಲಾರದೆ ಹೊತ್ತು ಕೊಂಡು ಬರುತ್ತಾರೆ. ಉಸ್ಸೆಂದು ನಿಲ್ಲುತ್ತಾರೆ. ಬೆವರು ಒರೆಸಿಕೊಳ್ಳುತ್ತಾರೆ.]*

**೧ನೆಯ ಪಂಡಿತ:** – ದಾನವೂ ಬಾರವಾದುದು ನನಗೆ ಇದೆ ಮೊದಲ್.
ಆನೆಯನೆ ಕೊಟ್ಟರೂ ದಾನವೆಂದರೆ ನನಗೆ
ಬಲು ಹಗುರವೆಂದು ಹೆಗಲೊಳೆ ಹೊತ್ತು ತಹೆನಲ್ತೆ!

**೨ನೆಯ ಪಂಡಿತ:** – ಇರಲಿ. ಈಗ ಒಂದಿನಿತು ಹೊರೆ ಇಳುಹಿ,
ಆಮೇಲೆ ಆನೆಯನೆ ಹೊರುವಿರಂತೆ!
*[ಇಬ್ಬರೂ ಹೊರೆಗಳನಿಳುಹಿ ನೆಟ್ಟಗೆ ನಿಂತು ಸುಧಾರಿಸಿಕೊಳ್ಳುತ್ತಾರೆ]*

**೧ನೆಯ ಪಂಡಿತ:** – ಈ ಪರಿಯ ದಾನಧರ್ಮಗಳಂ ಹಿಂದಾರೂ
ಮಾಡಿಲ್ಲ. ಮುಂದಾರು ಮಾಡುವರೊ ನಾನರಿಯೆ!

**೨ನೆಯ ಪಂಡಿತ:** – ಬೆಳ್ಗೊಡೆಯನೊಂದುಳಿದು ಮತ್ತೆಲ್ಲವಂ ಕೊಟ್ಟರ್
ಎಂದೆನೆಗೆ ಹೇಳಿದರು. ಚೆಲ್ಲಿದರು ವಿತ್ತಮಂ
ಕೋಶವೇ ಬರಿದಾಗುವನ್ನೆಗಂ.

**೧ನೆಯ ಪಂಡಿತ:** – ಬಿಡು, ಬಿಡು;
ಏನ್ ಮಾತು ನಿನ್ನದು? ದೊರೆಗೆ ದೊರೆಕೊಂಡ ಆ

ಪುಣ್ಯಶಿಶುಮಹಿಮೆಯಿಂ ಅರಮನೆಯ ಅಂಗಳಕೆ
ಹೊನ್ನಮಳೆ ಸುರಿದುದಂತೆ! ಬಡಜನರು
ಹೊರಲಾರದಲ್ಲಲ್ಲಿ ಚೆಲ್ಲುತ್ತ ಹೋದುದಂ
ನಾನೆ ಕಣ್ಣಾರೆ ಕಂಡೆನ್; ನನ್ನಾಣೆ!

**೨ನೆಯ ಪಂಡಿತ:** - ಈ ರಾಜ್ಯದಲ್ಲಿನ್ನು ಹೆಣ್ಣ ನಡುವಲ್ಲದೆಯೆ
ಬಡತನಕೆ ಬೇರೆ ಆಶ್ರಯವಿರದು! ಏನೆಂಬೆ?

**೧ನೆಯ ಪಂಡಿತ:** - ನಿನ್ನ ಪಾಂಡಿತ್ಯಕೆಲ್ಲಿಂದಮೈತಂದುದೀ
ರಸಿಕತ್ವಂ? ಆ ಶಿಶುಮಹಿಮೆಯೆ ಇರಲ್ವೇಳ್ಕುಂ!
ಶುಷ್ಕಮುಂ ರಸಮಯಂ ತಾನಾದುದಕೆ ನೀನೆ
ಪರಮಂ ನಿದರ್ಶನಂ!

**೨ನೆಯ ಪಂಡಿತ:** - ಆತನಾ ಮಹಿಮೆಯಿಂ
ಕುಂಟರಿಗೆ ಕಾಲ್ ಬಂದುದಂತೆ; ಕುರುಡರಿಗೆ
ಕಣ್ ಬಂದುದಂತೆ; ಮೂಕರಿಗೆ ಬಾಯ್ ಬಂದು
ಗಳಪತೊಡಗಿದರಂತೆ. ವೈದ್ಯರಿಂ, ಮರ್ದ್ದಿನಿಂ,
ಮಂತ್ರದಿಂ ಗುಣವಡೆಯದಿರ್ದ್ದ ರುಜೆಗಳವೆನಿತೊ
ಗುಣವಾದುವಂತೆ.*(ತುಸು ನಕ್ಕು ನಾಚಿದಂತೆ ಮಾಡಿ)*
ಇನ್ನೆನಗೆ ನವಯೌವನಂ ಬಂದು
ರಸಿಕತೆಯ ಬುಗ್ಗೆಯುಕ್ಕುವುದೊಂದು ಅಚ್ಚರಿಯೆ?

**೧ನೆಯ ಪಂಡಿತ:** - ಹರಿಭಕ್ತರಿದ್ದೆಡೆಯೊಳೇನಾಗದಿಹುದೊ!
*[ಎದುರಾಗಿ ಮತ್ತೊಬ್ಬ ಪಂಡಿತ ಬರುತ್ತಾನೆ.]*

**೩ನೆಯ ಪಂಡಿತ:** - ಏನಿಲ್ಲಿ ನಿಂತುಬಿಟ್ಟಿರಿ ಮೂಟೆಗಳನಿಳುಹಿ
ನಡುಬೀದಿಯಲ್ಲಿ?

**೨ನೆಯ ಪಂಡಿತ:** - ಏನು, ಶಾಸ್ತ್ರಿಗಳೆ,
ಹೀಗೆನ್ನುವಿರಿ? ದೇಶದಲ್ಲಿರಲಿಲ್ಲವೇನು ತಾವು?
ದೊರೆಗಿಂದು ದಿವ್ಯಪುತ್ರೋತ್ಸವಂ!

**೩ನೆಯ ಪಂಡಿತ:** - ಮಗನ ಹೆತ್ತಳೆ ಮೇಧಾವಿ?

**೧ನೆಯ ಪಂಡಿತ:** - ಇನ್ನೇನು? ಹೆತ್ತಂತೆಯೆ! ನಮ್ಮರಸು
ಬೇಂಟೆಯ ಬಿನದಕೆಳಸಿ ಕಾನನಕೆ ಹೋಗಿರಲು
ಮುರಹರನನಲ್ಲದೆ ಇನ್ನಾರನೂ ನೆನೆಯದಿಹ
ಮುದ್ದು ಮಗುವೊಂದು ದೊರಕಿದುದು. ಆ ಶಿಶುಗೆ
ನಾಮಕರಣಂಗೆಯ್ಯೆ ಹೋಗಿದ್ದೆವರಮನೆಗೆ.

**೩ನೆಯ ಪಂಡಿತ:** - ಓಹೊ, ಹೆಸರಿಡಲೆ? ಏನೊ ಹೆಸರು?

**೨ನೆಯ ಪಂಡಿತ:** - ಚಂದ್ರಹಾಸ!

**೩ನೆಯ ಪಂಡಿತ:** - ಬಲು ಸೊಗಸು!  ಬಲು ಸೊಗಸು!

**೧ನೆಯ ಪಂಡಿತ:** - ಬರಿಯ ಅಂಕಿತನಾಮವಲ್ತು!

**೨ನೆಯ ಪಂಡಿತ:** - ಹೆಸರಿನ ಹಿರಿಮೆ ಉಸಿರಿಗನ್ವಯ! ತಿಳಿಯಿತೆ?

**೧ನೆಯ ಪಂಡಿತ:** - ಪಾಂಡಿತ್ಯವಾರಿಧಿಯ ಮಥನದಿಂದುದ್ಭವಿಸಿ
ಬಂದ ನವನೀತವದು!

**೩ನೆಯ ಪಂಡಿತ:** - ಅನ್ವರ್ಥವೆಂತೊ? ತಿಳಿಯಲೆಳಸುವೆನು.
*[೧ನೆಯ ಮತ್ತು ೨ನೆಯ ಪಂಡಿತರು ರಾಗವಾಗಿ ಹಾಡಿಯೆ ವಿವರಿಸುತ್ತಾರೆ.]*

**೧ನೆಯ ಪಂಡಿತ:** - ನಿರ್ಮಲಮುಖಾಂಬುಜದೊಳಿಂದುವಂ ಕಳಕಳಿಸಿ
ನಗುವನದರಿಂ.... ಚಂದ್ರಹಾಸನ್!

**೩ನೆಯ ಪಂಡಿತ:** - ಭಲಾ! ಭಲಾ!

**೨ನೆಯ ಪಂಡಿತ:** - ಪಸುಳೆತನದಿಂದೆ ವೃದ್ಧಾಪ್ಯದನ್ನೆಗಂ
ಬಿಸಜನಾಭನ ಭಕ್ತಿ ದೊರೆಕೊಳದ ಮನುಜರಂ
ನಸುನಗುವ ಧವಳದೊಳ್ಪಿಂ... ಚಂದ್ರಹಾಸನ್!

**೩ನೆಯ ಪಂಡಿತ:** - ಭಲಾ! ಭಲಾ! ಭಲಾ! ಬಾಪ್ಪುರೇ!

**೧ನೆಯ ಪಂಡಿತ:** - ಪಸರಿಸುವ ಜಸದ ಬೆಳ್ಪಿಂ... ಚಂದ್ರಹಾಸನ್!

**೧ನೆಯ ಪಂಡಿತ:** - ಅಸಮನ್. ಅಕ್ಷೀಣನ್, ಅಕಳಂಕನ್, ಅತಿಶಾಂತನ್
ಎಂಬೆಸೆವ ಸದ್ಗುಣಗಳೇಳ್ಗೆಯಿಂ… ಚಂದ್ರಹಾಸನ್!

**೩ನೆಯ ಪಂಡಿತ:** - ಘೇ! ಉಘೇ! ಭಲಾ! ಬಾಪ್ಪುರೇ!

**೧ನೆಯ ಪಂಡಿತ:** - ಮಂಜು ಮಹಿಮಾಸ್ಪದಂ,

**೨ನೆಯ ಪಂಡಿತ:** - ಮಂಜು ಮಹಿಮಾಸ್ಪದಂ,
*[೩ನೆಯ ಪಂಡಿತ ಮೆಚ್ಚಿ ಮೆಚ್ಚಿ ತಲೆದೂಗುತ್ತಿರುತ್ತಾನೆ.]*

**೧ನೆಯ ಪಂಡಿತ:** - ಚಾರು ವೃತ್ತಂ,

**೨ನೆಯ ಪಂಡಿತ:** - ಚಾರುವೃತ್ತಂ,

**೧ನೆಯ ಪಂಡಿತ:** - ಕಲಾಪುಂಜಂ,

**೨ನೆಯ ಪಂಡಿತ:** - *(೩ನೆಯ ಪಂಡಿತನಿಗೆ)* ಅರ್ಥವಾಯಿತು ತಾನೆ, ದ್ವಂದ್ವಾರ್ಥ?

**೩ನೆಯ ಪಂಡಿತ:** - ವ್ಯರ್ಥವಾದೀತೆ ತಮ್ಮ ಅಲಂಕಾರ?
ಈ ಆಲಂಕಾರರಿಕನ ಮುಂದೆ?…. ಮುಂದೆ?

**೧ನೆಯ ಪಂಡಿತ:** - ಸ ದಾನ ಭೋಗಂ,

**೨ನೆಯ ಪಂಡಿತ:** - ಸದಾ ನಭೋ ಗಂ,
*[ಮೂರನೆಯ ಪಂಡಿತ ತಲೆದೂಗುತ್ತಾನೆ]*

**೧ನೆಯ ಪಂಡಿತ:** - ಕುವಲಯ ಪ್ರಿಯಂ,

**೨ನೆಯ ಪಂಡಿತ:** - ಕುವಲಯ ಅಂದರೆ ಭೂಮಿ, ಮತ್ತು ಕೈರವ, ನೈದಿಲೆ.

**೩ನೆಯ ಪಂಡಿತ:** - ನಾನೇನು ವಿದ್ಯಾರ್ಥಿಯೆ, ತಮ್ಮ ಪ್ರವಚನಕ್ಕೆ?

**೨ನೆಯ ಪಂಡಿತ:** - ಉಂಟೆ? ಉಂಟೆ? ಉಂಟೆ? ತಪ್ಪಾಯ್ತು!

**೧ನೆಯ ಪಂಡಿತ:** - ರಂಜಿಸುವ ರಾಜನ್ ಎನ್ನವೊಲಾದೊಡಂ
ಮಿತ್ರ ತೇಜಕಳವಳಿದು,
ಪಗೆಯ ಭಂಜನೆಗೆ ಸಿಲ್ಕಿ,
ಬಡತನವಪ್ಪಿ, ಕಂದಿ,
ಪಳಿವಂ ಜಗವರಿಯೆ ಪೊತ್ತನ್ ಎಂದು
ಅಮೃತಾರ್ಚಿಯಂ ಜರೆದು ನಗುವನ್
ಅದರಿಂ ಚಂದ್ರಹಾಸನಿವನ್!

**೩ನೆಯ ಪಂಡಿತ:** - ಸತ್ತೆ, ಸತ್ತೆ, ಸತ್ತೆ, ಪಂಡಿತರೆ!
ನವನೀತಮಂ ಸವಿದು ಹೊಡೆ ಸಿಡಿದು ಹೋಯ್ತು!
ಅಲ್ಲಿ ನೋಡಿ: ಏಕೊ ಪುರ ನಿವಾಸಿಗಳ್
ಗುಂಪೆದ್ದು ಬರುತಿಹರ್!

**೧ನೆಯ ಪಂಡಿತ:** - ಪ್ರಮಾದವಾದೀತು! ಬೇಗಬನ್ನಿ!
*[೧ನೆಯ ಮತ್ತು ೨ನೆಯ ಪಂಡಿತರು ಗಂಟುಮೂಟೆ ಎತ್ತಿ ಹೊತ್ತುಕೊಂಡು ಓಡುತ್ತಲೆ ಹೋಗುತ್ತಾರೆ. ೩ನೆಯವನು ಅವರು ಹೋಗುವುದನ್ನ ನೋಡಿ ನಗುತ್ತಾ, ತಿರುಗಿ ಎದುರು ದಿಕ್ಕಿಗೆ ಹೋಗುತ್ತಾನೆ. ನಾಲ್ಕು ಜನರು ಬರುತ್ತಾರೆ.]*

**ಒಂದನೆಯವನು:** - ಪುಣ್ಯಾತ್ಮನಪ್ಪಾ! ಬಹುಕಾಲ ಬಾಳಲಿ!
ಕಣ್ಣಿಲ್ಲದೀ ಪಾಪಿಗೆ ಕಣ್ ಕೊಟ್ಟನಪ್ಪಾ!
ಬೆಳಕೆಂದರೇನೆಂದು ಇಂದು ನಾ ಕಂಡೆ.
*[ಸುತ್ತಲೂ ನೋಡುತ್ತಾ ಸುಯ್ಯುತ್ತಾ ಹರ್ಷಿಸುತ್ತಾ]*
ಅಃ ಎಂತಪ್ಪ ಲೋಕವಿದು! ಏನಂದ! ಏನ್ ಚಂದ!
ಇದುವರೆಗೆ ಬರಿಯ ಹೆಸರಾಗಿರ್ದುದೀ ಎಲ್ಲ:
ಈ ಆಗಸ, ಈ ಮುಗಿಲು, ಈ  ಹಸುರು, ಈ ಮರ,
ಈ ಹಕ್ಕಿ, ಈ ಹೂವು, ಈ ಕೆಂಪು, ಈ ಬಿಳಿ,
*[ಜೊತೆಯಿದ್ದ ಮೂವರನ್ನು ಮೆಚ್ಚಿ ಮುಟ್ಟುತ್ತ]*
ಈ ನೀನು, ಈ ನೀನು, ಈ ನೀನು!...
ಏನದ್ಭುತ ಈ ಎಲ್ಲ! ಏನದ್ಭುತ ನೀವೆಲ್ಲ!...
ಕಣ್ಣಿರುವ ನಿಮಗೆ ಕಣ್ಣ ಧನ್ಯತೆಯ ತಿಳಿಯದಲ್ಲಾ!

**ಎರಡನೆಯವನು:** - ಬರಿಯ ಕಣ್ಣಿದ್ದರೇನು ಭಾಗ್ಯವಯ್ಯಾ?
ಹನ್ನೆರಡು ವರ್ಷಗಳಿಂದ ನರಳಿದೆನಯ್ಯಾ
ಆ ಭಯಂಕರ ರೋಗದಿಂದ! ವೈದ್ಯರಾಯ್ತು,

ಮದ್ದಾಯ್ತು, ಮಂತ್ರವಾಯ್ತು; ದಾನ, ಧರ್ಮ,
ತೀರ್ಥಯಾತ್ರೆ, ಎಲ್ಲ ಆಯ್ತು.
ಏನಾದರೂ ವಾಸಿಯಾಗಲಿಲ್ಲ.
ಇನ್ನೆನು ನೇಣೊಂದೆ ಉಳಿದಿತ್ತು.
ಮಾರಾಯ ಅವನು ನಮ್ಮಿಳೆಗೆ ಕಾಲಿಟ್ಟ ದಿನವೆ
ಎಲ್ಲ ಗುಣವಾಗಿ ಅರೋಗ ದೃಢಕಾಯನಾದೆ.
ಸಾವಿರ ವರ್ಷ ಬಾಳಲಿ!
ಎಂದೆಂದೂ ನಮ್ಮಿಳೆಯನಾಳಲಿ!
ಪುಣ್ಯಾತ್ಮ!

**ಮೂರನೆಯವನು:** - ಕಾಲಿರದೆ ಬೀದಿಯಲಿ ಹೊರಳುತ್ತಿದ್ದೆನಯ್ಯಾ.
ನೋಡೀಗ ನನ್ನ! ಬೆಟ್ಟವನು ಬೇಕಾದರೂ
ನಗುನಗುತ ಏರುವೆನು; ಕಂದಕವ ನೆಗೆಯುವೆನು.
ಕೋಟೆಕೊತ್ತಲಗಳನು ಲಗ್ಗೆ ಹತ್ತುವೆನು!
ನಾನಿನ್ನು ಸೈನ್ಯಕ್ಕೆ ಸೇರಿ, ನಮ್ಮೊಡೆಯನಿಗೆ
ಸೇವೆ ಸಲ್ಲಿಸಿ ಬಾಳ ತೇಯುವೆನು.

**ನಾಲ್ಕನೆಯವನು:** - ಮೂಕನಾಗಿದ್ದೆ. ಇನ್ನೇನು? ಸಂಗೀತವನೆ
ಕಲಿತು ಆಸ್ಥಾನದಲಿ ವಿದ್ವಾಂಸನಾಗುವೆನು.

**ಎಲ್ಲರೂ:** - ಜಯವಕ್ಕೆ ಚಂದ್ರಹಾಸಂಗೆ! *(ಎಂದು ಹೊರಡುತ್ತಾರೆ.)*
*[ಸೆರೆಮನೆಯಿಂದ ಬಿಡುಗಡೆಯಾದ ಇಬ್ಬರು ಬರುತ್ತಾರೆ.]*

**೧ನೆಯವನು:** - ಕೊರಳಾಣೆ, ನನ್ನಾಣೆ, ನಿನ್ನಾಣೆ!
ನಿಜವಾಗಿಯೂ ನಾನಲ್ಲವಪ್ಪಾ ಕದ್ದವನು.
ಸುಮ್ಮನೆ ಸೆರೆಮನೆಯಲಿಟ್ಟಿದ್ದರಯ್ಯಾ.
ಇಂದೆಲ್ಲರನು ಬಿಡುಗಡೆ ಮಾಡಿದರು.

**೨ನೆಯವನು:** - ಬ್ರಹ್ಮಹತ್ಯೆ ಗೋಹತ್ಯೆ ಮಾಡಿದವರನ್ನೂ?

**೧ನೆಯವನು:** - ಇದೇನು ಹೀಗೆಂದು ಕೇಳುವೆಯಲ್ಲಾ?
ಇನ್ನು ಮುಂದೆ ನಾಡಿನ ಸೆರೆಮನೆಗಳನ್ನೆಲ್ಲ
ಮುಚ್ಚುವರಂತೆ.

**೨ನೆಯವನು:** - ಕಳ್ಳರಿಗೆ ಕೊಲೆಪಾತಕರಿಗೆ ಗತಿ?

**೧ನೆಯವನು:** - ಆ ಪುಣ್ಯಾತ್ಮನೀ ನಾಡಿಗೆ ಕಾಲಿಡಲು
ಹುಲಿಯಾದಿಯಾಗಿ ಕೋಳ್ಮಿಗಗಳೂ
ಸಾಧುವಾದುವಂತೆ! ಇಂತಿರಲು
ಕಳವು ಕೊಲೆಗಳಿಗೆಲ್ಲಿ ಕತ್ತಲೆ, ಬೆಳಕಿರಲು ಮುಂದೆ?

**೨ನೆಯವನು:** - ಬಾ, ಭಾವ. ಗುಡಿಗೆ ಹೋಗಿ, ಶ್ರೀಹರಿಗೆ
ಹಣ್ಣು ಹೂ ಮುಡಿಪನೊಪ್ಪಿಸಿ, ಮನೆಗೆ ಹೋಗೋಣ.
ನೀನೆಂದು ಸೆರೆಯಿಂದ ಹಿಂದಿರುಗಿ ಬರುವೆಯೋ
ಎಂದು ಉಣದೆಯೆ ಉಡದೆ ಕೊರಗಿಹಳು ಅಕ್ಕ.
ಇಂದು ಅವಳಿಗೆ ಜೀವ ಬಂದಂತಾಗಿದೆ.
*[ತೆರಳುತ್ತಾರೆ. ಏಳೆಂಟು ಜನ ಪಟ್ಟಣಿಗರು ಜಯಘೋಷಮಾಡುತ್ತಾ ಪ್ರವೇಶಿಸುತ್ತಾರೆ.]*

**೧ನೆಯವನು:** - ಚಂದ್ರಹಾಸಂಗೆ ಜಯವಾಗಲಿ!

**ಎಲ್ಲರೂ:** - ಜಯವಾಗಲಿ! ಘೇ! ಉಘೇ!

**೨ನೆಯವನು:** - ವಿಧುಹಾಸನಿಗೆ ಜಯವಾಗಲಿ!

**ಎಲ್ಲರೂ:** - ಜಯವಾಗಲಿ! ಘೇ! ಉಘೇ!

**೩ನೆಯವನು:** - ಶಶಿಹಾಸನಿಗೆ ಸೊಗವಾಗಲಿ!

**ಎಲ್ಲರೂ:** - ಸೊಗವಾಗಲಿ! ಘೇ! ಉಘೇ!

**೪ನೆಯವನು:** - ಶ್ರೀಹರಿ ಕೃಪೆಯಾಗಲಿ!

**ಎಲ್ಲರೂ:** - ಕೃಪೆಯಾಗಲಿ! ಘೇ! ಉಘೇ!

*ಪರದೆ ಬೀಳುತ್ತದೆ*

*

# ಅಂತ್ಯರಂಗಂ-ದೃಶ್ಯ ೯,೧೦

**ದೃಶ್ಯ೯**

*[ಕಾಡಿನ ನಡುವಣ ಚಂಡಿಕಾಲಯ. ಕಗ್ಗತ್ತಲೆ ಕವಿದಿದೆ. ಕಾಳಿಕಾ ವಿಗ್ರಹದ ಮುಂದೆ ಒಂದು ಹಣತೆ ಉರಿಯುತ್ತಿದೆ. ಅದರ ನಸುಬೆಳಕಿನಲ್ಲಿ ದೇವಿಗೆ ಮುಡಿಸಿರುವ ಹೂವುಗಳೂ ಕೆಂಪುದಾಸವಾಳದ ಮಾಲೆಯೂ ಬಯಂಕರವಾಗಿವೆ. ಒಂದೆಡೆ ಜಾಗಟೆಯನ್ನು ನೇತುಹಾಕಿದ್ದಾರೆ. ಅದನ್ನು ಬಾರಿಸುವಾ ಕಿರಿಯ ಲಾಳವಿಂಡಿಗೆಯೂ ಪಕ್ಕದಲ್ಲಿದೆ. ಹೊರಗೆ ಸನ್ನಿಹಿತವಾದ ಬಿರುಮಳೆಯ ಸೂಚನೆ ಗಾಳಿಯ ಭೋರಾಟದಿಂದಲೂ ಸಿಡಿಲು ಮಿಂಚು ಗುಡುಗುಗಳ ಆರ್ಭಟದಿಂದಲೂ ರೌದ್ರವಾಗಿದೆ. ಹಣತೆಯ ಮಂದಕಾಂತಿಯಲಿ ವಿಗ್ರಹದ ಹಿಂದೆ ಅವಿತಿರುವ ಕಾಳನ ಮೋರೆಯಾಕಾರ ಆಗಾಗ ಇಣುಕುತ್ತಿರುತ್ತದೆ. ಮಾರ, ಭೀಷಣ ಇಬ್ಬರೂ ಕಗ್ಗತ್ತಲೆಯಲ್ಲಿ ಅಡಗಿ ಕಾಣುತ್ತಿಲ್ಲ.]*

**ಭೀಷಣ:** - *(ಕತ್ತಲ್ಲಲ್ಲಿ ಕಾಣಿಸದೆ, ಗಟ್ಟಿಯಾದ ಪಿಸುದನಿಯಲ್ಲಿ ಭರ್ತ್ಸನೆ ಮಾಡುವಂತೆ ಆಜ್ಞೆ ಮಾಡುತ್ತಾನೆ.)*
ಏ ಕಾಳ, ಮತ್ತೆ ಮತ್ತೆ ಹಾಗೆ ತಲೆಯಿಣುಕದಿರೊ, ಮುಟ್ಠಾಳ.

**ಮಾರ:** - *(ಕತ್ತಲೆಯ ಗರ್ಭದಿಂದಲೆ ಮತ್ತೊಂದು ದಿಕ್ಕಿನಿಂದ ಮಾತನಾಡುತ್ತಾನೆ)*
ಈ ಗುಡುಗು ಮಿಂಚು ಬೇರೆ ಮೊದಲಾಗಿದೆ. *(ಮಿಂಚು ಬೆಳಗುತ್ತದೆ.)*
ಇವತ್ತೇನು ಬರುತ್ತಾರೊ ಇಲ್ಲವೊ?

**ಕಾಳ:** - ದೂರದಲಿ ಯಾರನೊ ಕಂಡಂತಾಯಿತು, ಮಿಂಚಿನ ಬೆಳಕಿನಲ್ಲಿ.

**ಭೀಷಣ:** - ಅಡಗಿ ನಿಲ್ಲಿ! ಅಡಗಿ ನಿಲ್ಲಿ! ಏ ಕಾಳ, ಏ ಮಾರ,
ಕೆಲಸದಲಿ ಎಡವಿದಿರೊ ನಿಮಗಿಂದು ತಲೆದಂಡ! ತಿಳಿಯಿತೆ?
*[ಮೂವರೂ ಮಾತು ನಿಲ್ಲಿಸಿ ಹುದುಗುತ್ತಾರೆ. ಹೊರಗಡೆ ಗಾಳಿ ಮಿಂಚು ಗುಡುಗು ಜೋರಾಗುತ್ತದೆ. ಒಂದೆರಡು ತೋರ ಮಳೆಹನಿಗಳೂ ಬಿದ್ದ ಸದ್ದಾಗುತ್ತದೆ, ಮದನನು ವಿಗ್ರಹಕ್ಕೆ ಅಭಿಮುಖವಾದ ಬಾಗಿಲಿಂದ, ಕೈಯಲ್ಲಿ ಪೂಜಾ ಸಾಮಗ್ರಿಯಿರುವ ಹರಿವಾಣದೊಂದಿಗೆ, ಪ್ರವೇಶಿಸುತ್ತಾನೆ. ಗಾಳಿಗೆ ತಲೆಕೂದಲು ತುಸು ಕೆದರಿದಂತಿದೆ. ಸ್ವಲ್ಪ ಓಡೋಡಿ ಬಂದ ಅವಸರದ ಭಾವ ತೋರುತ್ತದೆ.]*

**ಮದನ:** - ಇದೇನಿದು? ಇದ್ದಕಿದ್ದಂತೆ ತೆಕ್ಕನೆಯೆ
ಆಕಾಲ ಮೇಘಗಳ್ ಕವಿಯುತಿವೆ ಗಗನಮಂ?
ತಿವಿಯುತಿವೆ ಮಿಂಚುಗಳ್ ಕಣ್ಗೆ ಕಾಂತಿಯ ಖಡ್ಗಮಂ!
ಗಾಳಿ, ಕಾಳಿಯೆ ಧಿಮಿ ಧಿಮಿಯೆ ತಾಂಡವಂ ಕುಣಿವಂತೆ,
ಭೋರೆಂದು ಬೀಸತೊಡಗಿದೆ, ಮರದ ಮಂಡೆಯಂ
ತಿರುಪ್ಪಿ ಮುರಿದು ಆಗಮಿಸಿದಂತಿಹುದು ದುರ್ದಿನಂ!

**ಕಾಳ:** –
*(ವಿಗ್ರಹದ ಹಿಂದೆ ಹಣತೆಯ ಮಂದಕಾಂತಿಯ ನಸುಗತ್ತಲೆಯಲ್ಲಿ ತಲೆಯಿಣುಕಿ, ಆಶ್ಚರ್ಯ ಚಕಿತನಾಗಿ ಕಣ್ಣರಳಿಸಿ, ತನ್ನಲ್ಲಿ ತಾನೆ)*
ಅಯ್ಯೊ ಏನಚ್ಚರಿ!
ಮದನ ಒಡೆಯರ ಮೊಗದ ಹೋಲಿಕೆಯೆ ಈತನದೂ?
ಇಲ್ಲದಿರೆ, ಹಣತೆ ಬೆಳಕಿನ ಮಸುಗು ಮಾಯೆಯೊ?
ಇಲ್ಲ, ಇಲ್ಲ, ಮದನ ಒಡೆಯರೆ ದಿಟ!
ಛೆ! ಛೆ! ಅಲ್ಲ, ಅಲ್ಲ, ಅಲ್ಲವೆ ಅಲ್ಲ;
ಒಬ್ಬರಂತೊಬ್ಬರಿರಬಾರದೇನು?
ಇಲ್ಲ, ಇಲ್ಲ. ದಿಟಕೂ ಮದನ ಒಡೆಯರೆ! ಹೌದು!
ಇವರನೆಲ್ಲಿಯಾದರೂ ಇರಿದು ಕೊಲ್ಲುವುದುಂಟೆ?
*[ಅನಿತರಲ್ಲಿ ಮದನನು ಹಣತೆ ಬಳಕಿಗೆ ಇನ್ನೂ ಹತ್ತಿರನಾಗಿ, ತೂಗುಹಾಕಿದ್ದ ಜಾಗಟೆ ಬಾರಿಸಲು ಪಕ್ಕದಲ್ಲಿಟ್ಟಿದ್ದ ಲಾಳವಿಂದಿಗೆಯನ್ನು ಕೈಗೆ ತೆಗೆದುಕೊಂಡು ಒಂದು ಸಾರಿ ಹೊಡೆಯುತ್ತನೆ, ನಾದ ಗುಡಿಯನೆಲ್ಲ ತುಂಬುವಂತೆ. ಎರಡನೆ ಸಾರಿ ಬಾರಿಸಲು ಕೈಯೆತ್ತುತ್ತಿದ್ದ ಹಾಗೆಯೆ]*

**ಭೀಷಣ:** – ಹೊಯ್, ಮಾರ! *(ಎಂದು ಅಬ್ಬರಿಸಿ ಕೂಗಿ, ನುಗ್ಗಿ. ಇರಿಯುತ್ತಾನೆ.)*

**ಮಾರ:** – ಇರಿ! ಕಡಿ! *(ಕತ್ತಲೆಯಿಂದ ಕೂಗು ಕೇಳಿಸುತ್ತದೆ.)*
*[ಭೀಷಣನು ಕೂಗಿ ನುಗ್ಗಿ ಇರಿದೊಡನೆ ಮದನನ ಕೈಲಿದ್ದ ಹರಿವಾಣ ಸಶಬ್ದವಾಗಿ ಕೆಳಗೆ ಬಿದ್ದು ಪೂಜಾಸಾಮಗ್ರಿ ಚೆಲ್ಲಾಪಿಲ್ಲಿಯಾಗುತ್ತದೆ. ಜಾಗಟೆ ಬಾರಿಸಲು ಎತ್ತಿದ್ದ ಲಾಳವಿಂಡಿಗೆಯಿಂದಲೆ ಭೀಷಣನ ಮೋರೆಗೆ ಬಲವಾಗಿ ಹೊಡೆಯುತ್ತಾನೆ ಕೂಗಿಕೊಳ್ಳುತ್ತಾ...]*

**ಮದನ:** – ಅಯ್ಯೊ ದುಷ್ಟರಿರಾ! *(ಎಂದು ತತ್ತರಿಸಿ)* ಶ್ರೀಹರಿ! ಶ್ರೀಹರಿ!
*[ಎಂದು ಕೆಳಗೆ ಬೀಳುತ್ತಾನೆ.]*

**ಭೀಷಣ:** – *(ಬೀಳುತ್ತಾ)* ಸತ್ತೆನಲ್ಲೋ, ಮಾರ,
ಕಾಳ! *(ಭೀಷಣನ ಕೈಲಿದ್ದ ಖಡ್ಗವೂ ಝಣತ್ಕಾರದಿಂದ ಮದನನ ಪಕ್ಕಕ್ಕೆ ಬೀಳುತ್ತದೆ.)*

**ಕಾಳ:** – *(ವಿಗ್ರಹದ ಹಿಂದಿನಿಂದ ನುಗ್ಗಿಬಂದು)* ನಿಲ್! ನಿಲ್! ನಿಲ್!
*[ಎಂದು ಇರಿಯಲು ನುಗ್ಗುತ್ತಿದ್ದ ಮಾರನನ್ನು ತಡೆಯುತ್ತಾನೆ, ಕ್ಷಣಮಾತ್ರಕೆಬಂತೆ ಮಂದಿರದ ಒಳಗೆ ನೀರವವಾಗುತ್ತದೆ. ಹೊರಗಡೆಯ ಗಾಳಿ ಮಳೆ ಗುಡುಗಿನ ಸದ್ದು ಕೇಳಿಸುತ್ತದೆ.]*

**ಮಾರ:** – *(ಕಾಳನಿಗೆ )* ಏಕೊ ನಿನಗೀ ದ್ರೋಹ, ನೀಚ?

**ಕಾಳ:** - *(ಸಂಕಟದ ದನಿಯಿಂದ)* ಅಯ್ಯೋ ಏನಾಗಿ ಹೋಯ್ತು!

**ಮಾರ:** - ಆಗುತ್ತದೆ ನಿನಗೆ, ದ್ರೋಹಿ!

**ಕಾಳ:** - *(ಕೆಳಗೆ ನೋಡುತ್ತಾ)* ಮದನ ಒಡೆಯರೊ ಇವರು!

**ಮಾರ:** - ಹುಸಿಯಾಡಬೇಡ, ಸುಳ್ಳ!
*[ಕಾಳ ವಿಗ್ರಹದ ಬಳಿಯ ಹಣತೆಯನ್ನು ತರುತ್ತಾನೆ. ಅದರ ಬೆಳಕಿನಲ್ಲಿ ರಕ್ತಮಯವಾಗಿ ಬಿದ್ದಿದ್ದ ಮಂತ್ರಿಕುಮಾರನನ್ನು ಗುರುತಿಸುತ್ತಾರೆ. ಬೇಗಬೇಗನೆ ಹಣತೆಯನ್ನು ಹಿಂದಿದ್ದಲ್ಲಿಯೆ ಇಡುತ್ತಾನೆ.)*

**ಕಾಳ:** - ಅವನಲ್ಲ ಕಣೋ, ಮಾರ. ಅಂದು ತಪ್ಪಿದಂತೆಯೆ ಅವನು ಇಂದು ತಪ್ಪಿದನಲ್ಲೋ! ಶನಿ! ನಮಗೆ ಹಿಡಿದಿರುವ ಶನಿ! ಇವರು ಮಂತ್ರಿಯ ಮಕ್ಕಳಲ್ಲವೇನೋ? ಕೆಟ್ಟೆವಲ್ಲೋ, ಮಾರ!

**ಮಾರ:** - ಎಲ್ಲಿಗಾದರೂ ಓಡಿ ತಪ್ಪಿಸಿಕೊಳ್ಳುವ, ಬಾ! ತಡೆದರೆ ತಲೆಗೇಡು!

**ಕಾಳ:** - ಭೀಷಣ?

**ಮಾರ:** - ಅವನು ಹಾಳಾಗಲಿ!
*[ಇಬ್ಬರೂ "ನಮ್ಮಮ್ಮಾ ,ಕಾಪಾಡು, ತಾಯಿ", ಎಂದು ವಿಗ್ರಹಕ್ಕೆ ಕೈಮುಗಿದು ಓಡಿಹೋಗುತ್ತಾರೆ.]*

*[ತುಸು ಹೊತ್ತಿನ ಮೇಲೆ ಮದನನು ಹೊರಳುತ್ತಾ ಏಳಲು ಪ್ರಯತ್ನಿಸಿ ಮತ್ತೆ ಬೀಳುತ್ತಾನೆ.]*

**ಮದನ:** - *(ಹೊರಳುತ್ತಾ)*
ಅಯ್ಯೊ, ತಂದೆ! ವಿಷಯೆ, ತಂಗಿ! ಚಂದ್ರಹಾಸ!
ತಪ್ಪ ಮನ್ನಿಸು, ತಾತ, ಅಪರಾಧವೆಸಗಿದೆನೆ?
ತಪ್ಪಾಯ್ತು! ಕ್ರೂರವಿದು! ಕ್ರೂರವಿದು, ಈ ಶಿಕ್ಷೆ!
ಚಂದ್ರಹಾಸನೆ, ಬಾ, ಮದನ ಕರೆವನು ನಿನ್ನ.
ಪುಣ್ಯವಂತನು ನೀನು; ಪುಣ್ಯವಂತನು ನೀನು.
ನೀನಲ್ಲ ಸಾಯುವನು: ನನಗದೇ ಶಾಂತಿ!
ಅಯ್ಯೊ ಇರಿಯುತಿದ್ದರು ನಿನ್ನನಿವರು!
ನೀನುಳಿದೆ, ಶ್ರೀಹರಿಯ ಕೃಪೆಯಿಂದೆ:
ತಂಗಿ, ನಿನ್ನ ಓಲೆಯ ಭಾಗ್ಯ ಚಿರವಾಗಲಿ!
ಓ ಚಂದ್ರಹಾಸ, ನಿನ್ನ ಭಕ್ತಿಯೆ ನಿನ್ನ ರಕ್ಷಿಸಿತು!
ಅದಕಾಗಿ ನಾ ಧನ್ಯ. ನನ್ನ ಸಾವೂ ಧನ್ಯ!

ಶ್ರೀಹರಿ! ಶ್ರೀಹರಿ! ಶ್ರೀಹರಿ! ಶ್ರೀಹರಿ!
*(ಧ್ವನಿ ಕ್ಷೀಣಿಸಿ ನಿಶ್ಯಬ್ದನಾಗುತ್ತಾನೆ)*

*[ದುಷ್ಟಬುದ್ಧಿ ಓಡೋಡಿ ಬಂದು ಏದುತ್ತಾ ನಿಲ್ಲತಾನೆ . ಉಟ್ಟಬಟ್ಟೆ ಮಳೆಯಲ್ಲಿ ತೊಪ್ಪನೆ ತೊಯ್ದಿದೆ. ಕೂದಲೆಲ್ಲ ಕೆದರಿ ತೊಯ್ದು ತೊಟ್ಟಿಕ್ಕಿ ಮುಖದ ಮೇಲೆ ಬಿದ್ದಿದೆ. ಉಟ್ಟ ವಸನ ಅಸ್ತವ್ಯಸ್ತ. ಅಲ್ಲಲ್ಲಿ ಎಡವಿ ಬಿದ್ದುದರಿಂದಲೆಂಬಂತೆ ಮೈಗೆ ಬಟ್ಟೆಗೆ ಕೆಸರು ಮೆತ್ತಿದೆ. ಬುದ್ಧಿಗೆಟ್ಟವನಂತೆ ಉನ್ಮಾದವೇರಿದವನಂತೆ ಹೆಗ್ಗಣ್ಣಾಗಿ ಮುಖ ವಿಕಾರವಾಗಿದೆ.]*

**ದುಷ್ಟಬುದ್ಧಿ:** - ಬೇಡ! ಬೇಡ! ಚಂಡಾಲರಿರ, ಬೇಡ!
ನಿಮಗೇನು ಬೇಕಾದರೂ ನೀಡುವೆನು: ಬೇಡ!
ಎನ್ನ ಮಗನನ್ನುಳುಹಿ! ನಿಮ್ಮ ಅವಿಧೇಯತೆಗೆ
ಇಂದು ನಿಮಗೀಯುವೆನು ಅನರ್ಘ್ಯಬಹುಮಾನಮಂ!
ಮದನಾ! ಮದನಾ! ಓ ಮದನಾ, ಎಲ್ಲಿರುವೆ?
ಎಲೆ ಘೋರತಿಮಿರವೇ, ಒಂದು ನಿಮಿಷಕೆ ಮಾತ್ರ
ಹಿಂದೆ ಸರಿ; ಬೆಳಕ ಬಿಡು.ಹೊಳೆದು ನಿಲ್ಲಲ್ಲೆ, ಮಿಂಚೆ:
ತೋರೆನ್ನ ಮದನನಂ *(ಮೋರೆಯ ಮೇಲೆ ಬಿದ್ದಿದ್ದ ಕೂದಲನ್ನು ಹಿಂದಕ್ಕೆ ಸರಿಸಿ,*
*ಕಣ್ಣಿನ ಮೇಲೆ ಸೋರುತ್ತಿದ್ದ ನೀರನ್ನು ಒರೆಸಿಕೊಂಡು ಸುತ್ತಲೂ ನೋಡಿ ಒಂದು ಹೆಜ್ಜೆ*
*ಮುಂಬರಿದು ಬೆಚ್ಚಿ, ಕಾಲಿಗೇನೊ ಸಿಕ್ಕಿದುದರಿಂದ, ಕೆಳಗೆ ನೋಡುತ್ತಾನೆ.)*
ಏನಿದು? ಓ ಹಾಳು ಹಣತೆಯ ಸೊಡರೆ,
ಏನ ತೋರುತಿಹೆ? ಏನಿದು ಕೆಸರು? ನೆತ್ತರ್ಗೆಸರ್!
ಆರಿಲ್ಲಿ? ಮದನ? ಅಯ್ಯೊ ನನ್ನ ಮದನ! *(ಚೀರುತ್ತಾನೆ)*
*(ಪಕ್ಕದಲ್ಲಿ ಬಿದ್ದಿದ್ದ ಖಡ್ಗವನ್ನೆಡವಿ ಮದನನ ಮೇಲೆ ಬೀಳುತ್ತಾನೆ)*
ಮದನ! ಮದನ! ಮದನ! *(ಅರ್ಧ ಎದ್ದು ಮೊಳಕಾಲೂರಿ)*
ನೀಚರಿರಾ, ನೀಚರಿರಾ, ಓ ನೀಚರಿರಾ,
ನಿಮ್ಮ ಕಣ್ಣಿಂಗಿಹೋಗಿತ್ತೆ? ಗುರುತಿಸದೆ ಹೋದಿರಾ
ದಿನದಿನವು ಸಾಕಿ ಸಲುಹಿದ ನಿಮ್ಮ ಈ ಒಡೆಯನಂ?
ಓ ಮಿಂಚೆ, ಬೆಳಗದಿರು ಈ ಘೋರಮಂ;
ನಿಲ್ಲಿ, ಓ ಮಳೆಗಾಳಿ ಮೊಳಗುಗಳೆ, ನಿಲ್ಲಿ,
ಆಲಿಸಲಿ ಲೋಕವೆಲ್ಲಂ ಪಾಪಿಯೀ ಗೋಳಾಟವಂ.
ಕತ್ತಲೆಯೆ ಕವಿ, ಮುತ್ತು; ಮನಕೆ ಮರೆಹವನೊತ್ತು.
ಪರಮಾತ್ಮ , ಕ್ಷಮಿಸೆನ್ನ... ಬೇಡ, ಮನ್ನಿಸಬೇಡ!...
ನರಕವೇ, ಬಾಯಿತೆರೆ! ನುಂಗೆನ್ನ ಜೀವಮಂ!
ನಿನಗಿಂತಲೂ ಘೋರತರವೀ ಘೋರಭೂತಲಂ!
ಓ ಚಂದ್ರಹಾಸ, ಓ ವಿಷಯೆ, ಪಾಪಿಯಂ ಕ್ಷಮಿಸಿ.

ಮತ್ಸರದಿ ಬಾಳುವವರು, ಕರುಬುವವರು,
ಆತ್ಯಾಶೆ ಮಾಡುವವರೆಲ್ಲ ಬಂದೆನ್ನ ನೋಡಿ...
ಮನ್ನಿಪೆನು, ಮದನ. ಓ ಏಳು, ಮೇಲೇಳು.
ನಿನಗಾಗಿ ಬಾಳಿದೆನ್, ನಿನಗಾಗಿ ಆಳಿದೆನ್,
ನಿನಗಾಗಿ ರಕ್ತದೀ ನರಕದಲಿ ಮುಳುಗಿಹೆನ್.
ಬಾಳೆಂಬುದಿದು ಬಿದಿಯ ಮೂದಲಿಕೆ. ಓ ಬಾಳೆ,
ನಿನ್ನ ಬಲೆಗೊಳಗಾಗುವೀ ಜೀವನಿಗೆ ಮರುಳಲ್ತೆ?
ಮದನನೊಡಲಿಂದಿಳಿಯುತಿಹ ಬಿಸುನೆತ್ತರೇ,
ಕಂಪಿಸಳೆ ಭೂತಾಯಿ ನಿನ್ನ ಸೋಂಕಿಂದೆ?
ಸರ್ವವಿಧ್ವಂಸನಂಗೆಯ್ಯಬಾರದೆ - ಪ್ರಕಂಪಿಸಿ!
ಓ ಗಾಲವಾ, ಬಾ ಇಲ್ಲಿ, ನಿನ್ನ ಮುದ್ದಿನ ಶಿಷ್ಯನ್
ಏನಾಗಿಹನು, ನೋಡು! ನಿನ್ನ ಮಂತ್ರದಿ ಶಕ್ತಿ
ಇರೆ ಇವನನೆಚ್ಚರಿಸು. ಕುಂತಳೇಂದ್ರನೆ ಬಾಃ
ಮದನನೇಳುವ ತೆರದಿ ಆಣತಿಯ ನೀಡು!
ಹೇ ದುಷ್ಟಬುದ್ಧಿ, ನಿನ್ನ ಮಂತ್ರಿಯ ಯುಕ್ತಿ
ಈಗೆಲ್ಲಿ? ತೋರು! ತಾರಕಾಕ್ಷಿಯೆ, ಬಾ,
ತಾಯಿಯೊಲ್ಮೆಯ ಬಲದಿ ನಿನ್ನ ಮುದ್ದಿನ ಮಗುವ
ಎಚ್ಚರಿಸು!... ಕ್ರೂರಪರಿಹಾಸ್ಯವೀ ಭೂಮಿ;
ಕ್ರೂರಪರಿಹಾಸ್ಯವೀ ಬಾಳು; ಕ್ರೂರರೊಳ್
ಕ್ರೂರಿ ಆ ಪರಮಾತ್ಮನೆಂಬುವಂ! ಕ್ರೂರವಿಧಿ,
ನಿನ್ನ ಕ್ರೌರ್ಯದ ಮುಂದೆ ನನ್ನದೊರ್ ಸೀರ್ಪುಲ್!
ಮಗನ ಒಡಲನು ಇರಿದ ಕೂರಸಿಯೆ, ಬಾ ಇಲ್ಲಿ,
ತಂದೆಯ ಎದೆಯ ನೆತ್ತರ್ಸವಿದು ಕರುಣೆಯಿಂ ಬಾಳ್!
*(ಮದನನ ಪಕ್ಕದಲ್ಲಿ ಬಿದ್ದಿದ್ದ ಖಡ್ಗವನ್ನೆತ್ತಿಕೊಳ್ಳುತ್ತಾನೆ)*
ಓ ನರಕ, ಬಾಯಿ ತೆರೆ, ಹಿಂದೆಂದೂ ನಿನ್ನೆಡೆಗೆ
ಬಂದಿರದ ನರನೊಬ್ಬನಿಂದು ಬರುತಿಹನು!
ಬೆದರದಿರು! *(ದೇವಿಯ ವಿಗ್ರಹದ ಕಡೆ ಉಗ್ರವಾಗಿ ನೋಡಿ)*
ಓ ಕಾಳಿ, ಕರಾಳಿ,
ನೀನು ತಾಮಸ ದೇವತೆ,
ನನಗಿಂತಲೂ ಕೇಡಿ!
ಪಡೆವೆನೇನಂ ನಿನ್ನಂ ಬೇಡಿ?

ಕೊಳ್ ನನ್ನನುಂ ಬಲಿಯ ಮಾಡಿ!
*[ಖಡ್ಗದಿಂದ ಇರಿದುಕೊಂಡು ಸಾಯುತ್ತಾನೆ.]*

*[ಗುಡಿಯ ಒಳಗಿನ ಕತ್ತಲೆ ಕಡಮೆಯಾಗುತ್ತಾ, ಹೊರಗಡೆಯ ಮಳೆ ಗಾಲಿಯ ಸದ್ದು ನಿಂತಂತಾಗಿ, ಯಾರೊ ಬರುತ್ತಿರುವವರ ಬೇಗದ ಸದ್ದು ಕೇಳಿಸಿ, ದೀವಿಗೆ ಹಿಡಿದವರೊಡನೆ ಚಂದ್ರಹಾಸ, ಗಾಲವ, ವೀರಸೇನ, ರಣಸಿಂಹ ಬೇಗ ಬೇಗನೆ ಬರುತ್ತಾರೆ. ಬೆರಗು ಬಡಿದು ದಿಟ್ಟಿಸುತ್ತಾರೆ.]*

**ಗಾಲವ:** – ಶಶಿಹಾಸ, ಮಿಂಚಿಹೋಯಿತು ಕಾರ್ಯ: ಮುಂದಾಗಿ
ಬರಲಿಲ್ಲ ನಾವು.

**ಚಂದ್ರಹಾಸ:** – *(ಮುಖದಲಿ ಅಸಹಾಯಕತೆ, ಸಂಕಟ ತೋರಿ ಬಿಸುಸುಯ್ದು)*
ಶ್ರೀಹರಿ! ಶ್ರೀಕೃಷ್ಣ!...
ತಳುವಿ ಕಳುಹಿದಲ್ತೆ ವಿಷಯೆ ವಿಷವಾರ್ತೆಯಂ?
ಮೊದಲೆ ಬಂದಿದ್ದರದು ಮಥಿಸುತಿತ್ತಮೃತಮಂ!

**ರಣಸಿಂಹ:** – ಗಾಲವರೆ, ಇದರರ್ಥವೇನು?

**ಗಾಲವ:** – ನಾನರಿಯೆ. ಶ್ರೀಹರಿಯೆ ಬಲ್ಲ.

**ಭೀಷಣ:** – *(ಮೂರ್ಛೆ ತಿಳಿದು ಕೂಗುತ್ತಾನೆ)*

ಅಯ್ಯೊ, ಮಾರ! ಕಾಳ!

**ವೀರಸೇನ:** – ಇವನಾರೊ ಬದುಕಿಹನು!
ಕ್ರೂರ ಕಾರ್ಯಕೆ ಬಂದ ಚಂಡಾಲನಿರಬೇಕು.

**ಗಾಲವ:** – *(ನೋಡಿ ಬೆರಗಾಗಿ ತನ್ನಲ್ಲಿಯೆ)*
ಭೀಷಣ! *(ಬಹಿರಂಗವಾಗಿ )* ಭೀಷಣಾ!

**ಭೀಷಣ:** – ಸಾಯುತಿಹೆ! ಅಯ್ಯೋ ನೀರು!

**ಗಾಲವ:** – ಬೀಷಣ, ಇದೇನು?

**ಭೀಷಣ:** - ಎಲ್ಲ ಹೇಳುವೆನೊಡೆಯಾ ! ನೀರು! ನೀರು!
*(ರಣಸಿಂಹನು ನೀರು ಕುಡಿಸುತ್ತಾನೆ)*
ಮಂತ್ರಿವರ್ಯರ ಅಜ್ಞೆಯಂತೆ ಕೊಲೆಮಾಡಿದೆವು!

**ವೀರಸೇನ:** - ಏನಂತೆ?

**ಚಂದ್ರಹಾಸ:** - ಸುಮ್ಮನಿರು ಹೇಳಲಿ.

**ಭೀಷಣ:** - *(ತಡೆದು ತಡೆದು ಉಸಿರೆಳೆಯುತ್ತಾ ಹೇಳುತ್ತಾನೆ.)*
ಕಾಳಿಕಾಲಯಕೆ... ಸಂಜೆಯಲಿ... ಪೂಜೆಗೆ... ಬರುವವನ... ಕೊಲೆಮಾಡಬೇಕೆಂದು ಬೆಸಸಿದರು... ನಾನವನನ್ ...
ಇರಿವಾಗ ಲಾಳವಿಂಡಿಗೆಯಿಂದೆನ್ನ ಹೊಡೆದನಯ್ಯೋ... ಸಾಯುವೆನು... ಸಾಯುವೆನು... ಮಾರ! ಕಾಳ!...
*(ಸಾಯುತ್ತಾನೆ)*
*[ಎಲ್ಲರೂ ಒಬ್ಬರ ಮುಖವನ್ನೊಬ್ಬರು ನೋಡುತ್ತಾರೆ. ಅರ್ಥಪೂರ್ಣವಾಗಿ].*

**ಗಾಲವ:** - ಶಶಿಹಾಸ, ಶ್ರೀಹರಿಯೆ ಕಾಪಾಡಿದನು ನಿನ್ನ!...
ಕರ್ಮಫಲ ತಪ್ಪುವುದೆ?... ದೈವವನು ಮೀರುವರೆ?... ದೇವರಿಗಿದಿರ್ವೋಗೆ
ವಂಚಕರೆ ವಂಚಿತರ್!
*(ಚಂದ್ರಹಾಸನು ಭಾವಾವೇಶದಿಂದ ದೇವಿಯ ಮೂರ್ತಿಯನ್ನೆ ಎವೆಯಿಕ್ಕದೆ ನೋಡತೊಡಗುತ್ತಾನೆ. ತೂಣಗೊಂಡ ವನಂತೆ ವಿಗ್ರಹದ ಕಡೆಗೆ ಎರಡು ಹೆಜ್ಜೆಯಿಟ್ಟು ಕೈಮುಗಿದು ನಿಲ್ಲುತ್ತಾನೆ. ಅದನ್ನು ಕಂಡು ಗಾಲವನು ಅವನನ್ನು ಬೀಳದಂತೆ ಹಿಡಿದುಕೊಳ್ಳಲೆಂಬಂತೆ ಮುಂಬರಿಯುತ್ತಾನೆ)*
ಶಶಿಹಾಸ! ಶಶಿಹಾಸ! ಜಾರದಿರು, ಜಾರದಿರು,

**ರಣಸಿಂಹ:** - *(ಗಾಲವನನ್ನು ತಡೆದು ಕಿವಿಯಲ್ಲಿ)*
ಗಾಲವರೆ, ಸುಮ್ಮನಿರಿ! ಚಂದ್ರಹಾಸನಿಗಿಂತು
ದೆವಸಾನ್ನಿಧ್ಯದಲಿ ಭಕ್ತಿಭಾವಾವೇಗದಿಂ
ಒಮ್ಮೊಮ್ಮೆ...

**ಚಂದ್ರಹಾಸ:** - *(ಸ್ವಗತ)* ತಾಯಿ, ಜಗನ್ಮಾತೆ, ಸರ್ವಶಕ್ತೆ,
ಆರ ಪಾಪಕೆ ಆರ ಬಲಿಕೋಳುವೆ?
ನನ್ನ ಭಕ್ತಿಗೆ ಶಕ್ತಿಯಿರ್ಪೊಡೆ
ನಿನ್ನ ಕೃಪೆಯಿಂ
ನನ್ನನುಳುಹಿದ ಇವನು ಬದುಕಲಿ!

**ಗಾಲವ:** - *(ರಣಸಿಂಹನಿಗೆ)*
ಏನನಾಡುತ್ತಿಹನು ? ನುಡಿ ತೊದಲಿದಂತಿಹುದು!

**ರಣಸಿಂಹ:** - ತಾಯಿಗೇನನೊ ಹೇಳುತಿರುವಂತೆ ತೋರುತಿದೆ.
*[ಚಂದ್ರಹಾಸನು ಭಾವಾವಿಷ್ಟನಾಗಿಯೆ ಮದನನ ಕಳೇಬರದ ಬಳಿಗೆ ಹೋಗಿ ಮೊಳಕಾಲೂರಿ ಕುಳಿತು, ಅವನ ಹಣೆ ಮುಟ್ಟುತ್ತಾನೆ. ಮತ್ತೆ ಗಾಲವಾದಿಗಳ ಕಡೆ ಮೊಗದಿರುಹಿ]*

**ಚಂದ್ರಹಾಸ:** - ಪುರೋಹಿತರೆ, ಮದನಗಿನ್ನೂ ಹರಣ ಹೋದಂತಿಲ್ಲ!

**ಗಾಲವ:** - *(ಬಂದು ಮುಟ್ಟಿನೋಡಿ)*
ಹೌದು, ರಕ್ತಸ್ರಾವದಿಂ ಪ್ರಜ್ಞೆ ತಪ್ಪಿಹನೆಂದೆ
ತೋರುತಿದೆ. ಮಂತ್ರೌಷಧಿಗಳಿಂ, ಭಿಷಗ್ವರರ
ವೈದ್ಯೋಪಚಾರದಿಂ ನಿಷ್ಪಾಪನೀತನಂ
ಬದುಕಿಸಲ್ ಭಗವತ್ ಕೃಪಾಶಕ್ತಿ ಸಾಧ್ಯಂ!
*[ತಕ್ಷಣ ಅಂತರಿಕ್ಷದಲ್ಲಿ ಎಂಬಂತೆ ಸುಮಧುರ ಗಾನ ಕೇಳಿಸುತ್ತದೆ. ಚಂದ್ರಹಾಸನಂತೆ ಇತರರೂ ತಲೆಯೆತ್ತಿ ಆಲಿಸುತ್ತಿರುವಂತೆಯೆ ತೆರೆ ಇಳಿಯುತ್ತದೆ.]*

*

<u>ದೃಶ್ಯ೧೦</u>

*[ಅಂತರಿಕ್ಷದಲ್ಲಿ ಮೇಘಪಂಕ್ತಿಯ ಮಧ್ಯೆ ಕಾಣಿಸಿಕೊಂಡು ಭಕ್ತಿ, ಪ್ರಾರ್ಥನಾ ಮತ್ತು ಕೃಪಾದೇವಿಯರು ಹಾಡುತ್ತಿರುತ್ತಾರೆ.]*

**ಭಕ್ತಿದೇವಿ:** - ಯಲ್ಲಬ್ಧ್ವಾ ಪುಮಾನ್ ಸಿದ್ಧೋ ಭವತಿ,

**ಪ್ರಾರ್ಥನಾದೇವಿ:** - ಅಮೃತೋ ಭವತಿ,

**ಕೃಪಾದೇವಿ:** - ತೃಪ್ತೋ ಭವತಿ!

**ಭಕ್ತಿದೇವಿ:** - ಯತ್ ಪ್ರಾಪ್ಯ ನ ಕಿಂಚಿದ್ ವಾಂಛತಿ,

**ಪ್ರಾರ್ಥನಾದೇವಿ:** - ನ ಶೋಚತಿ, ನ ದ್ವೇಷ್ಟಿ,

**ಕೃಪಾದೇವಿ:** - ನ ರಮತೇ, ನೋತ್ಸಾಹೀ ಭವತಿ!

**ಭಕ್ತಿದೇವಿ:** - ಯತ್ ಜ್ಞಾತ್ವಾ ಮತ್ತೋ ಭವತಿ

**ಪ್ರಾರ್ಥನಾದೇವಿ:** - ಸ್ತಬ್ಧೋ ಭವತಿ

**ಕೃಪಾದೇವಿ:** - ಆತ್ಮರಾಮೋ ಭವತಿ!

**ಭಕ್ತಿದೇವಿ:** - ತೀರ್ಥೀಕುರ್ವನ್ತಿ ತೀರ್ಥಾನಿ,

**ಪ್ರಾರ್ಥನಾದೇವಿ:** - ಸುಕರ್ಮೀಕುರ್ವನ್ತಿ ಕರ್ಮಾಣಿ,

**ಕೃಪಾದೇವಿ:** - ಸಚ್ಛಾಸ್ತ್ರೀಕುರ್ವನ್ತಿ ಶಾಸ್ತ್ರಾಣಿ!

**ಭಕ್ತಿದೇವಿ:** - ಮೋದಂತೇ ಪಿತರೋ,

**ಪ್ರಾರ್ಥನಾದೇವಿ:** - ನೃತ್ಯಂತಿ ದೇವತಾಃ,

**ಕೃಪಾದೇವಿ:** - ಸನಾಥಾ ಚೇಯಂ ಭೂರ್ಭವತಿ!

*[ಮೂವರೂ ಒಟ್ಟಿಗೆ ನರ್ತಿಸುತ್ತಾ ಹಾಡುತ್ತಾರೆ:*
*"ಮೋದಂತೇ ಪಿತರೋ ನೃತ್ಯಂತಿ ದೇವತಾ:*
*ಸನಾಥಾ ಚೇಯಂ ಭೂರ್ಭವತಿ!"]*

*ಪರದೆ ಬೀಳುತ್ತದೆ.*

*